ಕರ್ನಾಟಕದಲ್ಲೇ ಮೊಟ್ಟಮೊದಲ ಬಾರಿಗೆ UPSC/KAS ಪರೀಕ್ಷೆಯನ್ನು ಕನ್ನಡ

ಮಾಧ್ಯಮದಲ್ಲಿ ತಯಾರಿನಡೆಸಲು ರಚಿಸಿರುವಂತಹ ವೆಬ್ ಸೈಟ್

IAS/KAS

ನಮ್ಮ ಐಎಎಸ್ ಅಕಾಡೆಮಿ

ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

# UPSC/KAS ಪ್ರಚಲಿತ ವಿದ್ಯಮಾನಗಳ ಮಾಸಿಕ ಕೈಪಿಡಿ

## ಫೆಬ್ರವರಿ -2019

## ಭಾಗ- 1

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ

**http://www.nammaiasacademy.com**

**DOWNLOAD OUR ANDROID MOBILE APP**

**http://www.nammaiasacademy.com/download-app**

# POLITY

## 1. ಜಾಗತಿಕ ಭ್ರಷ್ಟಾಚಾರ ಸೂಚ್ಯಂಕ

### ಪ್ರಮುಖ ಸುದ್ದಿ

- 2018ರ ಜಾಗತಿಕ ಭ್ರಷ್ಟಾಚಾರ ಸೂಚ್ಯಂಕ ಶ್ರೇಣಿಯಲ್ಲಿ ಭಾರತ ಸುಧಾರಣೆ ಕಂಡಿದೆ. ಭ್ರಷ್ಟಾಚಾರ ಗ್ರಹಿಕೆ ಸೂಚ್ಯಂಕ -ಸಿಪಿಐ 2018ರ ಪ್ರಕಾರ ವಿಶ್ವದ 180 ರಾಷ್ಟ್ರಗಳ ಪಟ್ಟಿಯಲ್ಲಿ ಭಾರತ ಮೂರು ಸ್ಥಾನ ಸುಧಾರಿಸಿದ್ದು, 78ನೇ ಸ್ಥಾನಕ್ಕೇರಿದೆ.

### ಮುಖ್ಯ ಅಂಶಗಳು

- ಬರ್ಲಿನ್ ಮೂಲದ ಭ್ರಷ್ಟಾಚಾರ ವಿರೋಧಿ ಸಂಸ್ಥೆ ಟ್ರಾನ್ಸ್‌ಪರೆನ್ಸಿ ಇಂಟರ್ನ್ಯಾಷನಲ್ (Transparency International) ಬಿಡುಗಡೆಗೊಳಿಸಿರುವ ಭ್ರಷ್ಟಾಚಾರ ಸೂಚ್ಯಂಕದಲ್ಲಿ ಭಾರತ 78ನೇ ಸ್ಥಾನವನ್ನು ಪಡೆದುಕೊಂಡಿದೆ. ಟ್ರಾನ್ಸ್‌ಪರೆನ್ಸಿ ಇಂಟರ್ನ್ಯಾಷನಲ್ ಇದು ಜರ್ಮನಿಯ ಬರ್ಲಿನ್‌ನಲ್ಲಿ ನೆಲೆಗೊಂಡಿರುವ, ಲಾಭಗಳಿಕೆಯ ಉದ್ದೇಶವಿಲ್ಲದ ಒಂದು ಸರ್ಕಾರೇತರ ಸಂಸ್ಥೆ. ಜಾಗತಿಕ ಮಟ್ಟದ ಭ್ರಷ್ಟಾಚಾರದ ವಿರುದ್ಧ ಸೆಣಸುವುದು ಮತ್ತು ಅದರಿಂದ ಉದ್ಭವಿಸುವ ಅಪರಾಧಿಕ ಚಟುವಟಿಕೆಗಳನ್ನು ತಡೆಗಟ್ಟುವುದು ಇದರ ಧ್ಯೇಯ.
- ನೆರೆಯ ರಾಷ್ಟ್ರ ಚೀನಾ 87 ಹಾಗೂ ಪಾಕಿಸ್ತಾನ 117ನೇ ಸ್ಥಾನದಲ್ಲಿದೆ. ಡೆನ್ಮಾರ್ಕ್ ಹಾಗು ನ್ಯೂಜಿಲೆಂಡ್ ಈ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದ್ದರೆ ಸೊಮಾಲಿಯಾ, ಸಿರಿಯಾ ಮತ್ತು ದಕ್ಷಿಣ ಸೂಡಾನ್ ಅಂತಿಮ ಸ್ಥಾನದಲ್ಲಿವೆ.
- ಏಷ್ಯಾ ಖಂಡದ ರಾಷ್ಟ್ರಗಳ ಪೈಕಿ ಮಲೇಷ್ಯಾ 47, ಮಾಲ್ಡೀವ್ಸ್ 31 ಹಾಗೂ ಪಾಕಿಸ್ತಾನ 33ನೇ ಸ್ಥಾನದಲ್ಲಿವೆ. ಇನ್ನು ಮೊದಲ ಸ್ಥಾನದಲ್ಲಿ ಡೆನ್ಮಾರ್ಕ್, ನ್ಯೂಜಿಲ್ಯಾಂಡ್ 2ನೇ ಸ್ಥಾನದಲ್ಲಿದ್ರೆ ಅಮೆರಿಕಾ 22ನೇ ಸ್ಥಾನದಲ್ಲಿದೆ.
- ವಿಶ್ವಸಂಸ್ಥೆಯ ಅಂಕಿ ಅಂಶ, ವಿಶ್ವ ಆರ್ಥಿಕ ವೇದಿಕೆ ಹಾಗೂ ಇತರ ಸಂಸ್ಥೆಗಳ ವರದಿಗಳನ್ನು ಬಳಸಿಕೊಂಡು ಶ್ರೇಯಾಂಕ ಪಟ್ಟಿಯನ್ನು ತಯಾರಿಸಲಾಗಿದೆ. ಭ್ರಷ್ಟಾಚಾರವನ್ನು ಲೆಕ್ಕಹಾಕಲು ಸೊನ್ನೆಯಿಂದ 100 ಅಂಕಗಳ ಮಾಪನದ ಆಧಾರದ ಮೇಲೆ ದೇಶಗಳಿಗೆ ಶ್ರೇಯಾಂಕ ನೀಡಲಾಗಿದೆ. ಸೊನ್ನೆ ಸ್ಥಾನ ಪಡೆದ ರಾಷ್ಟ್ರದಲ್ಲಿ ಅತಿ ಹೆಚ್ಚು ಭ್ರಷ್ಟಾಚಾರ ಹಾಗೂ ನೂರನೇ ಸ್ಥಾನ ಪಡೆದ ದೇಶವನ್ನು ಅತಿ ಕಡಿಮೆ ಭ್ರಷ್ಟಾಚಾರ ಹೊಂದಿರುವ ದೇಶ ಎಂದು ಪರಿಗಣಿಸಲಾಗುತ್ತದೆ.

### ಭ್ರಷ್ಟಾಚಾರ ಮತ್ತು ಅಸಮಾನತೆ ಪರಸ್ಪರ ಪೂರಕವೇ ?

- ಸಂಸ್ಥೆ ಬಿಡುಗಡೆ ಮಾಡಿರುವ 2018ರ ಭ್ರಷ್ಟಾಚಾರ ಸೂಚ್ಯಂಕ ಪಟ್ಟಿಯಲ್ಲಿ, ಭ್ರಷ್ಟಾಚಾರ ಮತ್ತು ಅಸಮಾನತೆಯ ನಡುವಿನ ನಂಟು ಗಮನಾರ್ಹವಾಗಿ ಬಿಂಬಿತವಾಗಿದೆ. ಅಂದರೆ, ಭ್ರಷ್ಟಾಚಾರ, ಸಮಾಜದಲ್ಲಿ ಅಧಿಕಾರಶಕ್ತಿಯ ಹಂಚಿಕೆಯಲ್ಲಾಗಿರುವ ಅಸಮಾನತೆ ಮತ್ತು

ಸಂಪತ್ತಿನ ಹಂಚಿಕೆಯಲ್ಲಾಗಿರುವ ತಾರತಮ್ಯದಂಥ ಅಂಶಗಳ ನಡುವೆ ಒಂದು 'ವಿಷವೃತ್ತ'ವನ್ನು ಹುಟ್ಟುಹಾಕುವ ನಿಟ್ಟಿನಲ್ಲಿ ಭ್ರಷ್ಟಾಚಾರ ಮತ್ತು ಅಸಮಾನತೆ ಪರಸ್ಪರ ಪೂರಕವಾಗಿವೆ ಎಂದರ್ಥ.

## ಇವತ್ತಿನ ಭ್ರಷ್ಟಾಚಾರ ವ್ಯವಸ್ಥೆ

- **ರಾಜಕೀಯ**

  ರಾಜಕಾರಣಿಗಳ ಪಾತಕಿತನ ಒಂದು ಮುಖ್ಯವಾದ ಅಂಶ. July 2008 ರ The Washington Post, ಭಾರತದ ಪಾರ್ಲಿಮೆಂಟ್ ಸದಸ್ಯರಲ್ಲಿ ತುಂಬ ಜನ ಕೊಲೆ, ಅತ್ಯಾಚಾರ ಹಾಗು ಇನ್ನು ಇತರ ಪ್ರಕರಣಗಳಲ್ಲಿ ಬಾಗಿಗಳಾಗಿದ್ದಾರೆ ಎಂದು ವರದಿ ಸಲ್ಲಿಸಿತು. ಉತ್ತರಪ್ರದೇಶದ 2002ನೇ ಚುನಾವಣೆಗಳಲ್ಲಿ ಪೊಲೀಸ್ ಪ್ರಕರಣಗಳಲ್ಲಿ ಒಳಗೊಂಡಿರುವ ಇಬ್ಬರು ಹೆಚ್ಚು ಮತಗಳಿಸಿ ಕುರ್ಚಿ ತಮ್ಮದಾಗಿಸಿಕೊಂಡರು.

- **ಸರ್ಕಾರಿ ಅಧಿಕಾರಿಗಳು**

  ಭಾರತದಲ್ಲಿನ 50% ಗೂ ಹೆಚ್ಚು ಜನರಿಗೆ ಲಂಚ ಕೊಟ್ಟು ತಮ್ಮ ಕೆಲಸ ಕಾರ್ಯಗಳನ್ನು ಸಾಧಿಸುವ ಅಭ್ಯಾಸ ಇದೆ. ಕರ ಮತ್ತು ಲಂಚ ರಾಜ್ಯಗಳ ಎಲ್ಲೆಗಳಲ್ಲಿ ಸರ್ವಸಾಧಾರಣ. ಟ್ರಕ್ ಮತ್ತು ಲಾರಿಗಳು ವರ್ಷಕ್ಕೆ 50,00,000 ಕ್ಕೂ ಹೆಚ್ಚು ರುಪಾಯಿಗಳನ್ನು ಲಂಚವಾಗಿ ಕೊಡುತ್ತಿವೆ ಎಂದು Transparency International ವರದಿ ಮಾಡಿದೆ. ಸಿಂಗಾಪುರ್, ಹಾಂಗ್ ಕಾಂಗ್, ದಕ್ಷಿಣ ಕೊರಿಯಾ, ಜಪಾನ್, ಮಲೇಶ್ಯಾ, ತೈವಾನ್, ವಿಯಟ್ನಮ್, ಚೈನಾ, ಫಿಲಿಪೈನ್ಸ್ ಮತ್ತು ಇಂಡೋನೇಶ್ಯ ನಾಡುಗಳಲ್ಲಿ ಇರುವ ಸರ್ಕಾರಿ ಅಧಿಕಾರಿಗಳಿಗಿಂತ, ಭಾರತದ ಅಧಿಕಾರಿಗಳು ತಮ್ಮ ಕಾರ್ಯ ನಿರ್ವಹಿಸುವಲ್ಲಿ ತುಂಬಾ ನಿಧಾನ ಎಂದು ಸಮೀಕ್ಷೆ ತಿಳಿಸಿದೆ.

- ಅಧಿಕಾರಿಗಳು ಸರ್ಕಾರಿ ಸ್ವೊತ್ತುಗಳನ್ನು ತಮ್ಮದಾಗಿಸಿಕೊಂಡಿದ್ದಾರೆ. 80% ಕ್ಕೂ ಹೆಚ್ಚು ಬಡ ಜನರ ಆಹಾರ ಪದಾರ್ಥಗಳನ್ನು ಕದ್ದಿದ್ದಾರೆ.
- ಮುನ್ಸಿಪಾಲಿಟಿ ಸದಸ್ಯರು, ಸರ್ಕಾರಿ ಅಧಿಕಾರಿಗಳು, ಚುನಾವಣೆಯಲ್ಲಿ ಗೆದ್ದ ರಾಜಕಾರಣಿಗಳು, ನ್ಯಾಯಾಧಿಕಾರಿಗಳು ಮತ್ತು ರಿಯಲ್ ಎಸ್ಟೇಟ್ ಡೆವಲಪರ್ಸ್, ಭಾರತದಾದ್ಯಂತ ಸರ್ಕಾರಿ ಜಾಗಗಳನ್ನು ಅಕ್ರಮ ರೀತಿಯಲ್ಲಿ ತಮ್ಮದಾಗಿಸಿಕೊಂಡಿದ್ದಾರೆ. ಕಟ್ಟಡ ನಿರ್ಮಾಣ ಸಂಸ್ಥೆಗಳು, ರಾಜಕಾರಣಿಗಳು, ಸರ್ಕಾರಿ ಅಧಿಕಾರಿಗಳು, ನಿರ್ಮಾಣ ಸಾಮಾಗ್ರಿಗಳ ಸರಬರಾಜು ಮಾಡುವವರು, ಗುತ್ತಿಗೆದಾರರು ಎಷ್ಟೋ ಸರ್ಕಾರಿ ಟೆಂಡರ್‌ಗಳ (ಉದಾ: ರಸ್ತೆ ನಿರ್ಮಾಣ, ಫ್ಲೈ ಓವರ್, ಸರ್ಕಾರಿ ಕಟ್ಟಡ, ಇತ್ಯಾದಿ) ಮೇಲೆ ಆಡಳಿತ ನಡೆಸುತಿದ್ದಾರೆ. ದುರ್ಬಲವಾದ ನಿರ್ಮಾಣದಿಂದ ಹೆಚ್ಚು ಬಾಳಿಕೆ ಬರದೇ ಜೋರು ಮಳೆ ಅಥವ ಗಾಳಿ ಬಂದಾಗ ಕುಸಿದ ಕಟ್ಟಡಗಳು ಎಷ್ಟೋ ಇವೆ.
- ಇನ್ನು ಸರ್ಕಾರಿ ಆಸ್ಪತ್ರೆಗಳಲ್ಲಿ ಸರಿಯಾದ ಪ್ರಮಾಣದಲ್ಲಿ ಔಷಧಗಳು ಸಿಗುವುದಿಲ್ಲ. ಸಿಕ್ಕರೂ ಅವು ಕೆಲವೊಮ್ಮೆ ಅವು ನಕಲಿ ಆಗಿರುತ್ತವೆ. ರೋಗಿಯನ್ನು ಅಡ್ಮಿಟ್ ಮಾಡಿಸಬೇಕಾದರೆ ಲಂಚ ಕೊಡಬೇಕು. ವೈದ್ಯರನ್ನು ವಿಚಾರಿಸುವುದಕ್ಕೆ ಲಂಚ ಕೊಡಬೇಕು.
- ಕೆಲವು ವಿಮಾನ ನಿಲ್ದಾಣದಲ್ಲಿ (ಉದಾ: ಕೇರಳದ ತಿರುವನಂತಪುರ ವಿಮಾನ ನಿಲ್ದಾಣ) ವಿದೇಶೀ ಪ್ರವಾಸಿ ಪ್ರಯಾಣಿಕರ ಬ್ಯಾಗ್ಸ್, ಲಗ್ಗೇಜ್ಸ್ ಗಳು ಕಳೆದು ಹೋದಾಗ ಅಲ್ಲಿದ್ದ ಅಧಿಕಾರಿಗಳು

ಸಂರಕ್ಷಣೆ ಕೊಡುವುದರಲ್ಲಿ ವಿಫಲರಾಗಿದ್ದಾರೆ. ನಿಲ್ದಾಣದ ಭ್ರಷ್ಟ ಅಧಿಕಾರಿಗಳು, ಕೆಲಸಗಾರರು ಕೆಲವೊಮ್ಮೆ ಈ ರೀತಿ ಕೃತ್ಯಗಳಿಗೆ ಸಹಕಾರ ನೀಡುತ್ತಾರೆ ಅನ್ನೊ ಸುದ್ದಿ ಕೂಡ ಇದೆ.

- **ನ್ಯಾಯಾಲಯಗಳು**

ನ್ಯಾಯಧೀಶರು ಕಮ್ಮಿಯಾಗಿರುವುದರಿಂದ ತುಂಬಾ ವರ್ಷಗಳ ಕೇಸುಗಳು ಮುಗಿಯದೆ ಹಾಗೆ ಇವೆ. ಇದರಿಂದಾಗಿ, ನಿಜವಾದ ಅಪರಾಧಿ ಯಾರು ಅಂತ ಪತ್ತೆ ಹಚ್ಚುವುದರ ಒಳಗೆ, ಆ ಅಪರಾಧಿ ಇನ್ನಷ್ಟು ಅಪರಾಧಗಳನ್ನು ಮಾಡಿರುತ್ತಾನೆ. ಅದಲ್ಲದೇ ಈಗೀಗ ಕೆಲವು ನ್ಯಾಯಾಧೀಶರ ಮೇಲೂ ಭ್ರಷ್ಟಾಚಾರದ ಕರಿ ನೆರಳು ಕಾಣಿಸಿಕೊಳ್ಳುತ್ತಿರುವುದು ವಿಷಾಧದ ಸಮ್ಗತಿ.

- **ಪೊಲೀಸ್**

ಇವರ ಬಗ್ಗೆ ಹೆಚ್ಚು ಹೇಳಬೇಕಾಗಿಲ್ಲ. ಎಲ್ಲರಿಗೂ ಗೊತ್ತು. ನಿಜವಾದ ಅಪರಾಧಿಗಳನ್ನ ಪತ್ತೆ ಹಚ್ಚುವುದಕ್ಕೆ ಬದಲು, ಅಮಾಯಕ ಜನರನ್ನ ಹಿಡಿದು, ಆ ಅಪರಾಧವನ್ನ ಅವರ ತಲೆಗೆ ಕಟ್ಟಿ, ಹಿಂಸೆ ಕೊಟ್ಟು, ಆ ಕೇಸನ್ನು ಮುಚ್ಚುತ್ತಾರೆ. ಇದಕ್ಕೆ Target Achievement. ಯಾರಿಂದ? ಆ ನಿಜವಾದ ಅಪರಾಧಿಯಿಂದ .ನಿಷ್ಠಾವಂತ ಪೊಲೀಸ್ ಅಧಿಕಾರಿಗಳು ಕೂಡ ಇದಾರೆ. ಆದರೆ ಕಮ್ಮಿ.

- **ಧಾರ್ಮಿಕ ಮುಖಂಡರು**

ಇತ್ತೀಚಿಗಷ್ಟೇ ಹೊರಬಂದ ಸ್ವಾಮಿಜಿಗಳ ಪ್ರಕರಣ. ಇದು ಮೊದಲನೆಯದಲ್ಲ. ಹಿಂದೆ ಇಂತಹ ಘಟನೆಗಳು ಬಹಳಷ್ಟು ನಡೆದಿವೆ. ಇವರಿಗೆಲ್ಲ ಎಲ್ಲಿಂದ ಬರುತ್ತೆ ಅಷ್ಟೊಂದು ಹಣ? ಹೊರ ದೇಶಗಳಿಂದ ಕಳಿಸುವ ಡೊನೇಷನ್ಸ್. ಬಂದ ಹಣದಿಂದ 10%ರಷ್ಟು ಧಾರ್ಮಿಕ ಕಾರ್ಯಗಳಿಗೆ ಉಪಯೋಗಿಸಿದರೆ, ಉಳಿದುದ್ದನ್ನು ಇನ್ಯಾರಿಗೋಸ್ಕರ ಉಪಯೋಗಿಸುತ್ತಾರೋ ಗೊತ್ತಿಲ್ಲ.

- **ಈಗ ನಮ್ಮ ವಿಚಾರಕ್ಕೆ ಬರೋಣ**

Helmet ಇಲ್ಲದೆ ದ್ವಿಚಕ್ರ ಚಾಲನೆ ಮಾಡಿದರೆ fine ಕಟ್ಟಬೇಕು. ಆ ಜಾಗದಲ್ಲಿ ಲಂಚ ಕೊಡುವವರು ಯಾರು? ಪೊಲೀಸ್ ನವರು ಲಂಚ ಪಡೆಯೋ ವಿಷಯವನ್ನ ದೊಡ್ಡದಾಗಿ ಮಾತ್ನಾಡೋ ನಮಗೆ ನಮ್ಮ ತಪ್ಪಿನ ಅರಿವು ಯಾಕಿರುವುದಿಲ್ಲ?

- ರಸ್ತೆಯಲ್ಲಿ ಉಗಿಯುವುದು, ರಸ್ತೆ ಬದಿಯಲ್ಲಿ ಮೂತ್ರ ವಿಸರ್ಜನೆ ಮಾಡುವುದು, ಓಡುವ ಬಸ್ ಹತ್ತುವುದು / ಇಳಿಯುವುದು, ಕೆಂಪು ಸಿಗ್ನಲ್ ಕೊಟ್ಟಿರೋ ಸ್ಥಳದಲ್ಲಿ ಬಸ್ ನಿಂದ ಇಳಿಯುವುದು ಇದೆಲ್ಲ ತಪ್ಪು.ಲಂಚ ಪಡೆಯೋದು ಎಷ್ಟು ತಪ್ಪೋ ಅಷ್ಟೇ ತಪ್ಪು ಲಂಚ ಕೊಡೊದು.
- ವರದಕ್ಷಿಣೆ ಅನ್ನೊ ಹೆಸರಿನಲ್ಲಿ ನಡೆಯೋ Business Dealings. ಮದುವೆ ಅನ್ನೋ ಹೆಸರಿನಲ್ಲಿ ನಡೆಯೋ ವ್ಯಾಪಾರ.ವರದಕ್ಷಿಣೆ ಪಡೆಯೋದು ಎಷ್ಟು ತಪ್ಪೋ ಅಷ್ಟೇ ತಪ್ಪು ವರದಕ್ಷಿಣೆ ಕೊಡೊದು.
- ಚಿಕ್ಕ ಚಿಕ್ಕ ನಿಯಮಗಳನ್ನ ನಾವು ಪಾಲಿಸಬೇಕು. ಇಂತಹ ನಿಯಮಗಳು ಬಹಳಷ್ಟು ಇವೆ. ಆ ನಿಯಮಗಳನ್ನ ಮೀರಿದರೆ ಅದು ಕೂಡ ಭ್ರಷ್ಟಾಚಾರವೇ. ದಿನನಿತ್ಯ ಇಂತಹ ತಪ್ಪುಗಳನ್ನು ಮಾಡೊ ನಾವು ಭಾರತದ ಭ್ರಷ್ಟಾಚಾರದ ಬಗ್ಗೆ ಚಿಂತಿಯೋದು ನ್ಯಾಯನ?

## ಭ್ರಷ್ಟಾಚಾರ ತಡೆಗಟ್ಟಲು ಮಾಡಿರುವ ಪ್ರಯತ್ನಗಳು:

- Right to Information Act

- Bhoomi (Computerization of land registry records of karnataka)
- Wistleblowers
- ಟ್ರಾನ್ಸ್‌ಪರೆನ್ಸಿ ಸಂಸ್ಥೆಯ ಚೇರ್ಮನ್ ಜೋಸ್ ಉಗಾಜ್ ಅಭಿಪ್ರಾಯದಂತೆ, ಬಹಳಷ್ಟು ದೇಶಗಳಲ್ಲಿ ಜನರು ಭ್ರಷ್ಟಾಚಾರದ ಕಾರಣದಿಂದಾಗಿ ಅತ್ಯಂತ ಮೂಲಭೂತವಾಗಿರುವ ಅವಶ್ಯಕತೆಗಳಿಂದ ವಂಚಿತರಾಗಿ ಪ್ರತಿದಿನ ರಾತ್ರಿ ಹಸಿದ ಹೊಟ್ಟೆಯಲ್ಲೇ ಮಲಗಿದರೆ, ಪ್ರಭಾವಿಗಳು ಮತ್ತು ಭ್ರಷ್ಟರು ನಿರ್ಭೀತಿಯಿಂದ-ನಿರ್ಲಜ್ಜೆಯಿಂದ ಐಷಾರಾಮಿ ಜೀವನಸೌಕರ್ಯಗಳನ್ನು ಅನುಭವಿಸುತ್ತಿದ್ದಾರೆ.

### ಅಮೆರಿಕಾ,ಸಿಂಗಾಪೂರ, ಇಂಗ್ಲೆಂಡ್, ದುಬೈ ದೇಶಗಳ ಹಾಗೆ ನಮ್ಮ ದೇಶವು ಆಗ ಬಹುವುದೇ.?

Yes ಆಗಬಹುವುದು ಕೆಲವು ದಾರಿಗಳುಯಿವೆ

- ಪ್ರತಿಯೊಂದು ಸರ್ಕಾರೀ ಸೇವೆಯನ್ನು Online ಮಾಡಬೇಕು.ಇದರಿಂದ ಪೂರ್ತಿ ತಡೆಯೋಕೆ ಆಗಲ್ಲ. ಆದರೂ ಒಂದು ಇಷ್ಟು ಶೇಕಡಾವಾರು ಕಡಿಮೆ ಮಾಡಬಹುವುದು.
- ನಮ್ಮ ದೇಶದ ಪ್ರತಿಯೊಬ್ಬ ನಾಗರಿಕನು ತನ್ನಗೆ ಏಷ್ಟೆ ತೋದರೆ ಆದರೂ ಲಂಚ ಕೊಡಬಾರದು, ತೇಗಿದು ಕೊಳಬಾರದು ಅಂತ ದೃಢ ಸಂಕಲ್ಪ ಮಾಡಬೇಕು.
- ನಮ್ಮ ದೇಶದಲ್ಲಿರುವ ಆಸ್ತಿ ಹಕ್ಕು ಕಾಯ್ದೆ ತೇಗಿಯಬೇಕು.ಅಂದರೆ ದೇಶದ ಎಲ್ಲಾ ಭೂಮಿಯು ಸರ್ಕಾರದ ಹೆಸರಿನಲ್ಲಿ ಇರಬೇಕು. ಯಾರು ಭೂಮಿಯನ್ನು ಕೋಡುಕೊಳುವ,ಮಾರುವ ಹಾಗೆ ಇರಬಾರದು. ಸರ್ಕಾರವೆ ಮನೆ ಕಟ್ಟಿಸಿ ಜನರಿಗೆ ಅವರ ಕುಟುಂಬದ ಜನ ಸಂಖ್ಯೆ ಯ ಆಧಾರದ ಮೇಲೆ 1 BHK, 2 BHK ಮನೆಗಳನ್ನು ತಿಂಗಳ ಬಾಡಿಗೆಗೆ ಕೊಡಬೇಕು.ರೈತರಿಗೂ ಇದೇ ರೀತಿಯಲ್ಲಿ ಹೊಲವನ್ನು ಒಂದು ವರ್ಷಕ್ಕೆ ಇಂತಿಷ್ಟು ಅಂಥ Tax ತೆಗಿದುಕೊಂಡು ಬೆಳೆಯಲು ಕೊಡಬೇಕು. ಮುಂದಿನ ವರ್ಷ ಅವರು ದುಡಿಮೆಯನ್ನು ನೋಡಿ Renewal ಮಾಡಬೇಕು.
- 2000 Rs ಮೇಲಪ್ಪಟ್ಟ ಎಲ್ಲಾ ವ್ಯವಹಾರಗಳನ್ನು ಬ್ಯಾಂಕುಗಳ ಮುಖಾಂತರವೆ ಮಾಡಬೇಕು ಅಂತ ಕಾಯ್ದೆ ಜಾರಿಮಾಡಬೇಕು. ಎಲ್ಲಾ ಸಣ್ಣ ದೊಡ್ಡ ಅಂಗಡಿಯವರಿಗೆ ATM Card Reader machine ಗಳನ್ನು ಉಚಿತವಾಗಿ ಕೊಡಬೇಕು.
- 2000Rs ಮೇಲಪ್ಪಟ್ಟ ಎಲ್ಲಾ ವ್ಯವಹಾರಗಳನ್ನು Debit Card ಯಿಂದ ಮಾಡಬೇಕು ಅಂಥ ಕಾಯ್ದೆಯನ್ನು ಮಾಡಬೇಕು. ಇದನ್ನ ಎಲ್ಲಾ ಮಾಡೋದು ಅಷ್ಟು ಸುಲಭವಲ್ಲ ನಮ್ಮ ದೇಶದಲ್ಲಿ ಯಾಕೆಂದರೆ ನಮ್ಮದು ಪ್ರಜಾಪ್ರಭುತ್ವವುಳ ದೇಶ. ಈ ರೀತಿಯ ಕಾಯ್ದೆ ನಮ್ಮ ನೆರೆ ದೇಶ ಚೀನಾದಲ್ಲಿ ಇದೆ.ಅದಕ್ಕೆ ಆ ದೇಶ ಅಷ್ಟೊಂದು ವೇಗವಾಗಿ ಬೆಳೆಯುತ್ತಿದೆ.

### ಮುಂದಿನ ಹಾದಿ

- ಪ್ರಪಂಚದಲ್ಲಿ ಭ್ರಷ್ಟಾಚಾರವೇ ಇಲ್ಲದ ದೇಶ ಯಾವುದೂ ಇಲ್ಲ. ಒಂದಲ್ಲ ಒಂದು ಬಗೆಯಲ್ಲಿ ಭ್ರಷ್ಟಾಚಾರ ಮನೆಮಾಡಿಕೊಂಡಿದೆ. ಆದರೆ, ಕೆಲವು ರಾಷ್ಟ್ರಗಳಲ್ಲಿ ಭ್ರಷ್ಟಾಚಾರದ ಪ್ರಮಾಣ ಅತಿ ಹೆಚ್ಚಿದ್ದರೆ ಮತ್ತೆ ಕೆಲ ದೇಶಗಳಲ್ಲಿ ಕಡಿಮೆ. ಇನ್ನು ರಾಷ್ಟ್ರದಿಂದ ರಾಷ್ಟ್ರಕ್ಕೆ ಅದರ ಸ್ವರೂಪವೂ

ಭಿನ್ನ. ಉದಾಹರಣೆಗೆ, ಸೌದಿ ಅರೇಬಿಯಾದಲ್ಲಿ ರಾಜಪರಿವಾರದ ಕೈಯಲ್ಲಿ ಅಧಿಕಾರವಿದ್ದು, ಅವರು ಜನರ ಮೇಲೆ ಕಡಿಮೆ ತೆರಿಗೆ ಹಾಕಿ, ಅವರಿಗೆ ಬೇಕಾದ ಸೌಲಭ್ಯಗಳನ್ನೆಲ್ಲ ಒದಗಿಸುತ್ತಾರೆ. ಹಾಗಾಗಿ, ಮೇಲ್ನೋಟಕ್ಕೆ ಇಲ್ಲಿ ಭ್ರಷ್ಟಾಚಾರ ಕಾಣಿಸುವುದಿಲ್ಲವಾದರೂ ಅದರ ಒಳಸುಳಿಗಳು ಭಿನ್ನವಾಗಿಯೇ ಇವೆ. ಅಮೆರಿಕದಂಥ ಮುಂದುವರಿದ ರಾಷ್ಟ್ರಗಳ ಉದಾಹರಣೆ ತೆಗೆದುಕೊಂಡರೆ ಅಲ್ಲಿ ಕೆಳಹಂತದಲ್ಲಿ ಭ್ರಷ್ಟಾಚಾರ ಬಿಲ್‌ಕುಲ್ ಇಲ್ಲ. ಜನರು ದೈನಂದಿನ ವ್ಯವಹಾರಗಳನ್ನು ಭ್ರಷ್ಟಾಚಾರದ ಗೊಡವೆ ಇಲ್ಲದೆ ಪಾರದರ್ಶಕವಾಗಿ, ನಿಗದಿತ ಕಾಲಾವಧಿಯಲ್ಲಿ ಮಾಡಿಕೊಳ್ಳಬಹುದು. ಜನನ ಪ್ರಮಾಣಪತ್ರ, ನೋಂದಣಿ ಪ್ರಕ್ರಿಯೆಗಳಲ್ಲೆಲ್ಲ ಲಂಚದ ಹಾವಳಿಯಿಲ್ಲ.

- ಮುಂದುವರಿದ ದೇಶಗಳಲ್ಲಿ ಭ್ರಷ್ಟಾಚಾರದ ಪ್ರಮಾಣ ಕಡಿಮೆ ಯಾಕೆ ಎನ್ನುವುದನ್ನು ಅವಲೋಕಿಸುವಾಗ ಕೆಲ ಸಂಗತಿಗಳು ಸ್ಪಷ್ಟಗೋಚರವಾಗುತ್ತವೆ. ಮೊದಲನೆಯದು, ಕಠಿಣ ನಿಯಮಗಳು ಮತ್ತು ಪಾಲನೆ. ಅಲ್ಲೆಲ್ಲ ನಿಯಮಗಳು ಎಲ್ಲರಿಗೂ ಅನ್ವಯವಾಗುತ್ತವೆ. ಯಾರೇ ತಪ್ಪು ಮಾಡಿದರೂ ಅದು ತಪ್ಪೇ. ಹಾಗಾಗಿ, ನಿಯಮ ಉಲ್ಲಂಘಿಸಿದವರಿಗೆ ಶಿಕ್ಷೆ, ದಂಡ ಕಟ್ಟಿಟ್ಟಬುತ್ತಿ. ಉದಾ: ಅಮೆರಿಕದಲ್ಲಿ ಟ್ರಾಫಿಕ್‌ನಲ್ಲಿ ರೆಡ್ ಸಿಗ್ನಲ್ ಜಂಪ್ ಮಾಡಿದರೆ ಸಾವಿರ ಡಾಲರ್, ರಸ್ತೆಯಲ್ಲಿ, ಸಾರ್ವಜನಿಕ ಪ್ರದೇಶದಲ್ಲಿ ಕಸ ಚೆಲ್ಲಿದರೆ 1,500 ಡಾಲರ್ ದಂಡ ವಿಧಿಸಲಾಗುತ್ತದೆ. ಹೀಗೆ ತಪ್ಪು ಮಾಡಿದವರು ಪ್ರತಿಷ್ಠಿತರೋ, ಜನಸಾಮಾನ್ಯರೋ ಎಂಬುದನ್ನು ಅಲ್ಲಿ ಪರಿಗಣಿಸುವುದಿಲ್ಲ. ಆರ್ಥಿಕ ವ್ಯವಹಾರಗಳ ವಿಷಯಕ್ಕೆ ಬಂದಾಗ ಇಂದು ನಿಯಮ ಉಲ್ಲಂಘಿಸಿ ಆಕಸ್ಮಾತ್ ಶಿಕ್ಷೆಯಿಂದ ತಪ್ಪಿಸಿಕೊಂಡರೂ ಕೆಲ ವರ್ಷಗಳ ಬಳಿಕ ಆ ವ್ಯಕ್ತಿ ತಪ್ಪು ಮಾಡಿದ್ದಾನೆ ಎಂದು ಗೊತ್ತಾದರೆ ಶಿಕ್ಷೆ ನಿಕ್ಕಿ. ಆದ್ದರಿಂದ, ಜನರು ನಿಯಮಗಳನ್ನು ಉಲ್ಲಂಘಿಸಲು ಹೆದರುತ್ತಾರೆ. ನಿಯಮಗಳನ್ನು ಚಾಚೂತಪ್ಪದೆ ಪಾಲಿಸುತ್ತಾರೆ.
- ಸರ್ಕಾರಿ ಕಚೇರಿಗಳಲ್ಲಿ ಕೆಲಸಕಾರ್ಯಗಳು ನಿಗದಿತ ಕಾಲಾವಧಿಯಲ್ಲೇ ಮುಗಿಯಬೇಕು. ಒಂದು ವೇಳೆ ಹಾಗಾಗದಿದ್ದರೆ, ಅಂಥ ನೌಕರನ ಮೇಲೆ ಶಿಸ್ತುಕ್ರಮ ಖಾತ್ರಿ. ಆದ್ದರಿಂದ, ಸರ್ಕಾರಿ ಕಚೇರಿಗಳು ಲಂಚ ಮತ್ತು ವಿಳಂಬಧೋರಣೆಯಿಂದ ದೂರವುಳಿದಿವೆ. ಸರ್ಕಾರಿ ನೌಕರರು, ಇತರೆ ಸಿಬ್ಬಂದಿ ನಿಗದಿತ ಕಾಲಾವಧಿಯಲ್ಲಿ ಕೆಲಸ ಮಾಡಲು ಬಾಧ್ಯಸ್ಥರಾಗುತ್ತಾರೆ. ಅಂದರೆ, ಅಲ್ಲಿ ಟೈಮ್ ಬಾಂಡ್ ಇದೆ, ರೆಸ್ಪಾನ್ಸಿಬಿಲಿಟಿ(ಜವಾಬ್ದಾರಿ) ಮತ್ತು ರೂಲ್ಸ್ ಬಾಂಡ್ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತವೆ.
- ಭಾರತದ ವಿಷಯಕ್ಕೆ ಬಂದರೆ ಇಲ್ಲಿ ಕಾನೂನು ರೂಪಿಸುವವರೇ ಕಾನೂನನ್ನು ಉಲ್ಲಂಘಿಸುತ್ತಾರೆ. ಇದು ಬಹುದೊಡ್ಡ ದುರಂತ. ಮತ್ತೊಂದು ವೈಚಿತ್ರ್ಯವೆಂದರೆ 'ನಿಯಮ ಎಲ್ಲರಿಗೂ ಅನ್ವಯವಾಗಬೇಕು, ಆದರೆ ತನ್ನನ್ನು ಹೊರತುಪಡಿಸಿ' ಎಂಬುದು. ಇಲ್ಲಿ ನಿಯಮಗಳಿಂದ ತಪ್ಪಿಸಿಕೊಳ್ಳಲು, ವಿನಾಯ್ತಿ ಪಡೆದುಕೊಳ್ಳಲು ಪೈಪೋಟಿಯೇ ನಡೆಯುತ್ತದೆ. 'ನಾನು ಯಾರು ಗೊತ್ತಾ?' ಎಂಬ ಅಹಂಕಾರದ ಪ್ರದರ್ಶನವಾಗುತ್ತದೆ. ಭಾರತದಲ್ಲಿ ಮೊದಲಿನ ಸ್ಥಿತಿಗೆ ಹೋಲಿಸಿದರೆ ಭ್ರಷ್ಟಾಚಾರ ಗಮನಾರ್ಹ ಪ್ರಮಾಣದಲ್ಲಿ ಕಡಿಮೆಯಾಗಿದೆ. ಆನ್‌ಲೈನ್ ವಹಿವಾಟು, ಬಿಗಿಗೊಂಡ ನಿಯಮಗಳ ಪರಿಣಾಮ ಈ ಬದಲಾವಣೆ ಸಾಧ್ಯವಾಗಿದೆ.

- ಭ್ರಷ್ಟಾಚಾರ ನಿಗ್ರಹದಲ್ಲಿ ಮತ್ತೊಂದು ಮುಖ್ಯ ಅಂಶವನ್ನು ಗ್ರಹಿಸಬೇಕು, ಲಂಚ ತೆಗೆದುಕೊಳ್ಳುವುದು ಎಷ್ಟು ತಪ್ಪೋ, ಅದನ್ನು ನೀಡುವುದು ಕೂಡ ಅಷ್ಟೇ ತಪ್ಪು. ಜನರು ಅಲೆದಾಟವನ್ನು ತಪ್ಪಿಸಿಕೊಳ್ಳಲು ಅಥವಾ ಕೆಲಸಗಳನ್ನು ತುರ್ತಾಗಿ ಮಾಡಿಸಿಕೊಳ್ಳಲು ಲಂಚ ನೀಡುತ್ತಾರೆ. ಈ ಪರಿಪಾಠ ನಿಲ್ಲಬೇಕು. ಯಾವುದೇ ಕೆಲಸಕ್ಕೂ, ಯಾವುದೇ ಕಾರಣಕ್ಕೂ ಲಂಚ ನೀಡುವುದಿಲ್ಲ ಎಂದು ಜನರು ಸಂಕಲ್ಪಿಸಿಕೊಂಡರೆ ಸರ್ಕಾರಿ ಯಂತ್ರವೂ ದುರಸ್ತಿಯಾಗುತ್ತದೆ. ಇಂಥ ಜನಾಂದೋಲನ ಭಾರತದಲ್ಲಿ ನಡೆಯಬೇಕಿದೆ. ಹಿಂದೆಲ್ಲ ಸಮಾಜ ಸುಧಾರಕ ಅಣ್ಣಾ ಹಜಾರೆ ಸೇರಿದಂತೆ ಕೆಲವರು ಭ್ರಷ್ಟಾಚಾರ ವಿರೋಧಿ ಅಭಿಯಾನ ನಡೆಸಿದಾಗ ಆ ಬಗೆಯ ಜಾಗೃತಿ ಒಂದಿಷ್ಟು ಕಂಡುಬಂದಿತ್ತು.
- ಇನ್ನೊಂದು ಸಕಾರಾತ್ಮಕ ಅಂಶವೆಂದರೆ ಭಾರತ ಈಗ ಯುವರಾಷ್ಟ್ರ. ಇಲ್ಲಿನ ಯುವಕರು ಭ್ರಷ್ಟಾಚಾರಮುಕ್ತ ವ್ಯವಸ್ಥೆಯನ್ನು ಬಯಸುತ್ತಿದ್ದಾರೆ. ಇವರೆಲ್ಲ ಒಟ್ಟಾಗಿ ಭ್ರಷ್ಟಾಚಾರದ ವಿರುದ್ಧ ಸಿಡಿದೆದ್ದರೆ ಪರಿವರ್ತನೆ ಸಾಧ್ಯ. ಜತೆಗೆ, ಸಮಾಜದ ಮೌಲ್ಯವಸ್ಥೆಯೂ ಪುನರ್ ಸ್ಥಾಪಿತವಾಗಬೇಕು. ಮುಂಚೆಲ್ಲ, ಮನೆ-ಮನೆಗಳಲ್ಲೂ ಮೌಲ್ಯವ್ಯವಸ್ಥೆ ಆರ್ಥಿಕಶುದ್ಧಿಗೆ ಅವಕಾಶ ಕಲ್ಪಿಸಿತ್ತು. ಬೆವರಿನ ದುಡಿಮೆಯ ಗಳಿಕೆಯಲ್ಲೇ ಬದುಕಬೇಕು ಎಂಬ ಅರಿವಿತ್ತು. ಇಂದು ಸಮಾಜದಲ್ಲಿ ಈ ಮೌಲ್ಯ ಮರೆಯಾದ ಪರಿಣಾಮವೇ ದುಡ್ಡಿದ್ದವನಿಗೆ ಬೆಲೆ ಎಂಬಂತಾಗಿದೆ. ಆತ ಆ ಸಂಪತ್ತನ್ನು ಹೇಗೆ ಸಂಪಾದಿಸಿದ ಎಂಬುದನ್ನು ಸಮಾಜ ಗ್ರಹಿಸುತ್ತಿಲ್ಲ
- ಎಲ್ಲವನ್ನೂ ನಿಯಮಗಳಿಂದಲೇ ಮಾಡಲು ಸಾಧ್ಯವಿಲ್ಲ. ವ್ಯವಸ್ಥೆಯೊಂದು ಪರಿಣಾಮಕಾರಿಯಾಗಿ ನಡೆಯಬೇಕಾದರೆ ನಿಯಮಗಳು ಬೇಕು ಎಂಬುದು ನಿಜ. ಆದರೆ ಉತ್ತಮ ಮೌಲ್ಯವ್ಯವಸ್ಥೆ ಸಮಾಜದಲ್ಲಿ ಅನುಷ್ಠಾನಗೊಂಡಿದ್ದೇ ಆದಲ್ಲಿ ಭ್ರಷ್ಟಾಚಾರ ಸೇರಿದಂತೆ ಹಲವು ಕೆಡಕುಗಳನ್ನು ಪರಾಭವಗೊಳಿಸಬಹುದು.

ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

## 2. ಪ್ರಧಾನ ಮಂತ್ರಿ ಶ್ರಮ ಯೋಗಿ ಮಾನ್‌ಧನ್ ಯೋಜನೆ

### ಪ್ರಮುಖ ಸುದ್ದಿ

- ಅಸಂಘಟಿತ ವಲಯದ ಕಾರ್ಮಿಕರಿಗಾಗಿ ಮಧ್ಯಂತರ ಬಜೆಟ್‌ನಲ್ಲಿ 'ಪ್ರಧಾನ ಮಂತ್ರಿ ಶ್ರಮ ಯೋಗಿ ಮಾನ್‌ಧನ್' ಪಿಂಚಣಿ ಯೋಜನೆ ಘೋಷಿಸಲಾಗಿದೆ.

### ಮುಖ್ಯ ಅಂಶಗಳು

- ಅಸಂಘಟಿತ ವಲಯದ ಕಾರ್ಮಿಕ ವರ್ಗಕ್ಕೆ ಹಣಕಾಸು ಸಚಿವ ಪಿಯೂಷ್ ಗೋಯಲ್ ಹೊಸ ಪಿಂಚಣಿ ಯೋಜನೆ ಘೋಷಿಸಿದ್ದು, ಯೋಜನೆಯಡಿ ನಿವೃತ್ತ ಕಾರ್ಮಿಕರಿಗೆ ವಾರ್ಷಿಕ 3 ಸಾವಿರ ರೂ. ಲಭಿಸಲಿದೆ.
- ಪ್ರಧಾನ ಮಂತ್ರಿ ಶ್ರಮ ಯೋಗಿ ಮಾನ್‌ಧನ್ ಯೋಜನೆ ಅಡಿ 500 ರೂ. ಗಳನ್ನು ಮೀಸಲಿಡಲಾಗಿದ್ದು, 15 ಸಾವಿರಕ್ಕಿಂತ ಕಡಿಮೆ ಆದಾಯ ಇರುವ ಅಸಂಘಟಿತ ವಲಯದ ಕಾರ್ಮಿಕರಿಗೆ ಈ ಯೋಜನೆ ಅನ್ವಯ ಆಗಲಿದೆ. ಕೇಂದ್ರ ಸರ್ಕಾರದ ಈ ಯೋಜನೆಯಲ್ಲಿ 60

ವರ್ಷ ನಂತರ ನಿವೃತ್ತಿ ಹೊಂದಿದ ಅಸಂಘಟಿತ ಕಾರ್ಮಿಕರಿಗೆ ಲಭ್ಯವಾಗಲಿದ್ದು, 10 ಕೋಟಿ ಕಾರ್ಮಿಕರು ಈ ಯೋಜನೆಯ ಫಲಾನುಭವಿಗಳಾಗಲಿದ್ದಾರೆ.

### ಯೋಜನೆಯ ಪ್ರಾಮುಖ್ಯತೆ

- ಪ್ರಮುಖವಾಗಿ ಅಸಂಘಟಿತ ವಲಯಗಳಾದ ಮನೆಗೆಲಸದವರು, ಮನೆ ನಿರ್ಮಾಣ ಕಾರ್ಮಿಕರು, ರಿಕ್ಷಾ ಓಡಿಸುವವರು, ಚಿಂದಿ ಆಯುವ ಕಾರ್ಮಿಕರಿಗೆ ಲಾಭ ಆಗಲಿದೆ. ಯೋಜನೆಯ ಫಲಾನುಭವಿ ಕಾರ್ಮಿಕರು ತಿಂಗಳಿಗೆ 100 ರೂ. ಪಾವತಿ ಮಾಡಬೇಕಾಗಿದ್ದು, ಸರ್ಕಾರವೂ ಅಷ್ಟೇ ಮೊತ್ತವನ್ನು ಭರಿಸಲಿದೆ. ಅಲ್ಲದೇ ಈ ಯೋಜನೆ ಕಳೆದ 5 ವರ್ಷಗಳಲ್ಲಿ ಜಾರಿಯಾದ ವಿಶ್ವದ 5ನೇ ಅತಿ ದೊಡ್ಡ ಪಿಂಚಣಿ ಯೋಜನೆ ಆಗಲಿದೆ.

## 3.ಅಲೆಮಾರಿ ಕಲ್ಯಾಣಕ್ಕೆ ಅಭಿವೃದ್ಧಿ ಮಂಡಳಿ (New panel for welfare of nomadic communities)

### ಪ್ರಮುಖ ಸುದ್ದಿ

- ಅನುಸೂಚಿತ ಪಟ್ಟಿಯಿಂದ ಹೊರಗಿರುವ ಸಮುದಾಯಗಳು, ಅಲೆಮಾರಿ ಮತ್ತು ಅರೆ ಅಲೆಮಾರಿ ಸಮುದಾಯಗಳ ಕಲ್ಯಾಣಕ್ಕಾಗಿ ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆಯಿಂದ ಅಭಿವೃದ್ಧಿ ಮಂಡಳಿ ರಚನೆ ಮಾಡಲಾಗುತ್ತದೆ.

### ಮುಖ್ಯ ಅಂಶಗಳು

- ಈ ಮಂಡಳಿಯ ಮೂಲಕ ಕೇಂದ್ರದ ವಿವಿಧ ಯೋಜನೆಗಳನ್ನು ಅನುಸೂಚಿತ ಪಟ್ಟಿಯಿಂದ ಹೊರಗಿರುವ ಸಮುದಾಯಗಳು, ಅಲೆಮಾರಿ ಮತ್ತು ಅರೆ ಅಲೆಮಾರಿ ಸಮುದಾಯ ಗಳಿಗೆ ಪರಿಣಾಮಕಾರಿಯಾಗಿ ಮುಟ್ಟಿಸುವ ಕೆಲಸ ನಡೆಯಲಿದೆ. ಹಾಗೆಯೇ ಈ ಸಮುದಾಯಗಳ ಅಭಿವೃದ್ಧಿಗೆ ಬೇಕಾದ ಕಾರ್ಯಕ್ರಮಗಳನ್ನೂ ಈ ಮಂಡಳಿ ಮೂಲಕವೇ ರೂಪಿಸಲಾಗುತ್ತದೆ.
- ಅನುಸೂ ಚಿತ ಪಟ್ಟಿಯಿಂದ ಹೊರಗಿರುವ ಸಮುದಾಯಗಳು, ಅಲೆಮಾರಿ ಮತ್ತು ಅರೆಅಲೆಮಾರಿ ಸಮುದಾಯ ಗಳನ್ನು ಗುರುತಿಸಿ, ಔಪಚಾರಿಕವಾಗಿ ವರ್ಗೀಕರಿಸಲು ನೀತಿ ಆಯೋಗದ ಮೂಲಕ ಸಮಿತಿಯೊಂದನ್ನು ರಚನೆ ಮಾಡಲಾಗುತ್ತಿದೆ.
- ಅತ್ಯಂತ ಹಿಂದುಳಿದಿರುವ ಈ ಸಮುದಾಯವನ್ನು ಮುಖ್ಯವಾಹಿನಿಗೆ ತರಲು ಹೆಚ್ಚಿನ ಆದ್ಯತೆ ನೀಡಲಾಗುತ್ತದೆ. ಜೀವನೋಪಾಯ ಕ್ಕಾಗಿ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ವಲಸೆ ಹೋಗುವ ಈ ಸಮುದಾಯದವರನ್ನು ಗುರುತಿಸುವುದು ಅತಿ ಅವಶ್ಯಕವಾಗಿದೆ.

## 4. ರಾಷ್ಟ್ರೀಯ ವಯೋಶ್ರೀ ಯೋಜನೆ

### ಪ್ರಮುಖ ಸುದ್ದಿ

- ಬಡತನ ರೇಖೆಗಿಂತ ಕೆಳಗಿರುವ 60 ವರ್ಷ ಮೇಲ್ಪಟ್ಟ ಹಿರಿಯ ನಾಗರೀಕರಿಗೆ ಉಚಿತವಾಗಿ ಜೀವನ ಸಹಾಯಕ ಉಪಕರಣಗಳನ್ನು ವಿತರಿಸಲು ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಯೋಜನೆಯೇ ರಾಷ್ಟ್ರೀಯ ವಯೋಶ್ರೀ ಯೋಜನೆ

## ಮುಖ್ಯ ಅಂಶಗಳು

- ಈ ಯೋಜನೆಯಡಿಯಲ್ಲಿ ಬಿ.ಪಿ.ಎಲ್. ಕುಟುಂಬದ ಹಿರಿಯ ನಾಗರೀಕರಿಗೆ ಊರುಗೋಲು, ವ್ಹೀಲ್ ಚೇರ್ , ಕನ್ನಡಕ, ಕೃತಕ ದಂತ ಪಂಕ್ತಿ, ಕಿವುಡು ದೋಷ ನಿಯಂತ್ರಣ ಉಪಕರಣಗಳನ್ನು ಉಚಿತವಾಗಿ ವಿತರಿಸಲಾಗುತ್ತದೆ .
- ಈ ಯೋಜನೆಗಾಗಿ ಕೇಂದ್ರ ಸರ್ಕಾರವು 477 ಕೋಟಿ ರೂಪಾಯಿ ಅನುದಾನ ಬಿಡುಗಡೆ ಮಾಡಿದ್ದು ಇದು ಸಂಪೂರ್ಣ ಕೇಂದ್ರ ಸರ್ಕಾರದ ಪ್ರಾಯೋಜಿತ ಯೋಜನೆ
- ಈ ಯೋಜನೆಯಡಿ, ಮೊದಲ ಹಂತದಲ್ಲಿ ಪ್ರತಿ ರಾಜ್ಯದಲ್ಲಿ ಎರಡು ವಿತರಣಾ ಶಿಬಿರಗಳನ್ನು ಹಮ್ಮಿಕೊಳ್ಳಲಾಗುವುದು ಮತ್ತು ಪ್ರತಿ ವಿತರಣಾ ಶಿಬಿರದಲ್ಲಿ ಕನಿಷ್ಟ 2000 ಜನರಿಗೆ ಸಹಾಯಕ ಉಪಕರಣಗಳನ್ನು ವಿತರಿಸುವ ಗುರಿಹೊಂದಲಾಗಿದೆ ಮುಂದಿನ 3 ವರ್ಷಗಳಲ್ಲಿ 5 ಲಕ್ಷದ 20 ಸಾವಿರ ಹಿರಿಯ ನಾಗರೀಕರಿಗೆ ಈ ಯೋಜನೆಯನ್ನು ತಲುಪಿಸುವ ಉದ್ದೇಶ ಹೊಂದಲಾಗಿದೆ.
- ಈ ಯೋಜನೆಯನ್ನು ಕೇಂದ್ರ ಸರ್ಕಾರದ ಒಡೆತನದ 'ಅಲಿಮ್‌ಕೋ' ((ALIMCO- Artificial Limbs Manufacturing Corporation)) ಸಂಸ್ಥೆಯ ನೇತೃತ್ವದಡಿ ಕಾರ್ಯರೂಪಕ್ಕೆ ತರಲಾಗುತ್ತದೆ.
- ಈ ಯೋಜನೆಯ ಫಲಾನುಭವಿಗಳನ್ನು ರಾಜ್ಯ ಸರ್ಕಾರವು ಗುರುತಿಸಬೇಕಾಗುತ್ತದೆ ಈ ಯೋಜನೆಯ ಮೊದಲ ವಿತರಣಾ ಕ್ಯಾಂಪ್ ಅನ್ನು ಮಾರ್ಚ್ 25 ರಂದು ಆಂಧ್ರ ಪ್ರದೇಶದ ನೆಲ್ಲೂರಿನಲ್ಲಿ ಆಯೋಜಿಸಲಾಗಿತ್ತು.

ಮಸ್ಸೂರಿಗೆ/ಮೈಸೂರಿಗೆ

## ಯೋಜನೆಯ ಪ್ರಾಮುಖ್ಯತೆ

- 2011 ರ ಜನಗಣತಿಯ ಅಂಕಿ ಅಂಶಗಳ ಪ್ರಕಾರ ಭಾರತದ ಹಿರಿಯ ನಾಗರಿಕರ ಸಂಖ್ಯೆ 10.38 ಕೋಟಿ. ಹಿರಿಯ ನಾಗರಿಕರ 70% ಕ್ಕಿಂತ ಹೆಚ್ಚು ಜನರು ದೇಶದ ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ಹಿರಿಯ ನಾಗರಿಕರ ಒಂದು ಗಮನಾರ್ಹವಾದ ಶೇಕಡಾವಾರು (5.2%) ವಯಸ್ಸಾದವರಿಗೆ ಸಂಬಂಧಿಸಿದ ಕೆಲವು ರೀತಿಯ ವಿಕಲಾಂಗಗಳಿಂದ ಬಳಲುತ್ತಿದ್ದಾರೆ. 2026 ರ ವೇಳೆಗೆ ವಯಸ್ಸಾದ ಜನಸಂಖ್ಯೆ ಸುಮಾರು 173 ಮಿಲಿಯನ್ಗೆ ಏರಿಕೆಯಾಗಲಿದೆ ಎಂದು ಸಮೀಕ್ಷೆಗಳು ಸೂಚಿಸುತ್ತವೆ.
- ಆದ್ದರಿಂದ ಬಿ.ಪಿ.ಎಲ್ ವಿಭಾಗಕ್ಕೆ ಸೇರಿದ ವಯಸ್ಸಿಗೆ ಸಂಬಂಧಿಸಿದ ಅಸಮರ್ಥತೆ / ದುರ್ಬಲತೆಗಳಿಂದ ಬಳಲುತ್ತಿರುವ ಇಂತಹ ಹಿರಿಯ ನಾಗರಿಕರಿಗೆ ದೈಹಿಕ ನೆರವು ಮತ್ತು ಅಸಿಸ್ಟೆಡ್ ಲಿವಿಂಗ್ ಸಾಧನಗಳನ್ನು ಒದಗಿಸಲು ಕೇಂದ್ರ ವಲಯ ಯೋಜನೆಯನ್ನು ಸರ್ಕಾರ ರೂಪಿಸಿದೆ.

## 5. ಸೇಫ್ ಸಿಟಿ ಪ್ರಾಜೆಕ್ಟ್

### ಪ್ರಮುಖ ಸುದ್ದಿ

- ಸಾರ್ವಜನಿಕ ಸ್ಥಳಗಳಲ್ಲಿ ಮಹಿಳೆಯರಿಗೆ ಸುರಕ್ಷತೆ ನೀಡುವ ದೃಷ್ಟಿಯಿಂದ ದೆಹಲಿ, ಕೊಲ್ಕತ್ತಾ, ಮುಂಬೈ, ಚೆನ್ನೈ, ಬೆಂಗಳೂರು, ಹೈದರಾಬಾದ್, ಅಹಮದಾಬಾದ್ ಮತ್ತು ಲಖನೌದಲ್ಲಿ ದೇಶದ ಎಂಟು ಆಯ್ದ 8 ಪ್ರಮುಖ ನಗರಗಳಲ್ಲಿ ಸೇಫ್ ಸಿಟಿ ಪ್ರಾಜೆಕ್ಟ್ ಯೋಜನೆಗಳಿಗೆ ನಿರ್ಭಯಾ ನಿಧಿ ಯೋಜನೆಯ ಸಬಲೀಕರಣ ಸಮಿತಿ ಅನುಮತಿ ನೀಡಿದೆ.

### ಮುಖ್ಯ ಅಂಶಗಳು

- ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ, ನಗರಾಭಿವೃದ್ಧಿ ಸಚಿವಾಲಯ ಮತ್ತು ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಇಲಾಖೆ ಹಾಗೂ ಆಯಾ ನಗರಗಳ ಮಹಾನಗರಪಾಲಿಕೆ ಮತ್ತು ಪೊಲೀಸ್ ಆಯುಕ್ತರ ಸಹಭಾಗಿತ್ವದಲ್ಲಿ ಯೋಜನೆ ಜಾರಿಯಾಗಲಿದೆ. ಯೋಜನೆ ವೆಚ್ಚವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು 60:40 ಅನುಪಾತದಲ್ಲಿ ಭರಿಸಲಿವೆ.

### ಏನೆಲ್ಲಾ ಕ್ರಮಗಳು?

- ಮಹಿಳಾ ಸುರಕ್ಷತೆಗಾಗಿ ಸಾಧ್ಯವಿರುವ ಎಲ್ಲ ರೀತಿಯ ಕಾರ್ಯಕ್ರಮಗಳನ್ನು ಜಾರಿಗೆ ತರುವುದು ಯೋಜನೆಯ ಉದ್ದೇಶ. ಅತಿ ಹೆಚ್ಚು ಅಪರಾಧ ಕೃತ್ಯಗಳು ನಡೆಯುವ ಪ್ರದೇಶಗಳಲ್ಲಿ ಸುರಕ್ಷಾ ವಲಯಗಳ ಸ್ಥಾಪನೆ, ಅತ್ಯಾಧುನಿಕ ನಿಯಂತ್ರಣ ಕೇಂದ್ರಗಳ ಜತೆ ಸಂಪರ್ಕ ಹೊಂದಿರುವ ಸಿ.ಸಿ.ಟಿ.ವಿ. ಕ್ಯಾಮೆರಾಗಳ ಅಳವಡಿಕೆ, ಭದ್ರತಾ ವ್ಯವಸ್ಥೆ ಇರುವ ಸಾರ್ವಜನಿಕ ಸಾರಿಗೆ, ಸಾರ್ವಜನಿಕ ಸ್ಥಳಗಳಲ್ಲಿ ಅಪಾಯ ಕರೆಗಂಟೆಗಳ ಅವಳಡಿಕೆ ಯೋಜನೆಯ ಭಾಗಗಳಾಗಿವೆ.
- ಪೊಲೀಸ್ ಠಾಣೆಗಳಲ್ಲಿ ಮಹಿಳಾ ಸಹಾಯ ಕೇಂದ್ರಗಳು ಆರಂಭಗೊಳ್ಳಲಿವೆ. ಅಲ್ಲಿ ಆಪ್ತಸಮಾಲೋಚಕರ ಸೇವೆಯೂ ದೊರಕಲಿದೆ. ಹೀಗಾಗಿ ಮಹಿಳೆಯರು ದೂರು ದಾಖಲಿಸುವುದು ಸುಲಭವಾಗಲಿದೆ ಮತ್ತು ಸಂಕಷ್ಟದ ಸಂದರ್ಭಗಳಲ್ಲಿ ಅವರಿಗೆ ವಿಶೇಷ ನೆರವು ದೊರೆಯಲಿದೆ.
- ಯೋಜನೆಯು 2018-19 ರಿಂದ 2020-21ರ ಅವಧಿಯಲ್ಲಿ ಅನುಷ್ಠಾನಗೊಳ್ಳಲಿದೆ. 2013ರಲ್ಲಿ ಸ್ಥಾಪಿಸಲಾದ ನಿರ್ಭಯಾ ನಿಧಿಯ ಅಡಿಯಲ್ಲಿ ಯೋಜನೆಯನ್ನು ಮಂಜೂರು ಮಾಡಲಾಗಿದೆ.

### ಇತರ ಉಪಕ್ರಮಗಳು

- ಇದರಂತೆ, ಈ ಯೋಜನೆ ಜಾರಿಗೊಳ್ಳುವ ನಗರಗಳಲ್ಲಿ ಮಹಿಳೆಯರು ಮತ್ತು ಮಕ್ಕಳಿಗೆ ಪ್ರಮುಖ ಬಸ್ ನಿಲ್ದಾಣಗಳಲ್ಲಿ ವಿಶ್ರಾಂತಿ ಕೊಠಡಿ, ಸ್ಮಾರ್ಟ್ ಎಲ್‌ಇಡಿ ಬೀದಿ ದೀಪ ಅಳವಡಿಕೆ, ಸಿಸಿಟಿವಿ ಕ್ಯಾಮರಾ ಅಳವಡಿಕೆ, ಏಕಗವಾಕ್ಷಿ ಬಿಕ್ಕಟ್ಟು ಪರಿಹಾರ ಕೇಂದ್ರ, ಫೋರೆನ್ಸಿಕ್, ಸೈಬರ್ ಅಪರಾಧ ತಡೆ ಘಟಕಗಳನ್ನು ಸ್ಥಾಪಿಸಲಾಗುತ್ತಿದೆ.
- ಅಭಯಂ ಹೆಸರಿನ ತುರ್ತು ಪ್ರತಿಕ್ರಿಯೆ ವಾಹನಗಳನ್ನೂ ಪೂರೈಸಲಾಗುತ್ತದೆ. ಸಾರ್ವಜನಿಕ ಸಾರಿಗೆ ವಾಹನಗಳಲ್ಲಿ ಪಬ್ಲಿಕ್ ಪ್ಯಾನಿಕ್ ಬಟನ್ ಅಳವಡಿಕೆ, ಸುರಕ್ಷಿತ ವಲಯಗಳಲ್ಲಿ ಶೌಚಗೃಹ ಸ್ಥಾಪನೆ ಕೂಡ ಯೋಜನೆಯ ಭಾಗವಾಗಿದೆ

## 6. ರಾಷ್ಟ್ರೀಯ ಕಾಮಧೇನು ಆಯೋಗ

**ಪ್ರಮುಖ ಸುದ್ದಿ**

- ಪ್ರಧಾನಮಂತ್ರಿ ಅವರ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಂಪುಟ ಸಭೆ, ಗೋವುಗಳು ಮತ್ತು ಅವುಗಳ ಸಂತತಿ ಅಭಿವೃದ್ಧಿ, ರಕ್ಷಣೆ ಮತ್ತು ಸಂರಕ್ಷಣೆಗಾಗಿ ರಾಷ್ಟ್ರೀಯ ಕಾಮಧೇನು ಆಯೋಗ ಸ್ಥಾಪನೆಗೆ ಕೇಂದ್ರ ಅನುಮೋದನೆ ನೀಡಿತು.

**ಮುಖ್ಯ ಅಂಶಗಳು**

**ಪರಿಣಾಮ :**

- ರಾಷ್ಟ್ರೀಯ ಕಾಮಧೇನು ಆಯೋಗ ಸ್ಥಾಪನೆಯಿಂದಾಗಿ ದೇಶದಲ್ಲಿ ಜಾನುವಾರು ಜನಸಂಖ್ಯೆ ಅಭಿವೃದ್ಧಿಯ ಜೊತೆಗೆ ಅವುಗಳ ಸಂರಕ್ಷಣೆಯಾಗುವುದಲ್ಲದೆ, ಸ್ವದೇಶಿ ತಳಿಗಳ ಸಂರಕ್ಷಣೆ ಮತ್ತು ಅಭಿವೃದ್ಧಿ ಕೆಲಸವೂ ಆಗಲಿದೆ.
- ಇದರಿಂದ ಜಾನುವಾರು ಸಂಖ್ಯೆ ಹೆಚ್ಚಾಗುವುದಲ್ಲದೆ, ಮಹಿಳೆಯರಿಗೆ ಮತ್ತು ಸಣ್ಣ ಹಾಗೂ ಮಧ್ಯಮ ರೈತರಿಗೆ ಅನುಕೂಲವಾಗಲಿದೆ.
- ಗೋವು ಸಾಕಾಣಿಕೆ, ಸಾವಯವ ಗೊಬ್ಬರ, ಜೈವಿಕ ಅನಿಲ ವಲಯಗಳಲ್ಲಿ ಸಂಶೋಧನೆಗಳಲ್ಲಿ ತೊಡಗಿರುವ ಎಲ್ಲ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪಶು ವೈದ್ಯ, ಪ್ರಾಣಿ ವಿಜ್ಞಾನ ಅಥವಾ ಕೃಷಿ ವಿಶ್ವ ವಿದ್ಯಾಲಯಗಳು ಮತ್ತು ಇಲಾಖೆಗಳ ಸಹಭಾಗಿತ್ವದಲ್ಲಿ ಈ ರಾಷ್ಟ್ರೀಯ ಕಾಮಧೇನು ಆಯೋಗ ಕಾರ್ಯನಿರ್ವಹಿಸಲಿದೆ.

ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

**ಹಿನ್ನೆಲೆ:**

- ಗೋವುಗಳು ಮತ್ತು ಅವುಗಳ ಸಂತತಿ ಅಭಿವೃದ್ಧಿ ಸಂರಕ್ಷಣೆಗಾಗಿ ರಚಿಸಲಿರುವ ರಾಷ್ಟ್ರೀಯ ಕಾಮಧೇನು ಆಯೋಗದಿಂದಾಗಿ ದೇಶದಲ್ಲಿ ಗೋವುಗಳ ಸಂರಕ್ಷಣೆ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳಿಗೆ ಹೊಸ ಕಾರ್ಯಸೂಚಿ ಮತ್ತು ನೀತಿ ಚೌಕಟ್ಟನ್ನು ಒದಗಿಸಲಿದೆ ಹಾಗೂ ಗೋವುಗಳ ಕಲ್ಯಾಣಕ್ಕೆ ಸಂಬಂಧಿಸಿದಂತೆ ಇರುವ ಕಾನೂನುಗಳ ಸೂಕ್ತ ಅನುಷ್ಠಾನದ ಕೆಲಸವನ್ನೂ ಸಹ ಆಯೋಗ ಮಾಡಲಿದೆ.
- 2019-20ನೇ ಸಾಲಿನ ಕೇಂದ್ರ ಬಜೆಟ್ ನಲ್ಲಿ ಆಯೋಗ ರಚನೆ ಮಾಡುವುದಾಗಿ ಘೋಷಿಸಲಾಗಿತ್ತು. ಅದರಂತೆ ಈ ನಿರ್ಧಾರವನ್ನು ಕೈಗೊಳ್ಳಲಾಗಿದೆ.

## 7.ಇ-ಆಡಳಿತದ ಕ್ಷೇತ್ರದಲ್ಲಿ ದ್ವಿಪಕ್ಷೀಯ ಸಹಕಾರ ಉತ್ತೇಜಿಸುವ ತಿಳುವಳಿಕಾ ಒಡಂಬಡಿಕೆಗೆ ಸಂಪುಟದ ಅಂಗೀಕಾರ

**ಪ್ರಮುಖ ಸುದ್ದಿ**

- ಪ್ರಧಾನಮಂತ್ರಿ ಅವರ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಂಪುಟ ಸಭೆಯು ಭಾರತ ಮತ್ತು ಉಜ್ಬೆಕಿಸ್ತಾನ ನಡುವೆ ಇ-ಆಡಳಿತದ ಕ್ಷೇತ್ರದಲ್ಲಿ ದ್ವಿಪಕ್ಷೀಯ ಸಹಕಾರ ಉತ್ತೇಜಿಸುವ ತಿಳುವಳಿಕಾ ಒಡಂಬಡಿಕೆಗೆ (ಎಂ.ಒ.ಯು.) ಪೂರ್ವಾನ್ವಯಗೊಂಡಂತೆ ಅಂಗೀಕಾರ ನೀಡಿತು.

### ಮುಖ್ಯ ಅಂಶಗಳು

- ಈ ಒಪ್ಪಂದವು ಇ-ಆಡಳಿತ, ಮಾಹಿತಿ ತಂತ್ರಜ್ಞಾನ ಶಿಕ್ಷಣ, ಇ-ಆಡಳಿತದ ವರ್ಗ ವಿಶಿಷ್ಟ ಉತ್ಪನ್ನಗಳ ಅನುಷ್ಠಾನ ಮತ್ತು ಅವುಗಳ ಬಿಡುಗಡೆ/ ವಿವಿಧ ವಲಯಗಳ ಉಪಕರಣಗಳು, ದತ್ತಾಂಶ ಕೇಂದ್ರಗಳ ಅಭಿವೃದ್ಧಿ ಇತ್ಯಾದಿಗಳಿಗೆ ಅನ್ವಯಿಸಿ ನಿಕಟ ಸಹಕಾರ ಉತ್ತೇಜಿಸುವ ಆಶಯವನ್ನು ಹೊಂದಿದೆ.

### ಹಿನ್ನೆಲೆ:

- ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯವು ಮಾಹಿತಿ ಸಂವಹನ ತಂತ್ರಜ್ಞಾನ (ಐ.ಸಿ.ಟಿ.) ದ ಉದಯಿಸುತ್ತಿರುವ ಮತ್ತು ಪ್ರಮುಖ ಮುಂಚೂಣಿ ಕ್ಷೇತ್ರಗಳಲ್ಲಿ ಅಂತಾರಾಷ್ಟ್ರೀಯ ಸಹಕಾರವನ್ನು ಉತ್ತೇಜಿಸುವ ಹೊಣೆಗಾರಿಕೆಯನ್ನು ಹೊಂದಿದ್ದು, ದ್ವಿಪಕ್ಷೀಯ ಮತ್ತು ಪ್ರಾದೇಶಿಕ ಚೌಕಟ್ಟಿನಡಿಯಲ್ಲಿ ಒಪ್ಪಂದಗಳನ್ನು/ ವಿವಿಧ ದೇಶಗಳ, ವಿವಿಧ ಏಜೆನ್ಸಿಗಳ ಜೊತೆ ಗುರುತಿಸಲ್ಪಟ್ಟ ಕ್ಷೇತ್ರಗಳಲ್ಲಿ ಮಾಹಿತಿ ವಿನಿಮಯ ಉತ್ತೇಜಿಸುವುದಕ್ಕಾಗಿ ಮಾಡಿಕೊಂಡಿದೆ.

## 8.ದೇಶದ್ರೋಹ ಕಾನೂನು

### ಪ್ರಮುಖ ಸುದ್ದಿ

ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

- ಬ್ರಿಟಿಷರ ಕಾಲದ ದೇಶದ್ರೋಹ ಕಾನೂನನ್ನು ರದ್ದುಪಡಿಸುವ ಪ್ರಸ್ತಾವವಿಲ್ಲ,ಕಾನೂನುಗಳಿಗೆ ತಿದ್ದುಪಡಿ ಮಾಡುವುದು ನಿರಂತರ ಪ್ರಕ್ರಿಯೆ ಎಂದು ಕೇಂದ್ರ ಸರಕಾರ ತಿಳಿಸಿದೆ.

### ಮುಖ್ಯ ಅಂಶಗಳು

- ಬ್ರಿಟಿಷರ ಕಾಲದ ದೇಶದ್ರೋಹ ಕಾನೂನನ್ನು ಅಧಿಕಾರದಲ್ಲಿರುವವರು ತಿರುಚುತ್ತಿದ್ದಾರೆ. ಆದ್ದರಿಂದ ಈ ಕಾನೂನನ್ನು ರದ್ದುಪಡಿಸಬೇಕು ಎಂದು ಪ್ರತಿಪಕ್ಷ ಸೇರಿದಂತೆ ಅನೇಕ ಮಂದಿ ಆಗ್ರಹಿಸಿದ್ದರು.

### ಕಾನೂನಿನ ಹಿನ್ನೆಲೆ

- ಭಾರತದಲ್ಲಿ 1857ರಲ್ಲಿ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಆಳ್ವಿಕೆ ಕೊನೆಗೊಂಡು ಬ್ರಿಟಿಷ್ ಸರಕಾರದ ನೇರ ಆಳ್ವಿಕೆ ಆರಂಭವಾಯಿತು.
- ಅದರ ಮರು ವರ್ಷ ಬ್ರಿಟಿಷ್ ಮಾದರಿಯ ನ್ಯಾಯಾಲಯಗಳ ಸ್ಥಾಪನೆ ಶುರುವಾಗಿ ಇವುಗಳ ಮೂಲಕ ಸಿವಿಲ್ ಮತ್ತು ಕ್ರಿಮಿನಲ್ ಕಾನೂನುಗಳು ಜಾರಿಗೆ ಬಂದವು.

- 1860ರಲ್ಲಿ ಭಾರತೀಯ ದಂಡ ಸಂಹಿತೆ (ಐಪಿಸಿ) ಕಾನೂನು ಜಾರಿಗೊಂಡಿತು. ಬರುಬರುತ್ತಾ ಬ್ರಿಟಿಷರ ವಿರುದ್ಧ ಅನೇಕ ಪತ್ರಿಕೆಗಳು ಜನಾಭಿಪ್ರಾಯ ಸಂಗ್ರಹಿಸಲು ಶುರು ಮಾಡಿದವು.
- ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಟ ಕೂಡ ಪ್ರಬಲವಾಯಿತು. ಪತ್ರಿಕಾ ಸ್ವಾತಂತ್ರ್ಯ ಹಾಗೂ ಸ್ವಾತಂತ್ರ್ಯ ಹೋರಾಟಗಾರರ ಬಾಯಿ ಮುಚ್ಚಿಸಲು ಬ್ರಿಟಿಷರು 15 ಬಗೆಯ ವಿವಿಧ ಕಾನೂನುಗಳನ್ನು ಜಾರಿಗೊಳಿಸಿದರು.
- ಅದರಲ್ಲಿ ಒಂದು 'ದೇಶದ್ರೋಹ' ಅಪರಾಧ, ಭಾರತೀಯ ದಂಡ ಸಂಹಿತೆಗೆ (ಐಪಿಸಿ )124(ಎ) ಎಂಬ ಕಲಮನ್ನು ಸೇರಿಸಲಾಯಿತು. ಈ ಕಲಮು ರಾಜದ್ರೋಹ ಅಥವಾ ದೇಶದ್ರೋಹವನ್ನು ವ್ಯಾಖ್ಯಾನಿಸುತ್ತದೆ.

### ಕಾನೂನಿನ ವ್ಯಾಖ್ಯಾನ:

- 124(ಎ) ಕಲಮಿನ ಪ್ರಕಾರ, ಯಾವುದೇ ವ್ಯಕ್ತಿಯ ಭಾಷಣ, ಬರಹ ಅಥವಾ ಇತರ ವಿಧಾನಗಳು ಸರಕಾರದ ವಿರುದ್ಧ ದ್ವೇಷ ಅಥವಾ ತಿರಸ್ಕಾರವನ್ನು ಬೆಳೆಸುತ್ತವೆಯೋ/ಬೆಳೆಸಲು ಪ್ರಯತ್ನಿಸುತ್ತವೆಯೋ ಅಥವಾ ಅತೃಪ್ತಿಯನ್ನು ಪ್ರಚೋದಿಸುತ್ತವೆಯೋ / ಪ್ರಚೋದಿಸಲು ಪ್ರಯತ್ನಿಸುತ್ತವೆಯೋ ಅಂತಹ ವ್ಯಕ್ತಿ ವಿರುದ್ಧ ರಾಜದ್ರೋಹ ಅಥವಾ ದೇಶದ್ರೋಹದ ಆಪಾದನೆ ಹೊರಿಸಬಹುದು.
- ದೇಶದ್ರೋಹ ಮಾಡಿದ ಅಪರಾಧಕ್ಕೆ ದಂಡ ಅಥವಾ ಸೆರೆವಾಸ ಶಿಕ್ಷೆ ವಿಧಿಸಬಹುದಾಗಿದ್ದು, ಇದನ್ನು ಆಜೀವ ಸೆರೆವಾಸದವರೆಗೂ ವಿಸ್ತರಿಸಬಹುದಾಗಿದೆ.

### ಇದರ ಕುರಿತು ಸುಪ್ರೀಂಕೋರ್ಟ್ ನೀಡಿರುವ ನಿದರ್ಶನ

- ಸುಪ್ರೀಂಕೋರ್ಟ್ ದೇಶದ್ರೋಹದ ಕುರಿತು ಅನೇಕ ಪ್ರಕರಣಗಳಲ್ಲಿ ಸ್ಪಷ್ಟ ವಿವರಣೆ ನೀಡಿದೆ. "ಕೇದಾರ್‌ನಾಥ್ ಸಿಂಗ್ ವರ್ಸಸ್ ಸ್ಟೇಟ್ ಆಫ್ ಬಿಹಾರ್ 1962 ಪ್ರಕರಣದಲ್ಲಿ ಐವರು ನ್ಯಾಯಮೂರ್ತಿಗಳ ಪೀಠವು, ಯಾವುದೇ ಭಾಷಣ ಅಥವಾ ಚಟುವಟಿಕೆ ದೇಶದ್ರೋಹ ಎನಿಸಿಕೊಳ್ಳಬೇಕಿದ್ದರೆ ಅದು ಹಿಂಸೆಗೆ ಪ್ರಚೋದನೆ ನೀಡುವಂತಿರಬೇಕು ಇಲ್ಲವೇ ಕಾನೂನು ಮತ್ತು ಸುವ್ಯವಸ್ಥೆಯನ್ನು ಹದಗೆಡಿಸುವಂತಿರಬೇಕು. ಇಲ್ಲದಿದ್ದರೆ ಅದು 'ದೇಶದ್ರೋಹ' ಆಗುವುದಿಲ್ಲ ಎಂದು ಸ್ಪಷ್ಟಪಡಿಸಿದೆ.

## 9. ಕಟ್ಟಡಗಳ ನಿರ್ಮಾಣಕ್ಕೆ ನಿರ್ಭಯಾ ನಿಧಿ ಬಳಕೆ

### ಪ್ರಮುಖ ಸುದ್ದಿ

- ನಿರ್ಭಯಾ ನಿಧಿಯ ಹಣವನ್ನು ಕಟ್ಟಡಗಳ ನಿರ್ಮಾಣ ಕಾರ್ಯಕ್ಕೆ ಬಳಸಿರುವುದಕ್ಕೆ ಸಂಸದೀಯ ಸಮಿತಿ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ.

### ಮುಖ್ಯ ಅಂಶಗಳು

- ಆ್ಯಸಿಡ್ ದಾಳಿ,ಅತ್ಯಾಚಾರ,ಕಳ್ಳಸಾಗಾಣಿಕೆ ಇತ್ಯಾದಿಗಳ ಸಂತ್ರಸ್ತ ಮಹಿಳೆಯರಿಗೆ ಪರಿಹಾರವನ್ನೊದಗಿಸುವ ಕೇಂದ್ರೀಯ ಸಂತ್ರಸ್ತೆಯರ ಪರಿಹಾರ ನಿಧಿ(ಸಿವಿಸಿಎಫ್)ಗೆ ಒಂದು ಬಾರಿಯ ಅನುದಾನವಾಗಿ 200 ಕೋ.ರೂ.ಗಳನ್ನು ಮಂಜೂರು ಮಾಡಿರುವುದನ್ನು ತನ್ನ ವರದಿಯಲ್ಲಿ ಉಲ್ಲೇಖಿಸಿರುವ ಸಮಿತಿಯು, ಸಿವಿಸಿಎಫ್ ಯೋಜನೆಯ ಅಗತ್ಯ ಮತ್ತು ಮಹತ್ವವನ್ನು ಪ್ರಶಂಸಿಸಿದೆಯಾದರೂ,ಈ ಯೋಜನೆಗೆ ಬೇರೆ ಮೂಲಗಳಿಂದ ಹಣವನ್ನು ಒದಗಿಸಬಹುದಿತ್ತು ಎಂದು ಹೇಳಿದೆ.
- 'ಕಟ್ಟಡ ನಿರ್ಮಾಣ ಕಾರ್ಯಕ್ಕೆ ಬೇರೆಯೇ ಮೂಲಗಳಿಂದ ಹಣಕಾಸು ಒದಗಿಸಬೇಕು. ಅಲ್ಲದೇ, ನಿರ್ಭಯಾ ನಿಧಿಯ ಹಣವನ್ನು ಈ ರೀತಿ ಬೇರೆ ಉದ್ದೇಶಗಳಿಗಾಗಿ ಬಳಸುವುದನ್ನು ತಡೆಯಲು ಗೃಹ ಸಚಿವಾಲಯ ಕ್ರಮ ಕೈಗೊಳ್ಳುವಂತೆ' ಸಮಿತಿ ಶಿಫಾರಸು ಮಾಡಿದೆ.

### ಏನಿದು ನಿರ್ಭಯಾ ನಿಧಿ ?

- ಮಹಿಳೆಯರ ಸುರಕ್ಷೆ ಹಾಗೂ ಸಬಲೀಕರಣಕ್ಕಾಗಿ ಕೇಂದ್ರ ಸರ್ಕಾರ 2013ರಲ್ಲಿ 'ನಿರ್ಭಯಾ ನಿಧಿ' ಸ್ಥಾಪಿಸಿತ್ತು. ಅದಕ್ಕೆ 1 ಸಾವಿರ ಕೋಟಿ ಕೊಡಲಾಗಿದೆ.
- ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ ಮತ್ತು ಹಲವಾರು ಇತರ ಸಚಿವಾಲಯಗಳಿಗೆ ಈ ನಿಧಿಯ ರಚನೆ, ವ್ಯಾಪ್ತಿ ಮತ್ತು ಅನ್ವಯಗಳ ವಿವರಗಳನ್ನು ಹೊರಡಿಸಲು ಅಧಿಕಾರ ನೀಡಿದೆ.
- ಹಣಕಾಸಿನ ಸಚಿವಾಲಯದ ಆರ್ಥಿಕ ವ್ಯವಹಾರಗಳ ಇಲಾಖೆಯು ಈ ನಿಧಿಯನ್ನು ನಿರ್ವಹಿಸುತ್ತದೆ.

## 10. ಭಾರತದಲ್ಲಿ ಯಾರು ಅಲ್ಪಸಂಖ್ಯಾತರು? ಸುಪ್ರೀಂ ಕೋರ್ಟ್

### ಪ್ರಮುಖ ಸುದ್ದಿ

- ಭಾರತದಲ್ಲಿ ನಿಜಕ್ಕೂ ಅಲ್ಪಸಂಖ್ಯಾತರು ಯಾರು? ಹೀಗೊಂದು ಪ್ರಶ್ನೆಗೆ ಉತ್ತರ ಕಂಡುಕೊಳ್ಳಲು ರಾಷ್ಟ್ರೀಯ ಅಲ್ಪಸಂಖ್ಯಾತ ಆಯೋಗಕ್ಕೆ (ಎನ್‌ಸಿಎಂ) ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ.

### ಮುಖ್ಯ ಅಂಶಗಳು

- ರಾಜ್ಯವಾರು ಜನಸಂಖ್ಯೆ ಆಧರಿಸಿ ಮೂರು ತಿಂಗಳೊಳಗೆ 'ಅಲ್ಪಸಂಖ್ಯಾತ' ಪದವನ್ನು ವ್ಯಾಖ್ಯಾನಿಸುವಂತೆ ಸುಪ್ರೀಂ ಕೋರ್ಟ್ ಆದೇಶಿಸಿದೆ. ಪ್ರಸ್ತುತ ರಾಷ್ಟ್ರೀಯ ಜನಸಂಖ್ಯೆ ಡೇಟಾ ಆಧರಿಸಿ 'ಅಲ್ಪಸಂಖ್ಯಾತ' ಪದವನ್ನು ವ್ಯಾಖ್ಯಾನಿಸಲಾಗುತ್ತಿದೆ.
- ಅಲ್ಪಸಂಖ್ಯಾತ ಪದಕ್ಕೆ ಸಂವಿಧಾನದಲ್ಲಿ ಯಾವುದೇ ವ್ಯಾಖ್ಯಾನವಿಲ್ಲ. ಆರು ಧಾರ್ಮಿಕ ಸಮುದಾಯಗಳನ್ನು (ಮುಸ್ಲಿಮರು, ಕ್ರಿಶ್ಚಿಯನ್ನರು, ಸಿಕ್ಖರು, ಬೌದ್ಧರು, ಪಾರ್ಸಿಗಳು ಮತ್ತು ಜೈನರು) ಅಲ್ಪಸಂಖ್ಯಾತರೆಂದು ಕೇಂದ್ರ ಸರಕಾರ ಗುರುತಿಸಿದೆ.

### ಸುಪ್ರೀಂ ಕೋರ್ಟ್ ಈ ನಿರ್ದೇಶನ ನೀಡಲು ಕಾರಣವೇನು ?

- ರಾಷ್ಟ್ರೀಯ ಜನಸಂಖ್ಯೆ ಪ್ರಕಾರ ಹಿಂದೂಗಳು ಬಹುಸಂಖ್ಯಾತರು ಎಂಬುದು ನಿಜ. ಆದರೆ ಹಲವು ಈಶಾನ್ಯ ರಾಜ್ಯಗಳಲ್ಲಿ ಮತ್ತು ಜಮ್ಮು-ಕಾಶ್ಮೀರದಲ್ಲಿ ಹಿಂದೂಗಳೇ ಅಲ್ಪಸಂಖ್ಯಾತರಾಗಿದ್ದಾರೆ. ಹಾಗಿದ್ದರೂ ಅಲ್ಪಸಂಖ್ಯಾತರಿಗೆ ಸಿಗಬೇಕಾದ ಎಲ್ಲ ಸೌಲಭ್ಯಗಳಿಂದ ಅವರು ವಂಚಿತರಾಗಿದ್ದಾರೆ ಎಂದು ವಿವರಿಸಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದಾರೆ.
- ಏಳು ರಾಜ್ಯಗಳು ಮತ್ತು ಒಂದು ಕೇಂದ್ರಾಡಳಿತ ಪ್ರದೇಶದಲ್ಲಿ ಹಿಂದೂಗಳ ಜನಸಂಖ್ಯೆ ಶೇ 50ಕ್ಕಿಂತಲೂ ಕಡಿಮೆಯಿದೆ. ಅವರಿಗೆ ಅಲ್ಪಸಂಖ್ಯಾತ ಸ್ಥಾನಮಾನ ನೀಡಬೇಕು ಎಂದು ಕೋರಿ ಸುಪ್ರೀಂ ಕೋರ್ಟಿಗೆ ಅರ್ಜಿ ಸಲ್ಲಿಸಲಾಗಿದೆ. ಆ ರಾಜ್ಯಗಳು ಎಂದರೆ ಲಕ್ಷದ್ವೀಪ 2.5%, ಮಿಜೋರಾಂ 2.75 %, ನಾಗಾಲ್ಯಾಂಡ್ 8.75%, ಮೇಘಾಲಯ 11.53%, ಜಮ್ಮು ಮತ್ತು ಕಾಶ್ಮೀರ 28.44 %, ಅರುಣಾಚಲ ಪ್ರದೇಶ 29%, ಮಣಿಪುರ 31.39% ಹಾಗೂ ಪಂಜಾಬ್ 38.40%.

**ಹಿನ್ನೆಲೆ**

- 2017ರ ಡಿಸೆಂಬರ್‌ನಲ್ಲಿ ರಾಷ್ಟ್ರೀಯ ಅಲ್ಪಸಂಖ್ಯಾತ ಆಯೋಗ ಈ ವಿಷಯದ ಬಗ್ಗೆ ಅಧ್ಯಯನ ನಡೆಸಲು ಮೂವರು ಸದಸ್ಯರ ಸಮಿತಿ ನೇಮಿಸಿತ್ತು. ಅದರ ವರದಿ ಪ್ರಕಾರ, 'ಸಂವಿಧಾನ ಕೇವಲ 6 ಸಮುದಾಯಗಳಿಗೆ ಮಾತ್ರ ಅಲ್ಪಸಂಖ್ಯಾತ ಸ್ಥಾನಮಾನ ನೀಡಿದ್ದು, ಸಾಂವಿಧಾನಿಕ ಇತಿಮಿತಿಗಳ ಕಾರಣ ರಾಷ್ಟ್ರಮಟ್ಟದಲ್ಲಿ ಹಿಂದೂಗಳನ್ನು ಅಲ್ಪಸಂಖ್ಯಾತರೆಂದು ಮಾನ್ಯ ಮಾಡಲು ಸಾಧ್ಯವಿಲ್ಲ... ಆದರೆ ರಾಜ್ಯಗಳು ತಮ್ಮ ಮಟ್ಟದಲ್ಲಿ ತಮ್ಮದೇ ಆದ ಅಲ್ಪಸಂಖ್ಯಾತ ವರ್ಗೀಕರಣ ಮಾಡಬಹುದು' ಎಂದು ಹೇಳಿತ್ತು. ಈಗಾಗಲೇ ಕನಿಷ್ಠ 15 ರಾಜ್ಯಗಳಲ್ಲಿ ಅವುಗಳದೇ ಆದ ಪ್ರತ್ಯೇಕ ಆಯೋಗಗಳಿವೆ.
- ಆದರೆ ಅಲ್ಪಸಂಖ್ಯಾತರ ಜನಸಂಖ್ಯಾ ಬದಲಾವಣೆ ವಿಚಾರ ಬಂದಾಗ, ರಾಷ್ಟ್ರಮಟ್ಟದಲ್ಲಿ, ರಾಜ್ಯಮಟ್ಟದಲ್ಲಿ ಹಾಗೂ ಜಿಲ್ಲಾಮಟ್ಟದಲ್ಲಿ ಪ್ರತ್ಯೇಕ ಮಾನದಂಡಗಳನ್ನು ಅನುಸರಿಸಬೇಕಾಗುತ್ತದೆ. ಒಂದು ರಾಜ್ಯದಲ್ಲಿ ಅಲ್ಪಸಂಖ್ಯಾತವೆನಿಸಿದ ಸಮುದಾಯ ಕೆಲವು ಪ್ರದೇಶಗಳಲ್ಲಿ ಹೆಚ್ಚಿನ ಪ್ರಾಬಲ್ಯ ಹೊಂದಿರಬಹುದು. ಉದಾಹರಣೆಗೆ, ಮಣಿಪುರದ ನಾಲ್ಕು ಜಿಲ್ಲೆಗಳಲ್ಲಿ ಕ್ರೈಸ್ತರೇ ಬಹುಸಂಖ್ಯಾತರು. ಕೇರಳದ ಮಲಪ್ಪುರಂ ಜಿಲ್ಲೆಯಲ್ಲಿ ಮುಸ್ಲಿಮರ ಜನಸಂಖ್ಯೆ ಶೇ 70ಕ್ಕೂ ಹೆಚ್ಚಾಗಿದೆ. ಸಿಕ್ಕಿಂನ ಉತ್ತರ ಜಿಲ್ಲೆ ಹಾಗೂ ಅರುಣಾಚಲದ ತವಾಂಗ್ ಜಿಲ್ಲೆಯಲ್ಲಿ ಬೌದ್ಧರೇ ಬಹುಸಂಖ್ಯಾತರು. ಹೀಗಾಗಿ ಯಾರು ಅಲ್ಪಸಂಖ್ಯಾತರು, ಯಾರು ಬಹುಸಂಖ್ಯಾತರು ಎಂದು - ರಾಷ್ಟ್ರ, ರಾಜ್ಯ ಅಥವಾ ಜಿಲ್ಲೆ- ಯಾವ ಮಟ್ಟದಲ್ಲಿ ನಿರ್ಧರಿಸಬೇಕು ಎಂಬುದೇ ಪ್ರಶ್ನೆಯಾಗಿದೆ.

## 11. ಅನಿವಾಸಿ ಭಾರತೀಯರ ವಿವಾಹ ನೋಂದಣಿ ಕಡ್ಡಾಯಗೊಳಿಸುವ ಮಸೂದೆ

**ಪ್ರಮುಖ ಸುದ್ದಿ**

- ಅನಿವಾಸಿ ಭಾರತೀಯರು(ಎನ್‌ಆರ್‌ಐ) ಭಾರತದ ಮಹಿಳೆಯರನ್ನು ವಿವಾಹವಾಗಿ ವಂಚಿಸುವ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ, ಇಂತಹ ವಿವಾಹವನ್ನು 30 ದಿನದೊಳಗೆ ನೋಂದಣಿ ಮಾಡುವುದನ್ನು ಕಡ್ಡಾಯಗೊಳಿಸುವ ಮಸೂದೆಯನ್ನು ರಾಜ್ಯಸಭೆಯಲ್ಲಿ ಮಂಡಿಸಲಾಗಿದೆ.

## ಮುಖ್ಯ ಅಂಶಗಳು

- ಅನಿವಾಸಿ ಭಾರತೀಯ ತನ್ನ ಮದುವೆಯನ್ನು 30 ದಿನದೊಳಗೆ ನೋಂದಣಿ ಮಾಡಿಸಿಕೊಳ್ಳದಿದ್ದಲ್ಲಿ ಆತನ ಪಾಸ್‌ಪೋರ್ಟನ್ನು ಮುಟ್ಟುಗೋಲು ಹಾಕಿಕೊಳ್ಳಲು ಅಥವಾ ರದ್ದುಗೊಳಿಸಲು ಪಾಸ್‌ಪೋರ್ಟ್ ಅಧಿಕಾರಿಗಳಿಗೆ ಅವಕಾಶ ನೀಡುವ ಮಸೂದೆ ಇದಾಗಿದೆ. ಅಲ್ಲದೆ ಇಂತಹವರ ವಿರುದ್ಧ ವಾರಾಂಟ್ ಹೊರಡಿಸುವುದರ ಜೊತೆಗೆ, 'ಘೋಷಿತ ಅಪರಾಧಿಗಳ' ಸ್ಥಿರ ಮತ್ತು ಚರ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲೂ ಅನಿವಾಸಿ ಭಾರತೀಯರ ವಿವಾಹ ನೋಂದಣಿ ಮಸೂದೆ 2019ರಲ್ಲಿ ಅವಕಾಶವಿರುತ್ತದೆ.
- ಭಾರತದಲ್ಲಿ ಅಥವಾ ವಿದೇಶದಲ್ಲಿ ಭಾರತೀಯ ಮಹಿಳೆಯನ್ನು ವಿವಾಹವಾಗುವ ಎನ್‌ಆರ್‌ಐ ಗಳಿಗೆ ಈ ಪ್ರಸ್ತಾವಿತ ಕಾನೂನು ಅನ್ವಯವಾಗುತ್ತದೆ.

## ಅನಿವಾಸಿ ಭಾರತೀಯ ವಿವಾಹ ನೋಂದಣಿ ಕಾಯ್ದೆಯ ಪ್ರಮುಖ ಅಂಶಗಳು:

- ಅನಿವಾಸಿಗಳು ಕಾನೂನಿಗೆ ವಿರುದ್ಧವಾಗಿ ನಡೆದುಕೊಂಡಲ್ಲಿ ಅವರ ಚರ ಸ್ಥಿರ ಆಸ್ತಿಗಳನ್ನು ವಶಕೆ ಪಡೆಯಲು ನ್ಯಾಯಾಲಯಕ್ಕೆ ಅವಕಾಶ ಕಲ್ಪಿಸುತ್ತದೆ. ಅಲ್ಲದೆ ಅವರು ಘೋಷಿತ ಅಪರಾಧಿಗಳು ಎಂದು ಘೋಷಿಸಲ್ಪಡುವರು.
- ಕರಡು ಕಾನೂನಿನನ್ವಯ ನ್ಯಾಯಾಲಯಗಳು ಹಾಗೂ ವಿದೇಶಾಂಗ ವ್ಯವಹಾರಗಳ ಸಚಿವಾಲಯಗೊತ್ತುಪಡಿಸಿದ ವೆಬ್ ಸೈಟ್ ಮೂಲಕ ಆರೋಪಿಗಳಿಗೆ ಸಮನ್ಸ್ ಮತ್ತು ವಾರೆಂಟ್‌ಗಳನ್ನು ಕಳುಹಿಸಲು ಅವಕಾಶವಿದೆ.
- ಅನಿವಾಸಿ ಭಾರತೀಯರು ಭಾರತೀಯ ಯುವತಿಯರನ್ನು ಮೋಸದಿಂದ ವಿವಾಹವಾಗುವುದನ್ನು ತಪ್ಪಿಸಲು ಅಗತ್ಯ ಕ್ರಮವಾಗುತ್ತದೆ.
- ಮಸೂದೆ ಪ್ರಕಾರ ಅಧಿಕಾರಿಗಳು ಪಾಸ್ ಪೋರ್ಟ್ ಅಥವಾ ಆರೋಪಿಯ ಇನ್ನಾವುದೇ ಪ್ರಯಾಣದ ದಾಖಲೆಗಳನ್ನು ರದ್ದುಗೊಳಿಸಲು ಅಥವಾ ಅನುಮತಿ ನಿರಾಕರಿಸಲು ಪಾಸ್‌ಪೋರ್ಟ್ ಆಕ್ಟ್ ಹಾಗೂ ಕ್ರಿಮಿನಲ್ ವಿಧಿಯನ್ನು ತಿದ್ದುಪಡಿ ಮಾಡಲಾಗುವುದು.
- ನ್ಯಾಯಾಲಯಗಳು ಅವರ ಆಸ್ತಿಗಳನ್ನು ವಶಕ್ಕೆ ಪಡೆಯಲು ಅವಕಾಶ ಕಲ್ಪಿಸಿಕೊಡಲಾಗುವುದು. ಒಬ್ಬ ಭಾರತೀಯ ನಾಗರಿಕನನ್ನು ಮದುವೆಯಾಗಿದ್ದರೆ, ಸ್ಥಳೀಯ ಕಾನೂನಿನ ಪ್ರಕಾರ ಮದುವೆ ನೋಂದಾಯಿಸಿಕೊಳ್ಳಬೇಕು ಎಂದು ಈ ಮಸೂದೆ ತಿಳಿಸುತ್ತದೆ.
- ಮದುವೆ ವಿದೇಶದಲ್ಲಿ ನಡೆಯುವುದಾದರೆ, ವಿದೇಶಿ ರಾಷ್ಟ್ರಗಳಲ್ಲಿ ನೇಮಕವಾಗಿರುವ ಗೊತ್ತಾದ ಅಧಿಕಾರಿಗಳಲ್ಲಿ ಅದರ ನೋಂದಣಿ ಆಗಬೇಕು. ಪ್ರಸ್ತಾಪಿತ ಕಾನೂನು ಭಾರತೀಯ ಮಹಿಳೆಯರಿಗೆ ಭಾರತದ ಒಳಗೆ ಅಥವಾ ಹೊರಗೆ ಮದುವೆಯಾಗುತ್ತಿರುವ ಎನ್‌ಆರ್‌ಐ ಗಳಿಗೆ ಅನ್ವಯಿಸುತ್ತದೆ.

## 12. ಸಾಕ್ಷಿಗಳ ರಕ್ಷಣಾ ಯೋಜನೆ' ಜಾರಿಗೆ ಸುಪ್ರೀಂ ಆದೇಶ

### ಪ್ರಮುಖ ಸುದ್ದಿ

- ಕ್ರಿಮಿನಲ್ ನ್ಯಾಯ ವ್ಯವಸ್ಥೆಯ ಸುಧಾರಣೆಗೆ ಒಂದೂವರೆ ದಶಕದ ಹಿಂದೆ ಕರ್ನಾಟಕದ ನ್ಯಾ.ವಿ.ಎಸ್.ಮಳೀಮಠ್ ಸಲ್ಲಿಸಿದ್ದ ವರದಿಯ ಪ್ರಮುಖ ಅಂಶವಾದ 'ಸಾಕ್ಷಿಗಳ ರಕ್ಷಣಾ ಯೋಜನೆ' ದೇಶಾದ್ಯಂತ ಜಾರಿಯಾಗುತ್ತಿದೆ.

### ಮುಖ್ಯ ಅಂಶಗಳು

- ಸುಪ್ರೀಂಕೋರ್ಟ್ ಇತ್ತೀಚೆಗೆ ಸಾಕ್ಷಿಗಳ ರಕ್ಷಣಾ ಯೋಜನೆ ಕುರಿತು ಕೇಂದ್ರ ಸರಕಾರ ಸಲ್ಲಿಸಿದ್ದ ಅಂತಿಮ ಕರಡನ್ನು ಅನುಮೋದಿಸಿದೆ. ಅಲ್ಲದೆ, ಸಂಸತ್ ಈ ಬಗ್ಗೆ ಕಾಯಿದೆ ರೂಪಿಸಿ ಅನುಷ್ಠಾನಗೊಳಿಸುವವರೆಗೆ ಕಾಯದೆ ರಾಜ್ಯಗಳು ಕೂಡಲೇ ಅದನ್ನು ಜಾರಿಗೊಳಿಸಬೇಕೆಂದು ಆದೇಶಿಸಿದೆ.

### ಇದರಿಂದ ಆಗುವ ಪ್ರಯೋಜನಗಳು ?

- ಈ ಕಾಯಿದೆಯಿಂದಾಗಿ ಅಪರಾಧ ಪ್ರಕರಣಗಳಲ್ಲಿ ಸಾಕ್ಷ್ಯ ಹೇಳಲು ಹೆದರಬೇಕಾಗಿಲ್ಲ.
- ಬೆದರಿಕೆಗೆ ಮಣಿದು ಪ್ರತಿಕೂಲ ಸಾಕ್ಷ್ಯ ನುಡಿಯುವ ಅಗತ್ಯವಿಲ್ಲ.
- ಪ್ರತ್ಯಕ್ಷವಾಗಿ ಕಂಡದ್ದನ್ನು ಧೈರ್ಯವಾಗಿ ಹೇಳಬಹುದು.
- ಸಾಕ್ಷಿದಾರರಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳಬೇಕಾದ ಜವಾಬ್ದಾರಿ ಕೇಂದ್ರ ಮತ್ತು ರಾಜ್ಯ ಸರಕಾರಗಳದ್ದಾಗಿದೆ.
- ಸಾಕ್ಷಿಗಳಿಗೆ ರಕ್ಷಣೆ ಜತೆಗೆ ಆರ್ಥಿಕ ನೆರವೂ ನೀಡಬೇಕಿದೆ.

ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

### ಮಳೀಮಠ್ ವರದಿ ಹಿನ್ನೆಲೆ

- 2000ರಲ್ಲಿ ಆಗಿನ ಎನ್‌ಡಿಎ ಸರಕಾರ ಕ್ರಿಮಿನಲ್ ನ್ಯಾಯ ವ್ಯವಸ್ಥೆ ಸುಧಾರಣೆಗಾಗಿ ಕೇರಳ ಹೈಕೋರ್ಟ್‌ನ ಸಿಜೆ ಆಗಿದ್ದ ಕರ್ನಾಟಕದ ನ್ಯಾಯಮೂರ್ತಿ ವಿ.ಎಸ್.ಮಳೀಮಠ್ ನೇತೃತ್ವದ ಸಮಿತಿ ರಚನೆ ಮಾಡಿತ್ತು. ಅದು 2003ರಲ್ಲಿ 20 ಪ್ರಮುಖ ಅಂಶಗಳ ಬಗ್ಗೆ 158 ಶಿಫಾರಸುಗಳನ್ನು ಒಳಗೊಂಡ ವರದಿಯನ್ನು ಅಂದಿನ ಉಪ ಪ್ರಧಾನಿ ಹಾಗೂ ಗೃಹ ಸಚಿವ ಎಲ್.ಕೆ.ಅಡ್ವಾಣಿ ಅವರಿಗೆ ನೀಡಿತ್ತು.
- ಸಮಿತಿ ಒಟ್ಟಾರೆ, 'ಪ್ರಸ್ತುತ ನ್ಯಾಯದಾನ ವ್ಯವಸ್ಥೆ ಆರೋಪಿಗಳ ಪರವಾಗಿದೆ. ಅಪರಾಧ ಪ್ರಕರಣಗಳ ಸಂತ್ರಸ್ತರಿಗೆ ನ್ಯಾಯ ದೊರಕಿಸುವುದಕ್ಕೆ ಆದ್ಯತೆ ಇಲ್ಲ' ಎಂದು ಹೇಳಿತ್ತು.
- ಭಾರತೀಯ ದಂಡ ಸಂಹಿತೆ (ಐಪಿಸಿ)ಕಾಯಿದೆ ಸೆಕ್ಷನ್ 195 ಪ್ರಕಾರ, ಸಾಕ್ಷಿಗಳು ತಮ್ಮ ರಕ್ಷಣೆಗೆ ಸಂಬಂಧಿಸಿದ ಅಧಿಕಾರಿಗಳಿಂದ ನೆರವು ಪಡೆದುಕೊಳ್ಳಲು ಅವಕಾಶವಿದೆ. ಆದರೆ ಅದರಲ್ಲಿ ಯಾವ್ಯಾವ ರೀತಿಯ ಸಹಾಯ, ಏನು ಮಾಡಬೇಕು ಎಂಬ ಬಗ್ಗೆ ಸ್ಪಷ್ಟತೆ ಇರಲಿಲ್ಲ. ಆದ್ದರಿಂದ ಬಲಿಷ್ಠವಾದ ಸಾಕ್ಷಿಗಳ ರಕ್ಷಣಾ ವ್ಯವಸ್ಥೆ ರೂಪಿಸುವ ಅಗತ್ಯವಿದ್ದು, ನ್ಯಾಯಾಧೀಶರೇ ವಿಚಾರಣೆ ವೇಳೆ ಸಾಕ್ಷ್ಯಗಳ ಪರ ನಿಲ್ಲಬೇಕಾಗಿದೆ. ಅವರನ್ನು ಗೌರವಯುತವಾಗಿ ನಡೆಸಿಕೊಂಡು ಭತ್ಯೆಯನ್ನೂ

ನೀಡಬೇಕು. ಅಮೆರಿಕ ಮಾದರಿಯಲ್ಲಿ ಪ್ರತ್ಯೇಕ ಸಾಕ್ಷಿಗಳ ರಕ್ಷಣಾ ಕಾನೂನು ರೂಪಿಸಬೇಕು' ಎಂದು ಶಿಫಾರಸು ಮಾಡಿತ್ತು.

- ಕಾನೂನು ಆಯೋಗವೂ ತನ್ನ 198ನೇ ವರದಿಯಲ್ಲಿ ಇದೇ ಅಭಿಪ್ರಾಯವನ್ನು ಪ್ರತಿಪಾದಿಸಿತ್ತು.
- ನಾನಾ ಕಾರಣಗಳಿಂದಾಗಿ ಮಳೀಮಠ್ ವರದಿಯ ಶಿಫಾರಸು ಜಾರಿಗೊಂಡಿರಲಿಲ್ಲ.ಆದರೆ, ಆಸಾರಾಂ ಬಾಪು ಪ್ರಕರಣದಲ್ಲಿ ಅತ್ಯಾಚಾರಕ್ಕೊಳಗಾದ ಕೆಲವು ಸಂತ್ರಸ್ತರು ಸಾಕ್ಷಿ ನುಡಿಯಲು ರಕ್ಷಣೆ ಕೋರಿ ಸಲ್ಲಿಸಿದ್ದ ಪಿಐಎಲ್ ವಿಚಾರಣೆ ವೇಳೆ ಸುಪ್ರೀಂಕೋರ್ಟ್, ಕೇಂದ್ರ ಸರಕಾರದ ನಿಲುವು ಕೇಳಿತ್ತು. ಈಗ ಕೇಂದ್ರ ಸರಕಾರ ಸಾಕ್ಷಿಗಳ ರಕ್ಷಣಾ ಯೋಜನೆ ರೂಪಿಸಿ ಸುಪ್ರೀಂಕೋರ್ಟ್‌ಗೆ ಸಲ್ಲಿಸಿದೆ.

### ಎಲ್ಲೆಲ್ಲಿ ಸಾಕ್ಷಿಗಳ ರಕ್ಷಣಾ ವ್ಯವಸ್ಥೆ ಇದೆ ?

- ಅಮೆರಿಕ, ಬ್ರಿಟನ್, ಚೀನಾ, ಇಟಲಿ, ಕೆನಡಾ, ಹಾಂಕಾಂಗ್, ಐರ್ಲೆಂಡ್

### ಸಾಕ್ಷಿಗಳ ರಕ್ಷಣಾ ಕ್ರಮಗಳೇನು?

- ವಿಚಾರಣೆ ವೇಳೆ ಸಾಕ್ಷಿ ಹಾಗೂ ಆರೋಪಿಗಳು ಮುಖಾಮುಖಿಯಾಗದಂತೆ ನೋಡಿಕೊಳ್ಳುವುದು.
- ಸಾಕ್ಷಿಗಳ ದೂರವಾಣಿ ಕರೆ ಮತ್ತು ಇ-ಮೇಲ್‌ಗಳ ಮೇಲೆ ನಿಗಾ
- ಸಾಕ್ಷಿದಾರರ ಮನೆಗಳಲ್ಲಿ ಸಿಸಿಟಿವಿ ಅಳವಡಿಕೆ
- ಸಾಕ್ಷಿಗಳ ವಿವರದ ಗೌಪ್ಯತೆ
- ಸಾಕ್ಷಿಗಳಿಗೆ ತುರ್ತು ಸಂಪರ್ಕಕ್ಕೆ ವ್ಯವಸ್ಥೆ
- ಸಾಕ್ಷಿಗಳ ಮನೆಗಳ ಸುತ್ತ ನಿರಂತರ ಗಸ್ತು ವ್ಯವಸ್ಥೆ
- ಇನ್ ಕ್ಯಾಮೆರಾ ಮೂಲಕ ಸಾಕ್ಷಿಗಳ ವಿಚಾರಣೆ
- ಸಾಕ್ಷಿಗಳಿಗೆ ಹಣಕಾಸಿನ ನೆರವು ಅಥವಾ ಸಹಾಯ
- ಅಗತ್ಯಬಿದ್ದರೆ ಸುರಕ್ಷಿತ ಸ್ಥಳಕ್ಕೆ ಸಾಕ್ಷಿಗಳ ತಾತ್ಕಾಲಿಕ ಸ್ಥಳಾಂತರ
- ಸಾಕ್ಷಿಗಳ ರಕ್ಷಣಾ ಯೋಜನೆ ಯಲ್ಲಿ ಅಪಾಯದ ಗ್ರಹಿಕೆ ಆಧರಿಸಿ ರಕ್ಷಣೆಗೆ ಎ.ಬಿ.ಸಿ ಎಂದು ಮೂರು ಕೆಟಗರಿಗಳನ್ನು ಮಾಡಲಾಗಿದೆ.
- ಸಾಕ್ಷಿಗಳು ಅರ್ಜಿ ಸಲ್ಲಿಸಿದ ನಂತರ ಅದನ್ನು ಪರಿಶೀಲಿಸಿದ ಬಳಿಕ, ಹಿರಿಯ ಪೊಲೀಸ್ ಅಧಿಕಾರಿಗಳು ಆಯಾ ಪ್ರದೇಶದ ಎಸಿಪಿ/ಡಿಸಿಪಿಗಳಿಂದ ವರದ ತರಿಸಿಕೊಂಡು ಯಾವ ಕೆಟಗರಿ ಅಡಿ ರಕ್ಷಣೆ ನೀಡಬೇಕೆಂದು ತೀರ್ಮಾನಿಸುತ್ತಾರೆ.

## 13. ಸಮಗ್ರ ರಾಷ್ಟ್ರೀಯ ಅಪ್ರೆಂಟಿಸ್‌ಶಿಪ್' ಯೋಜನೆ

### ಪ್ರಮುಖ ಸುದ್ದಿ

- ಮಾನವ ಸಂಪನ್ಮೂಲ ಇಲಾಖೆ, ಕಾರ್ಮಿಕ ಮತ್ತು ಕೌಶಲಾಭಿವೃದ್ಧಿ ಇಲಾಖೆಗಳ ಜಂಟಿ ಸಹಯೋಗದಲ್ಲಿ 'ಸಮಗ್ರ ರಾಷ್ಟ್ರೀಯ ಅಪ್ರೆಂಟಿಸ್‌ಶಿಪ್' ಯೋಜನೆ 2019-20ರ ಶೈಕ್ಷಣಿಕ ವರ್ಷದಿಂದ ಆರಂಭವಾಗಲಿದೆ.

### ಮುಖ್ಯ ಅಂಶಗಳು

### ಯೋಜನೆ ಯಾರಿಗೆ ಅನ್ವಯಿಸಲಿದೆ ?

- ಮೊದಲ ವರ್ಷ 10 ಲಕ್ಷಕ್ಕೂ ಅಧಿಕ ಪದವಿ ಪೂರ್ವ ವಿದ್ಯಾರ್ಥಿಗಳಿಗೆ ತರಬೇತಿಯ ಜತೆಗೆ ಸರಕಾರದಿಂದ ಸ್ಟೈಪೆಂಡ್‌ನ ಶೇ.25 ಪಾಲು, ಅಂದರೆ ಪ್ರತಿ ತಿಂಗಳು 1,500 ರೂ. ತನಕ ದೊರೆಯಲಿದೆ.
- 6ರಿಂದ 10 ತಿಂಗಳ ಈ ಮೆಗಾ ಅಪ್ರೆಂಟಿಸ್‌ಶಿಪ್ ಖಾಸಗಿ ಮತ್ತು ಸರಕಾರಿ ಅನುದಾನಿತ ಉನ್ನತ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳಿಗೂ ದೊರೆಯಲಿದೆ.
- ಮುಂದಿನ ಹಂತದಲ್ಲಿ ಡಿಗ್ರಿ ಮುಗಿಸಿ ಹೊರ ಬರುವ 80 ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳಿಗೂ ಇದು ವಿಸ್ತರಣೆಯಾಗಲಿದೆ.
- ಮಾನವಿಕ ಮತ್ತು ಇತರ ತಾಂತ್ರಿಕೇತರ ಕೋರ್ಸ್‌ಗಳನ್ನು ಕಲಿಯುತ್ತಿರುವ, ಪದವಿಯ ಅಂತಿಮ ವರ್ಷದಲ್ಲಿರುವ ವಿದ್ಯಾರ್ಥಿಗಳಿಗೆ ಆದ್ಯತೆ ಸಿಗಲಿದೆ.

### ಏಕೆ ಈ ಯೋಜನೆ ?

- ವೃತ್ತಿಪರ ಹಾಗೂ ತಾಂತ್ರಿಕ ಶಿಕ್ಷಣದ ವಿದ್ಯಾರ್ಥಿಗಳಿಗೆ ಕಾರ್ಪೊರೇಟ್ ವಲಯದಲ್ಲಿ ಉದ್ಯೋಗಕ್ಕೆ ಸೇರುವುದು ಕಷ್ಟವಲ್ಲ. ಆದರೆ ಮಾನವಿಕ ಇತ್ಯಾದಿ ತಾಂತ್ರಿಕೇತರ ವಿಷಯಗಳಿಗೂ ಉದ್ದಿಮೆಗಳಿಗೂ ಸಂಬಂಧ ಕಡಿಮೆ. ಹೀಗಾಗಿ ನಿರುದ್ಯೋಗಿಗಳಲ್ಲಿ ಹೆಚ್ಚಿನವರೂ ತಾಂತ್ರಿಕೇತರ ಕೋರ್ಸ್ ಓದಿದವರು. ಇವರಲ್ಲಿ ಕೆಲವರು ಮಾತ್ರ ಸ್ನಾತಕೋತ್ತರ ಅಧ್ಯಯನ ಮತ್ತು ಮುಂದಿನ ಹಂತದ ವ್ಯಾಸಂಗ ನಿರತರಾಗುತ್ತಾರೆ. ಆದ್ದರಿಂದ ಕರಿಯರ್ ಕೌನ್ಸೆಲಿಂಗ್ ಮತ್ತು ಸೂಕ್ತ ಅಪ್ರೆಂಟಿಸ್‌ಶಿಪ್ ನೀಡಲು ಸರಕಾರ ತೀರ್ಮಾನಿಸಿದೆ.
- ವಿದ್ಯಾರ್ಥಿಗಳಿಗೆ ಕಾರ್ಪೊರೇಟ್ ವಲಯದ ಸಂಪರ್ಕ, ಉದ್ಯೋಗಾವಕಾಶ ಕಲ್ಪಿಸಲು ಇದು ಸಹಾಯಕವಾಗಲಿದೆ. ಸ್ಟೈಫಂಡ್‌ನ ಶೇ.25ರಷ್ಟು ಮೊತ್ತವನ್ನು ಸರಕಾರವೇ ಭರಿಸಲಿರುವುದರಿಂದ, ಉದ್ಯೋಗದಾತರಿಗೂ ಹೆಚ್ಚು ಮಂದಿಯನ್ನು ಅಪ್ರೆಂಟಿಸ್‌ಶಿಪ್ ತರಬೇತಿಗೆ ಸೇರಿಸಿಕೊಳ್ಳಲು ಉತ್ತೇಜನ ಸಿಗಲಿದೆ.
- ಕೇಂದ್ರ ಸಾರ್ವಜನಿಕ ವಲಯದ ಉದ್ದಿಮೆಗಳು, ಕೌಶಲಾಭಿವೃದ್ಧಿ ಕೇಂದ್ರಗಳು ಹಾಗೂ ಬೃಹತ್ ಕಾರ್ಪೊರೇಟ್ ವಲಯ ಈ ಯೋಜನೆಯಲ್ಲಿ ತೊಡಗಿಸಿಕೊಳ್ಳಲಿದೆ. ಇದರಿಂದಾಗಿ ತರಬೇತಿಯ ಗುಣಮಟ್ಟ ವೃದ್ಧಿಸಲಿದೆ.

## INTERNATIONAL RELATIONS

### 1. ಪರಮಾಣು ಪೂರೈಕೆದಾರರ ಸಮೂಹ (ಎನ್‌ಎಸ್‌ಜಿ)

**ಪ್ರಮುಖ ಸುದ್ದಿ**

- ಎನ್‌ಎಸ್‌ಜಿಗೆ ಸೇರಲು ಭಾರತಕ್ಕೆ ಸದಸ್ಯತ್ವ ಕೊಡಕೂಡದು ಎಂಬ ತನ್ನ ನಿಲುವನ್ನು ದುರ್ಬಲಗೊಳಿಸಲು ಚೀನಾ ನಿರಾಕರಿಸಿದೆ.

**ಮುಖ್ಯ ಅಂಶಗಳು**

**ಚೀನಾ ಯಾಕೆ ನಿರಾಕರಿಸುತ್ತಿದೆ ?**

- ಅಣ್ವಸ್ತ್ರ ಪ್ರಸರಣ ತಡೆ(ಎನ್‌ಪಿಟಿ) ಒಪ್ಪಂದಕ್ಕೆ ಭಾರತ ಸಹಿ ಹಾಕಿಲ್ಲ. ಎನ್‌ಎಸ್‌ಜಿಗೆ ಸೇರಲು ಇರುವ ಪ್ರಮುಖ ಕರಾರು ಎಂದರೆ ಸದಸ್ಯ ದೇಶಗಳು ಎನ್‌ಪಿಟಿಗೆ ಸಹಿ ಹಾಕಿರಬೇಕು. ಈ ಮಾನದಂಡವನ್ನು ಭಾರತ ಪೂರೈಸಿಲ್ಲದ ಕಾರಣ. ಭಾರತಕ್ಕೆ ಸದಸ್ಯತ್ವ ಕೊಡಕೂಡದು ಎಂಬುದು ಚೀನಾ ವಾದ.
- ಜಾಗತಿಕ ವೇದಿಕೆಯಲ್ಲಿ ಭಾರತಕ್ಕೂ ತನಗೆ ಸರಿಸಮನಾದ ಸ್ಥಾನಮಾನ ದೊರೆತರೆ ತಮ್ಮ ಕುಕೃತ್ಯಗಳಿಗೆ ಭಾರತ ಅಡ್ಡಗಾಲು ಹಾಕುತ್ತದೆ ಎಂಬ ಆತಂಕವೇ ಚೀನಾವನ್ನು ಕಾಡುತ್ತಿದೆ. ಉತ್ತರ ಕೊರಿಯಾ, ಪಾಕಿಸ್ತಾನ, ಇರಾನ್‌ನಂಥ ದೇಶಗಳ ಅಣ್ವಸ್ತ್ರ , ಕ್ಷಿಪಣಿ ಅಭಿವೃದ್ಧಿಯಂಥ ಕಾರ್ಯಕ್ರಮಗಳಿಗೆ ಚೀನಾ ರಹಸ್ಯವಾಗಿ ನೆರವು ನೀಡುತ್ತಿದೆ.

**ಭಾರತದ ನಿಲುವೇನು?**

- ಶಸ್ತ್ರಾಸ್ತ್ರಗಳು ತಮ್ಮ ಭದ್ರತೆಗೆ ಅಗತ್ಯವಾಗಿರುವುದರಿಂದ ತಾರತಮ್ಯದಿಂದ ಕೂಡಿರುವ ಎನ್‌ಪಿಟಿ ಒಪ್ಪಂದಕ್ಕೆ ಸಹಿ ಹಾಕುವುದಿಲ್ಲ. ನಿಶ್ಶಸ್ತ್ರೀಕರಣಕ್ಕೆ ಸಹಿ ಹಾಕದಿದ್ದರೂ, ಪರಮಾಣು ತಂತ್ರಜ್ಞಾನ ಪ್ರಸರಣ ವಿಷಯದಲ್ಲಿ ಭಾರತ ನಿಷ್ಕಳಂಕ ದಾಖಲೆ ಹೊಂದಿದೆ. ಆದರೆ, ಪಾಕ್ ಎನ್‌ಎಸ್‌ಜಿ ಸದಸ್ಯ ರಾಷ್ಟ್ರ ಅಲ್ಲದಿದ್ದರೂ ಅದು ಪರಮಾಣು ತಂತ್ರಜ್ಞಾನವನ್ನು ಲಿಬಿಯಾದಂಥ ಪುಂಡ ರಾಷ್ಟ್ರಗಳಿಗೆ ಮಾರಾಟ ಮಾಡಿದೆ ಎಂದು ಭಾರತ ಹೇಳಿದೆ.

### ಏನಿದು ಎನ್‌ಎಸ್‌ಜಿ?

- ಪರಮಾಣು ಪೂರೈಕೆದಾರರ ಒಕ್ಕೂಟ (Nuclear Suppliers' Group) ಎಂಬುದು ಎನ್‌ಎಸ್‌ಜಿಯ ವಿಸ್ತೃತ ರೂಪ. ವಿಶ್ವದಲ್ಲಿ ಪರಮಾಣು ತಂತ್ರಜ್ಞಾನ, ಬಳಕೆ, ಅವುಗಳನ್ನು ಅಣು ಬಾಂಬ್ ಉದ್ದೇಶಕ್ಕೆ ಬಳಸುವುದನ್ನು ತಡೆಯುವ ಸಂಬಂಧ ಹೆಚ್ಚಿನ ಪ್ರಸರಣ ತಡೆಗಾಗಿ ಈ ಗುಂಪು ಹುಟ್ಟಿಕೊಂಡಿತು.
- 1974ರಲ್ಲಿ ಭಾರತ ಮೊದಲ ಬಾರಿಗೆ ಅಣು ಬಾಂಬ್ ಪರೀಕ್ಷೆ ನಡೆಸಿದ್ದು, ಆ ಹಿನ್ನೆಲೆಯಲ್ಲಿ ಪ್ರಮುಖವಾಗಿ ಎನ್‌ಎಸ್‌ಜಿ ಸ್ಥಾಪನೆಗೆ ಕಾರಣವಾಯಿತು. 1975ರಲ್ಲಿ ಈ ಕುರಿತಂತೆ ಮೊದಲ ಸಭೆ ನಡೆದಿತ್ತು. ಸದ್ಯ ವಿಶ್ವದ ಪ್ರಮುಖ 48 ದೇಶಗಳು ಇದರ ಸದಸ್ಯ ರಾಷ್ಟ್ರಗಳಾಗಿವೆ. ಈ ದೇಶದೊಳಗೆ ಪರಮಾಣು ತಂತ್ರಜ್ಞಾನ, ಯುರೇನಿಯಂ ರಫ್ತು ಇತ್ಯಾದಿಗಳನ್ನು ಮುಕ್ತವಾಗಿ ನಡೆಸುವುದಕ್ಕೆ ಇದು ಅವಕಾಶ ನೀಡುತ್ತದೆ. ಎನ್‌ಎಸ್‌ಜಿ ಸದಸ್ಯ ರಾಷ್ಟ್ರಗಳು ಅಣು ಪ್ರಸರಣ ನಿಷೇಧ ಒಪ್ಪಂದ (ಎನ್‌ಪಿಟಿ)ಗೆ ಸಹಿ ಹಾಕಿದ್ದು ಅದರ ನಿಬಂಧನೆಗೂ ಒಳಪಟ್ಟಿವೆ. ಆದರೆ, ಅಣು ತಂತ್ರಜ್ಞಾನಗಳನ್ನು ಸದಸ್ಯರಾಷ್ಟ್ರವಲ್ಲದೇ ಇತರ ದೇಶಗೊಳೊಂದಿಗೆ ಹಂಚಿಕೊಳ್ಳಬೇಕಾದರೆ, ಸ್ವೀಕೃತ ರಾಷ್ಟ್ರ ಯಾವುದೇ ಕಾರಣಕ್ಕೂ ಅಣು ಬಾಂಬ್ ಇತ್ಯಾದಿಗಳಿಗೆ ಅದನ್ನು ಬಳಸುವುದಿಲ್ಲ ಎಂಬ ಕುರಿತ ಖಚಿತತೆಯನ್ನು ಸದಸ್ಯ ರಾಷ್ಟ್ರ ಹೊಂದಿರಬೇಕು ಎಂದು ನಿಬಂಧನೆಯಲ್ಲಿ ಹೇಳಲಾಗಿದೆ.

### ಭಾರತಕ್ಕೇಕೆ ಎನ್‌ಎಸ್‌ಜಿ ಸದಸ್ಯತ್ವ ಅಗತ್ಯ?

- ಭಾರತ ವಿದ್ಯುತ್ ವಲಯದಲ್ಲಿ ಹೆಚ್ಚಿನ ಉತ್ಪಾದನೆ, ಕೊರತೆಯನ್ನು ತಡೆಗಟ್ಟಲು ಕಳೆದ ಕೆಲ ದಶಕಗಳಿಂದ ತೀವ್ರ ಪ್ರಯತ್ನ ಮಾಡುತ್ತಿದೆ. ಉತ್ಪಾದನಾ ಕ್ಷೇತ್ರ ಬೆಳವಣಿಗೆ, ಆರ್ಥಿಕತೆ ಸುಧಾರಣೆ ನಿಟ್ಟಿನಲ್ಲಿ ಇದು ಅಗತ್ಯವಾಗಿದೆ.
- ಇದಕ್ಕೆ ಬಹುಮುಖ್ಯವಾಗಿ ಅಣು ವಿದ್ಯುತ್ ಅನ್ನು ಬಳಸಿಕೊಳ್ಳಲು ಯೋಜಿಸಿದೆ. ಎನ್‌ಎಸ್‌ಜಿ ಸದಸ್ಯನಾದರೆ, ಭಾರತಕ್ಕೆ ಸಹಜವಾಗಿ ಸದಸ್ಯ ರಾಷ್ಟ್ರಗಳಿಂದ ಅಣು ತಂತ್ರಜ್ಞಾನಗಳು ಲಭ್ಯವಾಗುತ್ತವೆ. ಕಳೆದ ಹಲವು ವರ್ಷಗಳಿಂದ ಎನ್‌ಎಸ್‌ಜಿ ಸದಸ್ಯತ್ವ ಪಡೆಯಲು ಭಾರತ ಇಚ್ಛೆ ಹೊಂದಿದ್ದೂ ಅದಕ್ಕೆ ಮುಂದಾಗಿರಲಿಲ್ಲ.
- ಅಚ್ಚರಿ ಎಂದರೆ, ನಾಗರಿಕ ಉದ್ದೇಶಗಳಿಗಾಗಿ ಬಳಸಲು ಅಣು ತಂತ್ರಜ್ಞಾನ ನೀಡಲು ವಿಶೇಷ ಅವಕಾಶವನ್ನು ಎನ್‌ಎಸ್‌ಜಿ 2008ರಲ್ಲೇ ಭಾರತಕ್ಕೆ ಕಲ್ಪಿಸಿದೆ. ಸದಸ್ಯ ರಾಷ್ಟ್ರದ ಹೊರತಾದ ದೇಶವೊಂದಕ್ಕೆ ಈ ಅವಕಾಶ ಲಭ್ಯವಾಗಿದ್ದು ಅದೇ ಮೊದಲು. ಅಮೆರಿಕದೊಂದಿಗೆ ಅಣು ಒಪ್ಪಂದ ಮಾಡಿಕೊಂಡ ಹಿನ್ನೆಲೆಯಲ್ಲಿ, ಅಮೆರಿಕದ ಒತ್ತಾಸೆ ಮೇರೆಗೆ ಎನ್‌ಎಸ್‌ಜಿ ಈ ವಿಶೇಷ ಸಮ್ಮತಿಯನ್ನು ಭಾರತಕ್ಕೆ ನೀಡಿತ್ತು. ಆದರೆ ಆಗಲೂ ಚೀನಾ ಇದಕ್ಕೆ ವಿರೋಧ ವ್ಯಕ್ತಪಡಿಸಿತ್ತು. ಅಮೆರಿಕ ಹೊರತಾಗಿ ಆಸ್ಟ್ರೇಲಿಯಾ, ರಷ್ಯಾ, ಜಪಾನ್ ಇತ್ಯಾದಿ ಪ್ರಮುಖ ರಾಷ್ಟ್ರಗಳೊಂದಿಗೆ ಅಣು ವಲಯದಲ್ಲಿ ಮಹತ್ವದ ಒಪ್ಪಂದಗಳನ್ನು ಭಾರತ ಮಾಡಿಕೊಂಡಿದೆ.

### ಎನ್‌ಎಸ್‌ಜಿ ಪ್ರಮುಖರು ಯಾರು?

- ಎನ್‌ಎಸ್‌ಜಿಯ ಮೂಲ ಕಲ್ಪನೆ ಅಮೆರಿಕದ್ದು. ಅಮೆರಿಕ, ಚೀನಾ, ಸ್ಪೇನ್, ಸ್ವೀಡನ್, ರಷ್ಯಾ, ಬ್ರಿಟನ್, ಜರ್ಮನಿ, ಆಸ್ಟ್ರೇಲಿಯಾ ಇಟಲಿ, ಜಪಾನ್, ಮೆಕ್ಸಿಕೋ, ಬ್ರೆಜಿಲ್, ದಕ್ಷಿಣ ಆµÅಕಾ, ನಾರ್ವೆ, ಪೋಲೆಂಡ್, ಕೆನಡಾ, ಡೆನ್ಮಾರ್ಕ್, ಟರ್ಕಿ, ಉಕ್ರೇನ್ ಇತ್ಯಾದಿ ಒಟ್ಟು 48 ಪ್ರಮುಖ ರಾಷ್ಟ್ರಗಳು ಇದರ ಸದಸ್ಯತ್ವ ಹೊಂದಿವೆ.

### ಭಾರತದ ಸದಸ್ಯತ್ವಕ್ಕೆ ಯಾರ ಬೆಂಬಲವಿದೆ?

- ಸದ್ಯ ಭಾರತದ ಸದಸ್ಯತ್ವನ್ನು ಮುಕ್ತವಾಗಿ ಬೆಂಬಲಿಸುವುದಾಗಿ ಅಮೆರಿಕ ಹೇಳಿದೆ. ಅಮೆರಿಕ ಹೊರತಾಗಿ ಪ್ರಮುಖ ರಾಷ್ಟ್ರಗಳಾದ, ಸ್ವಿಜರ್ಲೆಂಡ್,ಜಪಾನ್, ರಷ್ಯಾ, ಯುರೋಪಿಯನ್ ದೇಶಗಳು, ಭಾರತ ಸದಸ್ಯತನಕ್ಕೆ ಸಂಪೂರ್ಣ ಬೆಂಬಲವನ್ನು ನೀಡಿದೆ.

### ಭಾರತವೇಕೆ ಎನ್‌ಪಿಟಿಗೆ ಸಹಿ ಹಾಕಿಲ್ಲ?

- ಎನ್‌ಎಸ್‌ಜಿ ಸದಸ್ಯ ರಾಷ್ಟ್ರಗಳು ಅಣ್ವಸ್ತ್ರ ಪ್ರಸರಣ ತಡೆಗೆ ಅದಾಗಲೇ ಸಹಿ ಹಾಕಿವೆ. ಆದರೆ, ಭಾರತ, ಪಾಕಿಸ್ತಾನ, ಇಸ್ರೇಲ್, ದಕ್ಷಿಣ ಸೂಡಾನ್ ದೇಶಗಳು ಈ ಒಪ್ಪಂದಕ್ಕೆ ಸಹಿ ಹಾಕಿಲ್ಲ. ಎನ್‌ಪಿಟಿಯ ಕರಾರಿನಲ್ಲಿ 2ನೇ ಜಾಗತಿಕ ಯುದ್ಧದ ಬಳಿಕ ವಿಜಯಿಗಳಾದ 5 ರಾಷ್ಟ್ರಗಳಿಗೆ ಮಾತ್ರ ಅಣು ಬಾಂಬ್ ಹೊಂದಲು ಅವಕಾಶ ನೀಡಲಾಗಿದೆ. ಇದನ್ನು ಭಾರತ ತಾರತಮ್ಯ ಎಂದು ಹೇಳಿದೆ. ಭಾರತದ ಭದ್ರತೆ ದೃಷ್ಟಿಯಿಂದ ಅಣ್ವಸ್ತ್ರ ನಿಶ್ಶಸ್ತ್ರೀಕರಣ ಮಾಡಲು ಮಾಡಲು ಸಾಧ್ಯವೇ ಇಲ್ಲ. ಚೀನಾ, ಪಾಕಿಸ್ತಾನ ಈ ಮೊದಲು ಯುದ್ಧ ಮಾಡಿದ್ದು, ಭಾರತದ ನಾಯಕರು ಈ ಒಪ್ಪಂದಕ್ಕೆ ಸಹಿ ಹಾಕದೇ ಇರುವ ದಿಟ್ಟ ನಿಲುವು ಪ್ರದರ್ಶಿಸಿದ್ದಾರೆ.

IAS/KAS ನಮ್ಮ ಐಎಎಸ್ ಅಕಾಡೆಮಿ

## 2. ಮಧ್ಯಂತರ ಶ್ರೇಣಿಯ ಪರಮಾಣು ಪಡೆ (Intermediate-Range Nuclear Forces (INF) Treaty)

### ಪ್ರಮುಖ ಸುದ್ದಿ

- ಅಕ್ಟೋಬರ್ 2018 ರಲ್ಲಿ ಅಮೆರಿಕ ಅಧ್ಯಕ್ಷ ಟ್ರಂಪ್ ಅವರು ಅಮೆರಿಕವು ಮಧ್ಯಂತರ ಶ್ರೇಣಿಯ ಪರಮಾಣು ಪಡೆದಿಂದ ಅಥವಾ ಐಎನ್‌ಎಫ್ ಒಪ್ಪಂದದಿಂದ ಹೊರ ಬರಲಿದೆ ಎಂದು ಘೋಷಣೆ ಮಾಡಿದ್ದರು. ಫೆಬ್ರುವರಿ 2019ರಿಂದ ಯುನೈಟೆಡ್ ಸ್ಟೇಟ್ಸ್ ಒಪ್ಪಂದದಿಂದ ಹೊರಬರಲು ಮತ್ತು ರಷ್ಯಾವು ಒಪ್ಪಂದದ ನಿಯಮಗಳನ್ನು ಅನುಸರಿಸದಿದ್ದರೆ ಫೆಬ್ರುವರಿ ತಿಂಗಳಿಂದ ನಾವು ಸಂಪೂರ್ಣವಾಗಿ ಒಪ್ಪಂದವನ್ನು ಹಿಂತೆಗೆದುಕೊಳ್ಳಲಿದ್ದೇವೆ ಎಂದು ಅಮೆರಿಕ ಹೇಳಿದೆ.

### ಮುಖ್ಯ ಅಂಶಗಳು

### ಏನಿದು ಐಎನ್‌ಎಫ್ ಒಪ್ಪಂದ ?

- 1987ರಲ್ಲಿ ಅಮೆರಿಕಾ ಅಧ್ಯಕ್ಷರಾಗಿದ್ದ ರೊನಾಲ್ಡ್ ರೇಗನ್ ಮತ್ತು ರಷ್ಯಾ ಅಧ್ಯಕ್ಷ ಮಿಖಾಯಿಲ್ ಗೋರ್ಬಚೇವ್ ನಡುವೆ ನಡೆದ ಒಪ್ಪಂದ ಇದಾಗಿತ್ತು.

- 500-1,000 ಕಿಲೋಮೀಟರ್ ಅಥವಾ 310-620 ಮೈಲುಗಳು (ಸಣ್ಣ-ವ್ಯಾಪ್ತಿಯ) ಮತ್ತು 1,000-5,500 ಕಿಮೀ ಅಥವಾ 620-3,420 ಮೈಲಿಗಳು (ಮಧ್ಯಂತರ-ಶ್ರೇಣಿಯ) ವ್ಯಾಪ್ತಿಯೊಂದಿಗೆ ಅವುಗಳ ಉಡಾವಣಾ ಸಾಧನಗಳ ಮಧ್ಯಂತರ ಶ್ರೇಣಿಯ ಮತ್ತು ಕಡಿಮೆ ವ್ಯಾಪ್ತಿಯ ಕ್ಷಿಪಣಿಗಳ ಹೊರಹಾಕುವಿಕೆಯ ಒಪ್ಪಂದ ಇದಾಗಿತ್ತು. ಇದು ಎಲ್ಲಾ ಪರಮಾಣು ಮತ್ತು ಸಾಂಪ್ರದಾಯಿಕ ಕ್ಷಿಪಣಿಗಳನ್ನು ಹೊರಹಾಕುತ್ತದೆ.
- ಈ ಒಪ್ಪಂದದ ಅನ್ವಯ ಅಮೆರಿಕ ಮತ್ತು ರಷ್ಯಾ 'ಕ್ರೂಸ್ ಕ್ಷಿಪಣಿಗಳನ್ನು ಹೊಂದುವುದು, ತಯಾರಿಸುವುದು ಅಥವಾ ಪರೀಕ್ಷಾರ್ಥ ಹಾರಾಟ ಕೈಗೊಳ್ಳುವುದನ್ನು ನಿಷೇಧಿಸಲಾಗಿತ್ತು.
- ಜತೆಗೆ ಅಣ್ವಸ್ತ್ರ ಸಿಡಿತಲೆಗಳನ್ನು ಕೊಂಡೊಯ್ಯುವ ನೆಲದಿಂದ ಜಿಗಿಯುವ ಕ್ಷಿಪಣಿಗಳನ್ನು ಹೊಂದದಂತೆಯೂ ಈ ಒಪ್ಪಂದದಲ್ಲಿ ತಿಳಿಸಲಾಗಿತ್ತು.

### ಅಮೆರಿಕದ ಈ ನಿರ್ಧಾರಕ್ಕೆ ಕಾರಣ ?

- ಮಿಡ್ ರೇಂಜ್ ಕ್ಷಿಪಣಿಗಳ ಮೇಲೆ ನಿಷೇಧ ಹೇರುವ ಉದ್ದೇಶದಿಂದ ಈ ಒಪ್ಪಂದಕ್ಕೆ ಸಹಿ ಹಾಕಲಾಯಿತು. ಒಡಂಬಡಿಕೆಯ ಅಡಿಯಲ್ಲಿ ನಿಷೇಧಿಸಲಾದ ಕ್ಷಿಪಣಿಗಳನ್ನು ಅಭಿವೃದ್ಧಿಪಡಿಸುವ ಮೂಲಕ ರಷ್ಯಾ ಈ ಒಪ್ಪಂದವನ್ನು ಉಲ್ಲಂಘಿಸಿದೆ ಎಂದು ಯುನೈಟೆಡ್ ಸ್ಟೇಟ್ಸ್ ಹೇಳಿದೆ.ಆದರೆ, ನಮಗೆ ಅವಕಾಶ ನೀಡುತ್ತಿಲ್ಲ. ಹಲವು ವರ್ಷಗಳಿಂದ ಇದೇ ರೀತಿ ನಡೆಯುತ್ತಿದೆ.ಹೀಗಾಗಿ, ಅಮೆರಿಕ ದೃಢವಾದ ನಿರ್ಧಾರ ಕೈಗೊಂಡಿದೆ. ನಾವು ಈಗ ಹೊಸದಾಗಿ ಕ್ಷಿಪಣಿಗಳನ್ನು ತಯಾರಿಸಬೇಕಾಗಿದೆ' ಎಂದು ಟ್ರಂಪ್ ಹೇಳಿದ್ದಾರೆ.
- ತಜ್ಞರ ಪ್ರಕಾರ, ಅಮೆರಿಕ ಶಸ್ತ್ರಾಸ್ತ್ರಗಳ ವ್ಯಾಪಕ ವ್ಯಾಪ್ತಿಯನ್ನು ಹೊಂದಿರುವುದರಿಂದ ರಷ್ಯಾಗೆ ಅಮೆರಿಕಕ್ಕೆ ಸರಿಸಾಟಿಯಾಗಿ ಸ್ಪರ್ಧಿಸಲು ಸಾಧ್ಯವಾಗುಗುತ್ತಿಲ್ಲ. ಅಮೆರಿಕವನ್ನು ಎದುರಿಸಲು ತನ್ನ ಮಿಲಿಟರಿ ಸಾಮರ್ಥ್ಯಗಳನ್ನು ಹೆಚ್ಚಿಸಲು ಭೂ-ಆಧಾರಿತ ಕ್ಷಿಪಣಿಗಳನ್ನು ಅಭಿವೃದ್ಧಿಪಡಿಸಲು ರಷ್ಯಾ ನಿರ್ಧರಿಸಿದೆ. ಚೀನಾ ಮಿಲಿಟರಿ ಬೆಳೆಯುತ್ತಿದ್ದು ಅಲ್ಲಿನ ಮಧ್ಯ-ಶ್ರೇಣಿಯ ಕ್ಷಿಪಣಿ ಸಾಮರ್ಥ್ಯದ ಕಾರಣದಿಂದಾಗಿ ಐಎನ್‌ಎಫ್ ಒಪ್ಪಂದದಿಂದ ಹೊರಬರಲು ಅಮೆರಿಕ ಮಾರ್ಗಗಳನ್ನು ಹುಡುಕುತ್ತಿದೆ ಎಂದು ಇತರರು ಭಾವಿಸುತ್ತಾರೆ. ಐಎನ್‌ಎಫ್ ಒಪ್ಪಂದದಿಂದಾಗಿ ಚೀನಾ ಕ್ಷಿಪಣಿಗಳಿಗೆ ಉತ್ತರ ನೀಡಲು ಅಮೆರಿಕಕ್ಕೆ ಸಾಧ್ಯವಾಗುತ್ತಿಲ್ಲ ಎಂದು ಅಮೆರಿಕ ಭಾವಿಸಿದೆ. ಅಮೆರಿಕವು ರಷ್ಯಾ ಮತ್ತು ಚೀನಾವನ್ನು ಪ್ರತಿಸ್ಪರ್ಧಿ ಎಂದು ಗುರುತಿಸುವ ಉದ್ದೇಶದಿಂದ ಅಮೆರಿಕದಲ್ಲಿ ಒಪ್ಪಂದದಿಂದ ಹೊರಬರಬೇಕೆಂಬ ಒತ್ತಾಯವಿದೆ

### ಇದರಿಂದ ಜಾಗತಿಕವಾಗಿ ಬೀರುವ ಪ್ರಭಾವವೇನು ?

- ಯುಎಸ್ ನ ಈ ನಿರ್ಧಾರದಿಂದಾಗಿ ಜಾಗತಿಕ ಶಸ್ತ್ರಾಸ್ತ್ರಗಳ ಮೇಲೆ ನಿಯಂತ್ರಿಸುವ ರಷ್ಯಾ ಯೋಜನೆಗಳ ಹಿನ್ನೆಲೆ ಇದು ಆ ದೇಶದ ನೈತಿಕ ಮಟ್ಟವನ್ನು ಹೆಚ್ಚಿಸಲಿದೆ.
- ಐಎನ್‌ಎಫ್ ಒಪ್ಪಂದದ ರದ್ದಾಗುವ ಜತೆಗೆ, ನ್ಯೂ ಸ್ಟ್ರಾಟೆಜಿಕ್ ಆರ್ಮ್ಸ್ ರಿಡಕ್ಷನ್ ಟಾಕ್ಸ್ (ಎಸ್ಟಿಆರ್ಟಿ) ಜತೆ ಸಂಧಾನ ಮಾತುಕತೆ ನಡೆಸಲು ಅಮೆರಿಕ ಬಯಸಿಲ್ಲ. ಇದರಿಂದಾಗಿ ಬಾಹ್ಯಾಕಾಶದಲ್ಲಿ ಅಣ್ವಸ್ತ್ರಗಳ ಭೀತಿಯನ್ನು ಸೃಷ್ಟಿಸಿದೆ. ಬಾಹ್ಯಾಕಾಶದಲ್ಲಿ ಪರಮಾಣು

ಶಸ್ತ್ರಾಸ್ತ್ರಗಳನ್ನು ಬಲಗೊಳಿಸುವ ನಿರ್ಧಾರವನ್ನು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪ್ರಕಟಿಸಿದರೆ ಅದರ ಪರಿಣಾಮವನ್ನು ಎದುರಿಸಬೇಕಾಗಿದೆ.

- ಐಎನ್ಎಫ್ ಒಪ್ಪಂದದ ಕುರಿತು ಪ್ರಶ್ನೆಗಳೇಳುವ ಜತೆಗೆ ಯೂರೋಪ್ ನಲ್ಲಿ ಇಂಟರ್ ಮೀಡಿಯೇಟ್ ರೇಂಜ್ ಮಿಸೈಲ್ ನ ನಿಯೋಜನೆ ಮತ್ತು ಅಭಿವೃದ್ಧಿಪಡಿಸುವುದು ಹೇಗೆ ಎಂಬ ಪ್ರಶ್ನೆಯೂ ಇದೆ. ಶಸ್ತ್ರಾಸ್ತ್ರ ನಿಯಂತ್ರಕರು ಮತ್ತು ಕಾರ್ಯತಂತ್ರ ರೂಪಿಸುವವರಿಗೆ ಐಎನ್ಎಫ್ ಒಪ್ಪಂದದ ಭವಿಷ್ಯವು ಎಚ್ಚರಿಕೆಯ ಗಂಟೆಯಾಗಿದೆ. ರಷ್ಯಾ ಮತ್ತು ಅಮೆರಿಕ ಎರಡೂ ದೇಶಗಳು ಒಳ್ಳೆಯ ತೀರ್ಮಾನವೊಂದಕ್ಕೆ ಬರಬಹುದು ಎಂಬ ನಿರೀಕ್ಷೆ ಭಾರತದ್ದು. ಪರಮಾಣು ಶಸ್ತ್ರಾಸ್ತ್ರಗಳು ನಿಷೇಧಗೊಳ್ಳಬೇಕು ಎಂಬುದು ಭಾರತದ ಬೇಡಿಕೆಯೂ ಹೌದು. ಜಾಗತಿಕ ಉದ್ವಿಗ್ನತೆ ಕಡಿಮೆಗೊಳಿಸುವುದು ಅಭಿವೃದ್ಧಿ ಹೊಂದಿದ ದೇಶಗಳ ಆದ್ಯತೆಯಾಗಬೇಕು.

## 3. ಅಂತಾರಾಷ್ಟ್ರೀಯ ಹಣಕಾಸು ಸೇವಾ ಕೇಂದ್ರಗಳ ಪ್ರಾಧಿಕಾರ ಮಸೂದೆ- 2019

### ಪ್ರಮುಖ ಸುದ್ದಿ

- ಪ್ರಧಾನಮಂತ್ರಿ ಅವರ ಅಧ್ಯಕ್ಷತೆಯಲ್ಲಿಂದು ನಡೆದ ಕೇಂದ್ರ ಸಚಿವ ಸಂಪುಟ ಸಭೆ, ಅಂತಾರಾಷ್ಟ್ರೀಯ ಹಣಕಾಸು ಸೇವಾ ಕೇಂದ್ರಗಳ ಪ್ರಾಧಿಕಾರ ಮಸೂದೆ, 2019 ರ ಮೂಲಕ ಭಾರತದಲ್ಲಿನ ಅಂತಾರಾಷ್ಟ್ರೀಯ ಹಣಕಾಸು ಸೇವೆಗಳ ಕೇಂದ್ರ ( ಐ.ಎಫ್.ಎಸ್.ಸಿಗಳು ) ಗಳಲ್ಲಿನ ಎಲ್ಲಾ ಹಣಕಾಸು ಸೇವೆಗಳನ್ನು ನಿಯಂತ್ರಿಸಲು ಏಕೀಕೃತ ಪ್ರಾಧಿಕಾರ ಸ್ಥಾಪನೆಗೆ ತನ್ನ ಅನುಮೋದನೆ ನೀಡಿದೆ.

### ಮುಖ್ಯ ಅಂಶಗಳು

- ಭಾರತದಲ್ಲಿ ಪ್ರಥಮ ಐ.ಎಫ್.ಎಸ್.ಸಿ.ಯನ್ನು ಗಿಫ್ಟ್ ನಗರ, ಗುಜರಾತ್ ನ ಗಾಂಧೀನಗರದಲ್ಲಿ ಸ್ಥಾಪಿಸಲಾಯಿತು. ವಿಶ್ವದ ಪ್ರಮುಖ ಅಂತಾರಾಷ್ಟ್ರೀಯ ಹಣಕಾಸು ಕೇಂದ್ರಗಳು ಅಂದರೆ ಲಂಡನ್ ಮತ್ತು ಸಿಂಗಾಪೂರ್ ಗೆ ಹೋಲಿಸುವಂಥಹ ವಾಣಿಜ್ಯ ಮತ್ತು ನಿಯಂತ್ರಣ ವಾತಾವರಣವನ್ನು ಒದಗಿಸುವುದಾಗಿ ಆಫರ್ ನೀಡುವ ಮೂಲಕ ಭಾರತೀಯ ಸಾಂಸ್ಥಿಕ ಕಾಯಗಳಿಂದ ಪ್ರಸ್ತುತ ಕಡಲಾಚೆಯ ಹಣಕಾಸು ಕೇಂದ್ರಗಳಲ್ಲಿ ಮತ್ತು ಹಣಕಾಸು ಸಂಸ್ಥೆಗಳ ಅಂಗ ಸಂಸ್ಥೆಗಳು/ಶಾಖೆಗಳಲ್ಲಿ ನಡೆಯುತ್ತಿರುವ ಹಣಕಾಸು ಸೇವೆಗಳನ್ನು ಮತ್ತು ವಹಿವಾಟಗಳನ್ನು ಭಾರತಕ್ಕೆ ಮರಳಿ ತರಲು ಐಎಫ್ಎಸ್.ಸಿ,ಅವಕಾಶ ನೀಡುತ್ತದೆ. ಇದು ಭಾರತೀಯ ಸಾಂಸ್ಥಿಕ ಸಂಸ್ಥೆಗಳಿಗೆ ಜಾಗತಿಕ ಹಣಕಾಸು ಮಾರುಕಟ್ಟೆಯ ಸುಲಭ ಪ್ರವೇಶ ಒದಗಿಸುತ್ತದೆ. ಐ.ಎಫ್.ಎಸ್.ಸಿ. ಭಾರತದಲ್ಲಿ ಹಣಕಾಸು ಮಾರುಕಟ್ಟೆಯ ಮತ್ತಷ್ಟು ಅಭಿವೃದ್ಧಿಗೆ ಪೂರಕವಾಗಿರುತ್ತದೆ ಮತ್ತು ಉತ್ತೇಜಿಸುತ್ತದೆ.
- ಪ್ರಸ್ತುತ, ಐಎಫ್.ಎಸ್.ಸಿ.ಯಲ್ಲಿ ಬ್ಯಾಂಕಿಂಗ್, ಹಣಕಾಸು ಮಾರುಕಟ್ಟೆಗಳು ಮತ್ತು ವಿಮಾ ವಲಯಗಳನ್ನು ಬಹು ನಿಯಂತ್ರಕರು ಅಂದರೆ ಆರ್.ಬಿ.ಐ, ಸೆಬಿ ಮತ್ತು ಐ.ಆರ್.ಡಿ.ಎ.ಐ. ನಿಯಂತ್ರಿಸುತ್ತಿವೆ. ಐ.ಎಫ್.ಎಸ್.ಸಿ.ಗಳಲ್ಲಿ ಚೈತನ್ಯ ಸ್ವರೂಪದ ವಾಣಿಜ್ಯವು ಅತ್ಯುನ್ನತ

ದರ್ಜೆಯ ಅಂತರ ನಿಯಂತ್ರಣ ಸಹಯೋಗದ ಅಗತ್ಯವಿದೆ. ಇದಕ್ಕೆ ಐ.ಎಫ್.ಎಸ್.ಸಿ.ಗಳಲ್ಲಿನ ಹಣಕಾಸು ಚಟುವಟಿಕೆಗಳ ನಿರ್ವಹಿಸುತ್ತಿರುವ ಹಾಲಿ ನಿಯಂತ್ರಣಗಳಿಗೆ ನಿಯಮಿತ ಸ್ಪಷ್ಟನೆ ಮತ್ತು ಪದೇ ಪದೇ ತಿದ್ದುಪಡಿಗಳ ಅಗತ್ಯವೂ ಇರುತ್ತದೆ. ಐ.ಎಫ್.ಎಸ್.ಸಿ.ಗಳಲ್ಲಿ ಹಣಕಾಸು ಸೇವೆಗಳು ಮತ್ತು ಉತ್ಪನ್ನಗಳಿಗೆ ಕೇಂದ್ರೀಕೃತ ಮತ್ತು ಸಮರ್ಪಿತ ನಿಯಂತ್ರಣ ಮಧ್ಯಪ್ರವೇಶದ ಅಗತ್ಯವಿದೆ. ಹೀಗಾಗಿ, ಹಣಕಾಸು ಮಾರುಕಟ್ಟೆಯಲ್ಲಿ ಭಾಗವಹಿಸುವವರಿಗೆ ಭಾರತದಲ್ಲಿ ವಿಶ್ವದರ್ಜೆಯ ನಿಯಂತ್ರಣ ವಾತಾವರಣವನ್ನು ಒದಗಿಸಲು, ಐ.ಎಫ್.ಎಸ್.ಸಿ.ಗಳಿಗೆ ಏಕೀಕೃತ ಹಣಕಾಸು ನಿಯಂತ್ರಕರನ್ನು ಹೊಂದುವ ಅಗತ್ಯ ಕಂಡುಬಂದಿದೆ. ಜೊತೆಗೆ ಇದು ಸುಗಮವಾಗಿ ವಾಣಿಜ್ಯ ನಡೆಸುವ ದೃಷ್ಟಿಕೋನದಿಂದಲೂ ಅಗತ್ಯವಾಗಿದೆ. ಏಕೀಕೃತ ಪ್ರಾಧಿಕಾರವು, ಜಾಗತಿಕ ಉತ್ತಮ ರೂಢಿಗಳಿಗೆ ಹೊಂದುವಂತೆ ಭಾರತದಲ್ಲಿ ಐ.ಎಫ್.ಎಸ್.ಸಿ.ಗಳ ಅಭಿವೃದ್ಧಿಗೆ ಬಹು ಅಗತ್ಯವಾದ ಇಂಬು ನೀಡುತ್ತದೆ.

- ಐ.ಎಫ್.ಎಸ್.ಸಿ.ಯ ನಿಯಂತ್ರಣ ಅಗತ್ಯಗಳು ಮತ್ತು ಹಣಕಾಸು ವಲಯದಲ್ಲಿನ ಪ್ರಸಕ್ತ ನಿಯಮಾವಳಿಗಳನ್ನು ಗಣನೆಗೆ ತೆಗೆದುಕೊಂಡು ಹಣಕಾಸು ಸಚಿವಾಲಯದ (ಎಂ.ಓ.ಎಫ್.) ಹಣಕಾಸು ವ್ಯವಹಾರಗಳ ಇಲಾಖೆ (ಡಿ.ಇ.ಎ.) ಐ.ಎಫ್.ಎಸ್.ಸಿ.ಗಳಿಗೆ ಪ್ರತ್ಯೇಕ ಏಕೀಕೃತ ನಿಯಂತ್ರಕನ ಸ್ಥಾಪನೆಗಾಗಿ ಕರಡು ಮಸೂದೆಯನ್ನು ಸಿದ್ಧಪಡಿಸಿದೆ.

**ವಿಧೇಯಕದ ಪ್ರಮುಖ ಅಂಶಗಳು ಕೆಳಕಂಡಂತಿವೆ:**

- ಪ್ರಾಧಿಕಾರದ ಆಡಳಿತ: ಈ ಪ್ರಾಧಿಕಾರದಲ್ಲಿ ಒಬ್ಬರು ಅಧ್ಯಕ್ಷರು, ಭಾರತೀಯ ರಿಜರ್ವ್ ಬ್ಯಾಂಕ್ (ಆರ್.ಬಿ.ಐ.), ಭಾರತೀಯ ಭದ್ರತೆ ವಿನಿಮಯ ಮಂಡಳಿ (ಸೆಬಿ), ಭಾರತೀಯ ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ (ಐ.ಆರ್.ಡಿ.ಎ.ಐ.) ಮತ್ತು ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ (ಪಿ.ಎಫ್.ಆರ್.ಡಿ.ಎ)ಯಿಂದ ನಾಮಾಂಕನಗೊಂಡು ತಲಾ ಒಬ್ಬರು ಸದಸ್ಯರು, ಕೇಂದ್ರ ಸರ್ಕಾರದಿಂದ ನೇಮಕಗೊಂಡ ಇಬ್ಬರು ಸದಸ್ಯರು ಮತ್ತು ಇತರ ಇಬ್ಬರು ಪೂರ್ಣಕಾಲಿಕ ಅಥವಾ ಪೂರ್ಣಾವಧಿಯ ಅಥವಾ ಅಲ್ಪಾವಧಿಯ ಸದಸ್ಯರು.
- ಪ್ರಾಧಿಕಾರದ ಕಾರ್ಯಚಟುವಟಿಕೆ: ಈ ಪ್ರಾಧಿಕಾರವು, ಐ.ಎಫ್.ಎಸ್.ಸಿ.ಯಲ್ಲಿನ ಎಲ್ಲ ಅಂಥ ಹಣಕಾಸು ಸೇವೆಗಳು, ಹಣಕಾಸು ಉತ್ಪನ್ನಗಳು ಮತ್ತು ಎಫ್.ಐ.ಗಳನ್ನು ನಿಯಂತ್ರಿಸುತ್ತದೆ, ಇದಕ್ಕೆ ಐ.ಎಫ್.ಎಸ್.ಸಿಗಳ ಹಣಕಾಸು ವಲಯದ ನಿಯಂತ್ರಕರು ಅನುಮತಿಯನ್ನೂ ನೀಡರುತ್ತಾರೆ. ಈ ಪ್ರಾಧಿಕಾರವು ಕೇಂದ್ರ ಸರ್ಕಾರದಿಂದ ಕಾಲ ಕಾಲಕ್ಕೆ ಅಧಿಸೂಚನೆಯಾಗುವ ಇತರ ಹಣಕಾಸು ಉತ್ಪನ್ನಗಳು, ಹಣಕಾಸು ಸೇವೆಗಳು ಅಥವಾ ಎಫ್.ಐ.ಗಳನ್ನೂ ನಿಯಂತ್ರಿಸುತ್ತದೆ. ಐ.ಎಫ್.ಎಸ್.ಸಿ ಗಳು ಅನುಮತಿ ನೀಡಿರುವ ಇತರ ಹಣಕಾಸು ಉತ್ಪನ್ನಗಳು, ಹಣಕಾಸು ಸೇವೆಗಳು ಮತ್ತು ಹಣಕಾಸು ಸಂಸ್ಥೆಗಳನ್ನೂ ನಿಯಂತ್ರಿಸಲು ಕೇಂದ್ರ ಸರ್ಕಾರಕ್ಕೆಶಿಫಾರಸು ಮಾಡಲಾಗಿದೆ.
- ಪ್ರಾಧಿಕಾರದ ಅಧಿಕಾರಗಳು: ಹಣಕಾಸು ವಲಯದ ನಿಯಂತ್ರಕರುಗಳು (ಅಂದರೆ ಆರ್.ಬಿ.ಐ, ಸೆಬಿ, ಐ.ಆರ್.ಡಿ.ಎ. ಮತ್ತು ಪಿ.ಎಫ್.ಆರ್.ಡಿ.ಎ. ಇತ್ಯಾದಿ) ಐಎಫ್ಎಸ್.ಸಿ.ಯಲ್ಲಿ ಅನುಮತಿಸಲಾದ ಹಣಕಾಸಿನ ಉತ್ಪನ್ನಗಳು, ಹಣಕಾಸು ಸೇವೆಗಳು ಮತ್ತು ಎಫ್ಐಗಳನ್ನು ನಿಯಂತ್ರಿಸುವವರೆಗೆ

ಆಯಾ ಕಾಯಿದೆಗಳ ಅಡಿಯಲ್ಲಿ ಚಲಾಯಿಸಬಹುದಾದ ಎಲ್ಲ ಅಧಿಕಾರಗಳನ್ನು ಐ.ಎಫ್.ಎಸ್.ಸಿ.ಗಳಲ್ಲಿನ ಪ್ರಾಧಿಕಾರ ಒಂದೇ ಚಲಾಯಿಸಬಹುದಾಗಿದೆ.

- ಪ್ರಾಧಿಕಾರದ ಪ್ರಕ್ರಿಯೆ ಮತ್ತು ಕಾರ್ಯ ವಿಧಾನಗಳು: ಪ್ರಾಧಿಕಾರವು ಪಾಲಿಸಬೇಕಾದ ಪ್ರಕ್ರಿಯೆ ಮತ್ತು ಕಾರ್ಯವಿಧಾನಗಳು ಇಂಥ ಹಣಕಾಸು ಉತ್ಪನ್ನ, ಸೇವೆ ಅಥವಾ ಸಂಸ್ಥೆಗಳಿಗೆ ಆಯಾ ಪ್ರಕರಣಗಳಿಗೆ ಸಂಬಂಧಿಸಿದಂತೆ ಭಾರತದ ಸಂಸತ್ತು ಜಾರಿ ಮಾಡಿದ ಕಾಯಿದೆಗಳ ನಿಯಮಾವಳಿಗೆ ಅನುಸಾರವಾಗಿರುತ್ತದೆ.
- ಕೇಂದ್ರ ಸರ್ಕಾರದ ಅನುದಾನ.: ಕೇಂದ್ರ ಸರ್ಕಾರ ಪ್ರಾಧಿಕಾರದ ಉದ್ದೇಶಕ್ಕೆ ಬಳಕೆ ಮಾಡಿಕೊಳ್ಳಲು ಸೂಕ್ತವೆಂದು ಚಿಂತಿರುವ ಪ್ರಾಧಿಕಾರದ ಅನುದಾನಕ್ಕೆ ಸಂಸತ್ತಿನಲ್ಲಿ ಸೂಕ್ತ ವಿನಿಯೋಗಕ್ಕಾಗಿ ಈ ನಿಟ್ಟಿನಲ್ಲಿ ಮಾಡಿದ ಕಾಯಿದೆಯ ರೀತ್ಯ ಕೇಂದ್ರ ಸರ್ಕಾರ ಹಣ ಒದಗಿಸುತ್ತದೆ.
- ವಿದೇಶೀ ಕರೆನ್ಸಿಗಳಲ್ಲಿನ ವಹಿವಾಟು: ಐ.ಎಫ್.ಎಸ್.ಸಿ.ಗಳಲ್ಲಿನ ಹಣಕಾಸು ಸೇವೆಗಳ ವಹಿವಾಟುಗಳನ್ನು ಕೇಂದ್ರ ಸರ್ಕಾರದೊಂದಿಗೆ ಸಮಾಲೋಚಿಸಿ ಪ್ರಾಧಿಕಾರ ನಿರ್ದಿಷ್ಟಪಡಿಸುವ ವಿದೇಶೀ ಕರೆನ್ಸಿಗಳಲ್ಲಿ ಮಾಡಲಾಗುತ್ತದೆ.

### ಐ.ಎಫ್.ಎಸ್.ಸಿ.ಗಳೆಂದರೇನು ?

- ಐ.ಎಫ್.ಎಸ್.ಸಿ.ಗಳ ಏಕೀಕೃತ ಹಣಕಾಸು ನಿಯಂತ್ರಕರ ಸ್ಥಾಪನೆಯು ವಿಶ್ವ ದರ್ಜೆಯ ನಿಯಂತ್ರಣ ವಾತಾವರಣವನ್ನು ಮಾರುಕಟ್ಟೆಯಲ್ಲಿ ಭಾಗಿಯಾಗುವವರಿಗೆ ಸುಗಮ ವಾಣಿಜ್ಯ ನಡೆಸುವ ದೃಷ್ಟಿಕೋನದಂತೆ ಒದಗಿಸಲಾಗುತ್ತದೆ.
- ಇದು ಭಾರತದಲ್ಲಿನ ಐ.ಎಫ್.ಎಸ್.ಸಿ.ಗಳ ಹೆಚ್ಚಿನ ಅಭಿವೃದ್ಧಿಗೆ ಪ್ರಚೋದನೆ ಒದಗಿಸುತ್ತದೆ ಮತ್ತು ಪ್ರಸ್ತುತ ಕಡಲಾಚೆಯ ಹಣಕಾಸು ಕೇಂದ್ರಗಳು ನಡೆಸಲಾಗುತ್ತಿರುವ ಹಣಕಾಸು ಸೇವೆಗಳು ಮತ್ತು ವಹಿವಾಟುಗಳನ್ನು ಭಾರತಕ್ಕೆ ಮರಳಿ ತರಲು ಅವಕಾಶ ನೀಡುತ್ತದೆ. ಇದು ಐ.ಎಫ್.ಎಸ್.ಸಿ.ಗಳಲ್ಲಿ ನಿರ್ದಿಷ್ಟವಾಗಿ ಮತ್ತು ಭಾರತೀಯ ಹಣಕಾಸು ವಲಯದಲ್ಲಿ ಸಹ ಗಣನೀಯ ಪ್ರಮಾಣದ ಉದ್ಯೋಗ ಸೃಷ್ಟಿಸುತ್ತದೆ.

## 4. ಭಾರತ ಮತ್ತು ಇಂಡೋನೇಷ್ಯಾ ನಡುವಿನ ಒಪ್ಪಂದಕ್ಕೆ ಸಂಪುಟ ಅನುಮೋದನೆ

### ಪ್ರಮುಖ ಸುದ್ದಿ

- ಪ್ರಧಾನಮಂತ್ರಿ ಅವರ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಂಪುಟ ಸಭೆ, ಶಾಂತಿಯುತ ಉದ್ದೇಶಗಳಿಗೆ ಬಾಹ್ಯಾಕಾಶ ಬಳಕೆ ಮತ್ತು ಶೋಧ ಕಾರ್ಯದಲ್ಲಿ ಪರಸ್ಪರ ಸಹಕಾರ ಹೊಂದುವ ಕುರಿತಂತೆ ಭಾರತ ಮತ್ತು ಇಂಡೋನೇಷ್ಯಾ ನಡುವಿನ ಒಪ್ಪಂದಕ್ಕೆ ಅನುಮೋದನೆ ನೀಡಿತು.

### ಮುಖ್ಯ ಅಂಶಗಳು

- ಈ ನೀತಿ ಒಪ್ಪಂದದಿಂದಾಗಿ ಬಾಹ್ಯಾಕಾಶ ವಿಜ್ಞಾನ, ಬಾಹ್ಯಾಕಾಶದಲ್ಲಿ ಶೋಧ ಕಾರ್ಯ, ಬಾಹ್ಯಾಕಾಶ ತಂತ್ರಜ್ಞಾನ ಬಳಕೆ, ದೂರಸಂವೇದಿ ತಂತ್ರಜ್ಞಾನ, ಬಿಐಎಕೆ,ಟಿಟಿಸಿ ಕೇಂದ್ರದ

ಕಾರ್ಯಾಚರಣೆ ಮತ್ತು ನಿರ್ವಹಣೆ ಭಾರತದ ನೆಲೆಯನ್ನು ಬಳಸಿ ಉಡಾವಣೆ ಐ ಆರ್ ಐ ಎಂ ಎಸ್ ನಿಲ್ದಾಣದಿಂದ ಉಡಾವಣಾ ಕಾರ್ಯ ನಡೆಸುವುದು, ಲಪಾನ್ ನಿಂದ ಮಾಡಲ್ಪಟ್ಟ ಉಪಗ್ರಹಗಳ ಉಡಾವಣೆಗೆ ನೆರವು ನೀಡುವುದು, ಉಡಾವಣಾ ಕೇಂದ್ರಗಳನ್ನು ಅನ್ಯ ಉದ್ದೇಶಗಳಿಗೆ ಬಳಸುವುದು ಮತ್ತಿತರ ವಿಷಯಗಳಲ್ಲಿ ಸಂಭಾವ್ಯ ಹಿತಾಸಕ್ತಿ ವಲಯಗಳಲ್ಲಿ ಪರಸ್ಪರ ಸಹಕಾರ ಹೊಂದಬಹುದಾಗಿದೆ.

- ಈ ಒಪ್ಪಂದದಿಂದಾಗಿ ನಿಗದಿತ ಚಟುವಟಿಕೆಗಳನ್ನು ಅನುಷ್ಠಾನಗೊಳಿಸುವ ವ್ಯವಸ್ಥೆಗಳನ್ನು ಪೂರ್ಣಗೊಳಿಸಲು ಸಾಧ್ಯವಾಗಲಿದೆ. ಈ ಒಪ್ಪಂದದ ಗುರಿ ಸಾಧನೆಗಾಗಿ ಡಿಒಎಸ್/ಇಸ್ರೋ ಮತ್ತು ಇಂಡೋನೇಷ್ಯನ್ ರಾಷ್ಟ್ರೀಯ ಏರೋನಾಟಿಕ್ಸ್ ಮತ್ತು ಬಾಹ್ಯಾಕಾಶ ಕೇಂದ್ರ(ಲಪಾನ್)ದಿಂದ ಸದಸ್ಯರನ್ನು ಆಯ್ಕೆ ಮಾಡಿಕೊಂಡು ಜಂಟಿ ಕಾರ್ಯಕಾರಿ ಸಮಿತಿ ರಚಿಸಬಹುದಾಗಿದೆ.

## ಪ್ರಮುಖ ಪರಿಣಾಮ :

- ಈ ಒಪ್ಪಂದಕ್ಕೆ ಸಹಿ ಹಾಕಿರುವುದರಿಂದ ಭಾರತ ಮತ್ತು ಇಂಡೋನೇಷ್ಯಾ ನಡುವಿನ ಸಹಕಾರ ಸಂಬಂಧ ಇನ್ನಷ್ಟು ಬಲವರ್ಧನೆಯಾಗಿದೆ ಮತ್ತು ಈ ಒಪ್ಪಂದದಿಂದ ಇಂಡೋನೇಷ್ಯಾದಲ್ಲಿ ಇಸ್ರೋದಿಂದ ಟಿಟಿಸಿ ಕೇಂದ್ರ ಮತ್ತು ಐ ಆರ್ ಐ ಎಂ ಎಸ್ ಕೇಂದ್ರಗಳನ್ನು ಸ್ಥಾಪಿಸಲು ನೆರವಾಗಲಿದೆ.

## ಹಿನ್ನೆಲೆ :

- ಭಾರತ ಮತ್ತು ಇಂಡೋನೇಷ್ಯಾ ನಡುವಿನ ಬಾಹ್ಯಾಕಾಶ ಸಂಬಂಧ ಸುಮಾರು ಎರಡು ದಶಕಕ್ಕೂ ಹಳೆಯದು, ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ(ಇಸ್ರೋ) ಇಂಡೋನೇಷ್ಯಾದ ಬಿಐಎಕೆನಲ್ಲಿ ಉಡಾವಣಾ ಕೇಂದ್ರಗಳನ್ನು ಸ್ಥಾಪಿಸಿ, ಆ ಮೂಲಕ ಟೆಲಿಮೆಟ್ರಿ ಟ್ರ್ಯಾಕಿಂಗ್ ಅಂಡ್ ಕಮಾಂಡ್(ಟಿಟಿಸಿ) ನೆರವನ್ನು ಇಸ್ರೋ ಉಡಾವಣಾ ವಾಹಕ ಮತ್ತು ಉಪಗ್ರಹ ಯೋಜನೆಗಳಿಗೆ ಪಡೆದುಕೊಳ್ಳಲಾಗುತ್ತಿದೆ.
- ಈ ಸಹಕಾರವನ್ನು ಪ್ರಸ್ತುತ ಏಜೆನ್ಸಿ ಮಟ್ಟದಲ್ಲಿ(ಇಸ್ರೋ-ಇಂಡೋನೇಷ್ಯನ್ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಏರೋನಾಟಿಕ್ಸ್ ಅಂಡ್ ಸ್ಪೇಸ್ – ಲಪಾನ್) ನಡುವೆ 1997 ಮತ್ತು 2002ರಲ್ಲಿ ಒಡಂಬಡಿಕೆಗಳಿಗೆ ಸಹಿ ಹಾಕಲಾಗಿತ್ತು. 1997ರ ಒಪ್ಪಂದದ ಪ್ರಕಾರ 5 ವರ್ಷಗಳ ನಂತರ ಉಪಕರಣದ ಹಕ್ಕನ್ನು ಲಪಾನ್ ಗೆ ಹಸ್ತಾಂತರಿಸಬೇಕಾಗಿತ್ತು. ಆದರೆ ಅದರ ನಿರ್ವಹಣೆ ಕಾರ್ಯಾಚರಣೆ ಮತ್ತು ಬಳಕೆಯ ಹಕ್ಕು ಭಾರತವೇ ಹೊಂದಬಹುದಾಗಿದೆ.
- ಮೇಲಿನ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಸರ್ಕಾರದ ಮಟ್ಟದಲ್ಲಿ ಸಹಕಾರ ಸಂಬಂಧವನ್ನು ಇನ್ನಷ್ಟು ವೃದ್ಧಿಸುವ ಉದ್ದೇಶದಿಂದ ಇಸ್ರೋ ಮತ್ತು ಲಪಾನ್ ಸಮಾಲೋಚನೆ ನಡೆಸಿ, ಭಾರತ ಮತ್ತು ಇಂಡೋನೇಷ್ಯಾ ನಡುವೆ ಬಾಹ್ಯಾಕಾಶವನ್ನು ಶಾಂತಿಯುತ ಉದ್ದೇಶಗಳಿಗೆ ಬಳಸಲು ಮತ್ತು ಶೋಧ ಕಾರ್ಯಗಳನ್ನು ಕೈಗೊಳ್ಳಲು ಒಪ್ಪಂದದ ಕರಡು ನೀತಿಯನ್ನು ರೂಪಿಸಿದ್ದವು. 2018ರ ಏಪ್ರಿಲ್ 23ರಿಂದ 26 ನಡುವೆ ಜಕಾರ್ತದಲ್ಲಿ ಭಾರತ ಮತ್ತು ಇಂಡೋನೇಷ್ಯಾ ನಡುವೆ ನಡೆದ ಸಭೆಯಲ್ಲಿ ಉಭಯ ದೇಶಗಳು ಈ ಒಪ್ಪಂದದ ಕರಡಿಗೆ ಒಪ್ಪಿಗೆ ಸೂಚಿಸಿದವು.

## 5. ಗ್ರೀನ್‌ಕಾರ್ಡ್ ಮಿತಿ ರದ್ದು: ಮಸೂದೆ ಮಂಡನೆ

### ಪ್ರಮುಖ ಸುದ್ದಿ

- ಅಮೆರಿಕದಲ್ಲಿ ನೆಲೆಸುವುದಕ್ಕೆ ಸಂಬಂಧಿಸಿದಂತೆ ಗ್ರೀನ್ ಕಾರ್ಡ್ ಪಡೆಯಲು ಪ್ರತಿ ದೇಶಕ್ಕೆ ವಿಧಿಸಲಾಗಿರುವ ಮಿತಿಯನ್ನು ತೆಗೆದುಹಾಕಲು ಅನುವು ಮಾಡಿಕೊಡುವ ಎರಡು ಮಸೂದೆಗಳನ್ನು ಇಲ್ಲಿನ ಸಂಸತ್ತಿನಲ್ಲಿ ಮಂಡಿಸಲಾಗಿದೆ. ಈ ಮಸೂದೆ ಕಾನೂನು ಆದರೆ ಭಾರತದ ಅನೇಕ ಉದ್ಯೋಗಿಗಳಿಗೆ ಅನುಕೂಲವಾಗಲಿದೆ.

### ಮುಖ್ಯ ಅಂಶಗಳು

- ಇಂಥ ಮಸೂದೆಯೊಂದನ್ನು ಮಂಡಿಸಲು ಮಾಹಿತಿ ತಂತ್ರಜ್ಞಾನ ಕ್ಷೇತ್ರದ ದೈತ್ಯ ಸಂಸ್ಥೆ ಗೂಗಲ್ ಸೇರಿದಂತೆ ಹಲವಾರು ಕಂಪನಿಗಳು ಒಲವು ತೋರಿದ್ದವು.

### ಕಾನೂನು ಏನು ಹೇಳುತ್ತದೆ?

- ಅಮೆರಿಕ ವರ್ಷಕ್ಕೆ 1.40 ಲಕ್ಷ ಗ್ರೀನ್ ಕಾರ್ಡ್‌ಗಳನ್ನು ಮಾತ್ರ ಸಿದ್ಧಪಡಿಸುತ್ತದೆ. ದೇಶವೊಂದರಿಂದ ಬರುವ ಉದ್ಯೋಗಿಗಳಿಗೆ ಈ ಕಾರ್ಡ್‌ಗಳಲ್ಲಿ ಶೇ 7ರಷ್ಟು ಕಾರ್ಡ್‌ಗಳನ್ನು ಮಾತ್ರ ವಿತರಿಸಲಾಗುತ್ತದೆ. ಈಗಿರುವ ವ್ಯವಸ್ಥೆ ಪ್ರಕಾರ, ಹೆಚ್ಚು ಜನಸಂಖ್ಯೆ ಹೊಂದಿರುವ ಚೀನಾ ಅಥವಾ ಭಾರತದಿಂದ ಅಮೆರಿಕಕ್ಕೆ ಹೋಗುವ ವ್ಯಕ್ತಿ ಗ್ರೀನ್ ಕಾರ್ಡ್ ಪಡೆಯಲು ಬಹಳ ವರ್ಷ ಕಾಯಬೇಕಾಗುತ್ತದೆ. ಆದರೆ, ಕಡಿಮೆ ಜನಸಂಖ್ಯೆ ಇರುವ ದೇಶದ ಪ್ರಜೆಗೆ ಸುಲಭವಾಗಿ ಈ ಕಾರ್ಡ್ ಸಿಗುತ್ತದೆ.

### ಗ್ರೀನ್ ಕಾರ್ಡ್ ಎಂದರೇನು?

- ಅಮೆರಿಕದ ಶಾಶ್ವತ ನಿವಾಸಿ ಎಂಬುದಕ್ಕೆ ಪುರಾವೆ. ಅಮೆರಿಕದ ಪೌರತ್ವ ಪಡೆವ ಮೊದಲೇ ಇರುವ ಒಂದು ವಲಸೆ ಪ್ರಕ್ರಿಯೆ. ಗ್ರೀನ್‌ಕಾರ್ಡ್ ಅಮೆರಿಕದಲ್ಲಿ ಕಾನೂನು ಬದ್ಧ ಶಾಶ್ವತ ನಿವಾಸಿಯಾಗಿದ್ದಾನೆ (ಎಲ್‌ಪಿಆರ್) ಎಂಬುದನ್ನು ತೋರಿಸುತ್ತದೆ. ಗ್ರೀನ್‌ಕಾರ್ಡ್ ಹೊಂದುವುದರಿಂದ ವಲಸೆ ಕುರಿತ ಹಲವು ಲಾಭಗಳನ್ನು ಪಡೆಯಬಹುದು. ಜೊತೆಗೆ ಅಮೆರಿಕದಲ್ಲಿ ಶಾಶ್ವತ ಉದ್ಯೋಗ ಹೊಂದಲು ಇದು ನೆರವಾಗುತ್ತದೆ. ಗ್ರೀನ್‌ಕಾರ್ಡ್ ಹಸಿರು ಬಣ್ಣದಲ್ಲಿದ್ದು, ಆದ್ದರಿಂದ ಇದನ್ನು ಗ್ರೀನ್‌ಕಾರ್ಡ್ ಎಂದು ಕರೆಯಲಾಗುತ್ತದೆ.

### ಪಡೆಯಲು ಯಾರು ಅರ್ಹ?

- ಅಮೆರಿಕ ಪೌರತ್ವಹೊಂದಿದವರೊಂದಿಗೆ ಕೌಟುಂಬಿಕ ಸಂಬಂಧ, ಅಥವಾ ಗ್ರೀನ್‌ಕಾರ್ಡ್ ಹೊಂದಿರುವ ವ್ಯಕ್ತಿಯೊಂದಿಗೆ ಸಂಬಂಧ, ಅಮೆರಿಕದಲ್ಲಿ ಉದ್ಯೋಗ, ಉದ್ಯಮ ನಡೆಸುತ್ತಿರುವವರು, ವರ್ಷಕ್ಕೂ ಹೆಚ್ಚು ಕಾಲ ನಿರಾಶ್ರಿತರಾಗಿ ನೆಲೆಸಿರುವವರು, ಡೈವರ್ಸಿಟಿ ವೀಸಾ ಲಾಟರಿ ಪಡೆದವರು, ಅಮೆರಿಕದಲ್ಲಿ ದೊಡ್ಡ ಮಟ್ಟದ ಉದ್ಯಮ ಸ್ಥಾಪನೆ ಉದ್ದೇಶ

ಹೊಂದಿದವರು, ಕೌಶಲ್ಯ ಹೊಂದಿದ ನೌಕರರು, ಎಚ್ 1ಬಿ ವೀಸಾದಲ್ಲಿ ಅಮೆರಿಕದಲ್ಲಿ ನೌಕರಿ ಮಾಡುತ್ತಿರುವವರು ಆರು ವರ್ಷದೊಳಗಾಗಿ ಗ್ರೀನ್‌ಕಾರ್ಡ್ ಪಡೆಯಲು ಅರ್ಹರು.

### ವರ್ಷಕ್ಕೆಷ್ಟು ಕಾರ್ಡ್ ನೀಡುತ್ತಾರೆ?

- ಗ್ರೀನ್‌ಕಾರ್ಡ್ ನೀಡಿಕೆಯಲ್ಲಿ ಅಮೆರಿಕ ಅದರದ್ದೇ ಆದ ನಿಯಮವನ್ನು ಪಾಲಿಸುತ್ತದೆ. ಇದು ರಾಜ್ಯದಿಂದ ರಾಜ್ಯಕ್ಕೆ ವ್ಯತ್ಯಾಸವಾಗುತ್ತದೆ. ಅದರಂತೆ ಕೌಟುಂಬಿಕ ಉದ್ದೇಶದಿಂದ ಗ್ರೀನ್‌ಕಾರ್ಡ್‌ಗೆ ಅರ್ಜಿ ಹಾಕಿದವರಿಗೆ ವಾರ್ಷಿಕ 4.8 ಲಕ್ಷ ಗ್ರೀನ್‌ಕಾರ್ಡ್ ಅನ್ನು ನೀಡಲಾಗುತ್ತದೆ. ಇನ್ನು ಉದ್ಯೋಗ ಆಧರಿತವಾಗಿ ಗ್ರೀನ್‌ಕಾರ್ಡ್‌ಗೆ ಅರ್ಜಿಸಲ್ಲಿಸಿದವರಿಗೆ ವಾರ್ಷಿಕ ಸುಮಾರು 1.40 ಲಕ್ಷ ಗ್ರೀನ್‌ಕಾರ್ಡ್ ನೀಡಲಾಗುತ್ತದೆ. ಇದು ಹೊರತಾಗಿ ನಿರಾಶ್ರಿತರಿಗೆ ಅಮೆರಿಕ ಅಧ್ಯಕ್ಷರು ಅಲ್ಲಿನ ಸಂಸತ್ತನ್ನು ವಿಶ್ವಾಸಕ್ಕೆ ತೆಗೆದುಕೊಂಡು ನಿರ್ದಿಷ್ಟ ಸಂಖ್ಯೆಯ ಗ್ರೀನ್‌ಕಾರ್ಡ್ ನೀಡಲಾಗುತ್ತದೆ. ವಾರ್ಷಿಕ ಗರಿಷ್ಠ ಎಂದರೆ ಸುಮಾರು 10 ಲಕ್ಷ ಗ್ರೀನ್‌ಕಾರ್ಡ್ ನೀಡಲಾಗುತ್ತದೆ.
- ಅಮೆರಿಕ ಸರ್ಕಾರ ನಿರ್ದಿಷ್ಟವಾಗಿ ಗ್ರೀನ್‌ಕಾರ್ಡ್ ನೀಡಿಕೆಗೆ ಮಿತಿ ಹೇರುತ್ತದೆ. ಈ ಕಾರಣದಿಂದ ಸಹಜವಾಗಿಯೇ ಕಾರ್ಡ್ ಪಡೆಯಲು ಭಾರೀ ನೂಕುನುಗ್ಗಲು ಇರುತ್ತದೆ. ಉದ್ಯಮಿಗಳು, ವಿಜ್ಞಾನಿಗಳು, ಕ್ರೀಡಾಪಟುಗಳು, ಸಂಶೋಧಕರು, ಬಹುರಾಷ್ಟ್ರೀಯ ಕಂಪನಿಗಳ ಅಧಿಕಾರಿ ವರ್ಗಗಳಿಗೆ ಮೊದಲ ಆದ್ಯತೆ ನೀಡಲಾಗುತ್ತದೆ. ವೃತ್ತಿಪರರು, ವಿಶೇಷ ಕೌಶಲ ಹೊಂದಿದ ನೌಕರರು, ಕಾರ್ಮಿಕರು ಮುಂತಾದವರಿಗೆ ನಂತರದ ಸ್ಥಾನ ನೀಡಲಾಗುತ್ತದೆ. ಉದ್ಯಮಿಗಳಿಗೂ ಗ್ರೀನ್‌ಕಾರ್ಡ್ ನೀಡಿಕೆಯಲ್ಲಿ ಸ್ಥಾನವಿದೆ. ಇನ್ನು ವಿಶೇಷ ವಲಸೆಗಾರರು, ನಿರಾಶ್ರಿತರಿಗೂ ವಿವಿಧ ಸಂದರ್ಭ ಆದ್ಯತೆ ಮೇಲೆ ನೀಡಲಾಗುತ್ತದೆ.

IAS/KAS ನಮ್ಮ ಐಎಎಸ್ ಅಕಾಡೆಮಿ ನಮ್ಮಿಂದ..... ಮಸ್ಸೂರಿಗೆ/ಮೈಸೂರಿಗೆ

### ಗ್ರೀನ್‌ಕಾರ್ಡ್ ಮತ್ತು ಪೌರತ್ವಕ್ಕಿರುವ ವ್ಯತ್ಯಾಸವೇನು?

- ? ಗ್ರೀನ್‌ಕಾರ್ಡ್ ಎಂಬುದು ಅಮೆರಿಕದಲ್ಲಿ ಖಾಯಂ ವಾಸವಿದ್ದಾನೆ ಎಂಬುದನ್ನು ಮಾತ್ರ ಹೇಳುತ್ತದೆ. ಆದರೆ ಪೌರತ್ವ ಪಡೆದವರಿಗೆ ಅಮೆರಿಕದ ವಿಶೇಷ ಹಕ್ಕುಗಳು ಪ್ರಾಪ್ತವಾಗುತ್ತದೆ. ಗ್ರೀನ್‌ಕಾರ್ಡ್ ಹೊಂದಿದವರಿಗೆ ತಕ್ಷಣಕ್ಕೆ ಅಮೆರಿಕದ ಪೌರತ್ವ ಸಿಗುವುದಿಲ್ಲ. ಅದರ ಅರ್ಹತೆಗೆ ಅವರು ನಾಚುರಲೈಸೇಶನ್ ಹೆಸರಿನ ಪ್ರಕ್ರಿಯೆಯಲ್ಲಿ ಕಾಯಬೇಕಾಗುತ್ತದೆ. ಗ್ರೀನ್‌ಕಾರ್ಡ್ ಪಡೆದವರು ಅಮೆರಿಕ ಹೊರತಾಗಿ ಬೇರೆ ದೇಶಗಳಲ್ಲಿ ದೀರ್ಘಾವಧಿ ನೆಲೆಸುವಂತಿರುವುದಿಲ್ಲ. ಪೌರರಿಗೆ ಇದರ ಮಿತಿ ಇಲ್ಲ. ಗ್ರೀನ್‌ಕಾರ್ಡ್‌ದಾರರು ಅಮೆರಿಕನ್ ಸರ್ಕಾರದ ಉದ್ಯೋಗಕ್ಕೆ ಅರ್ಹರಲ್ಲ. ಪೌರರು ಅರ್ಹರು.
- ಅಮೆರಿಕನ್ ಪೌರರು ಮಾತ್ರ ಮತದಾನದಲ್ಲಿ ಭಾಗಿಯಾಗಬಹುದು. ಚುನಾವಣೆಗೆ ನಿಲ್ಲಬಹುದು. ಗ್ರೀನ್ ಕಾರ್ಡ್‌ದಾರರಿಗೆ ಈ ಅವಕಾಶವಿಲ್ಲ. ಗ್ರೀನ್‌ಕಾರ್ಡ್‌ದಾರರು ಯಾವುದೇ ಮಧ್ಯವರ್ತಿ ಸಂಸ್ಥೆಯ ನೆರವಿಲ್ಲದೇ ಉದ್ಯೋಗಕ್ಕೆ ಸೇರಬಹುದು, ತಮಗೆ ಬೇಕಾದ ಉದ್ಯೋಗಕ್ಕೆ ಬದಲಾಯಿಸಿಕೊಳ್ಳಬಹುದು. ಪೌರರಿಗೂ ಈ ಅರ್ಹತೆ ಇದೆ.

### ಪೌರತ್ವಕ್ಕೆ ಅರ್ಹತೆಗಳು

- ▯ ಗ್ರೀನ್‌ಕಾರ್ಡ್ ಹೊಂದಿ 5 ವರ್ಷಗಳಾಗಿರಬೇಕು. ಈ ಅವಧಿಯಲ್ಲಿ ಯಾವುದೇ ಮೊಕದ್ದಮೆಗಳನ್ನು ಎದುರಿಸಬಾರದು. ಅರ್ಜಿ ಸಲ್ಲಿಕೆ ಬಳಿಕ ನಾಚುರಲೈಸೇಷನ್ ಅವಧಿ ಇರುತ್ತದೆ. ಇದು ಹೊರತಾಗಿ ಅಮೆರಿಕದಲ್ಲಿ ಜನಿಸಿದವರಿಗೆ ಅಮೆರಿಕ ದಂಪತಿಗೆ ವಿದೇಶದಲ್ಲಿ ಜನಿಸಿದವರು ದಂಪತಿ ನಾಚುರಲೈಸೇಶನ್ ಅವಧಿಯಲ್ಲಿದ್ದಾಗ ಮಗು ಜನಿಸಿದರೆ ಅಮೆರಿಕ ಸಶಸ್ತ್ರ ಪಡೆಗಳಿಗೆ ಸೇರ್ಪಡೆಯಾದರೆ ಇಂತಹವರು ಕೂಡಲೇ ಪೌರತ್ವಕ್ಕೆ ಅರ್ಹರಾಗಿರುತ್ತಾರೆ.

### ಗ್ರೀನ್ ಕಾರ್ಡ್ ಅವಧಿ

- ಗ್ರೀನ್‌ಕಾರ್ಡ್‌ನ ಅವಧಿ 10 ವರ್ಷ ಇರುತ್ತದೆ. ಇದರ ಅವಧಿ ಮುಕ್ತಾಯವಾಗುವ ಕೊನೆಯ ಆರು ತಿಂಗಳ ಒಳಗೆ ಮತ್ತೆ ನವೀಕರಣಕ್ಕೆ ಅರ್ಜಿ ಸಲ್ಲಿಸಬಹುದಾಗಿದೆ.

## 6. ಪ್ರಾಶಸ್ತ್ಯಗಳ ಸಾಮಾನ್ಯ ವ್ಯವಸ್ಥೆ (GSP)

### ಪ್ರಮುಖ ಸುದ್ದಿ

- ಭಾರತ ಮತ್ತು ಅಮೆರಿಕ ನಡುವಿನ ಬಾಂಧವ್ಯ ಉತ್ತಮಗೊಳ್ಳುತ್ತಿರುವ ಬೆನ್ನಲ್ಲೇ ಉಭಯ ರಾಷ್ಟ್ರಗಳ ನಡುವೆ ವಾಣಿಜ್ಯ ಸಮರ ತೀವ್ರಗೊಳ್ಳುವ ಸಾಧ್ಯತೆ ಇದೆ.
- ಭಾರತ ರಫ್ತು ಮಾಡುವ ಉತ್ಪನ್ನಗಳಿಗೆ ಅಮೆರಿಕ 1970ರ ದಶಕದಿಂದಲೂ ಶೂನ್ಯ ತೆರಿಗೆ ವಿಧಿಸುವ ಕ್ರಮ ಅನುಸರಿಸುತ್ತಿದೆ. ಪ್ರಾಶಸ್ತ್ಯಗಳ ಸಾಮಾನ್ಯ ವ್ಯವಸ್ಥೆ (ಜಿಎಸ್‌ಪಿ) ಎಂಬ ಈ ಯೋಜನೆಯ ಲಾಭವನ್ನು ಪಡೆಯುತ್ತಿರುವ ವಿಶ್ವದ ಅತಿದೊಡ್ಡ ರಾಷ್ಟ್ರ ಎಂಬ ಹೆಗ್ಗಳಿಕೆ ಭಾರತದ್ದಾಗಿದೆ.
- ಈ ಯೋಜನೆಯಡಿ ಭಾರತ ಪ್ರತಿವರ್ಷ 39,897 ಕೋಟಿ ರೂ. ಮೌಲ್ಯದ ವಸ್ತುಗಳನ್ನು ರಫ್ತು ಮಾಡುತ್ತದೆ. ಆದರೆ, ತನ್ನ ವಿತ್ತೀಯ ಕೊರತೆ ನೀಗಿಸಿಕೊಳ್ಳುವ ಉದ್ದೇಶದಿಂದ ಅಮೆರಿಕ ಅಂದಾಜು 5 ದಶಕಕ್ಕೂ ಹೆಚ್ಚು ಕಾಲದಿಂದ ಭಾರತಕ್ಕೆ ಕೊಡುತ್ತಿರುವ ಈ ಸೌಲಭ್ಯವನ್ನು ಸ್ಥಗಿತಗೊಳಿಸಲು ಚಿಂತನೆ ನಡೆಸಿದೆ ಎನ್ನಲಾಗಿದೆ.

### ಮುಖ್ಯ ಅಂಶಗಳು

### ಸ್ಥಗಿತಗೊಳಿಸಲು ಕಾರಣವೇನು ?

- ಭಾರತದಿಂದ ಅಮೆರಿಕಕ್ಕೆ ರಫ್ತಾಗುವ 2 ಸಾವಿರಕ್ಕೂ ಹೆಚ್ಚು ಉತ್ಪನ್ನಗಳಿಗೆ ನೀಡುತ್ತಿರುವ ಶೂನ್ಯ ತೆರಿಗೆಯನ್ನು ರದ್ದುಗೊಳಿಸುವ ಬಗ್ಗೆ ಅಮೆರಿಕ ಚಿಂತನೆ ನಡೆಸಿರುವುದು ಇದಕ್ಕೆ ಕಾರಣ.
- ಅಮೆಜಾನ್ ಮತ್ತು ವಾಲ್‌ಮಾರ್ಟ್ ನಿಯಂತ್ರಿತ ಫ್ಲಿಪ್‌ಕಾರ್ಟ್ ಸೇರಿ ಎ-ಕಾಮರ್ಸ್ ಕಂಪನಿಗಳ ವಹಿವಾಟನ್ನುನಿಯಂತ್ರಿಸುವ ನಿಯಮಗಳನ್ನು ಪ್ರಧಾನಿ ನರೇಂದ್ರ ಮೋದಿ ಜಾರಿಗೊಳಿಸಿರುವುದು ಕಾರಣವಾಗಿದೆ.

### ಇದರಿಂದ ಬೀರುವ ಪರಿಣಾಮವೇನು ?

- ಭಾರತದಿಂದ ಅಮೆರಿಕಕ್ಕೆ ರಫ್ತಾಗುವ 2 ಸಾವಿರಕ್ಕೂ ಹೆಚ್ಚು ಉತ್ಪನ್ನಗಳ ಮೇಲಿನ ಶೂನ್ಯ ತೆರಿಗೆ ಸೌಲಭ್ಯ ಸ್ಥಗಿತಗೊಂಡಲ್ಲಿ ಭಾರತದ ಚಿನ್ನಾಭರಣ ವ್ಯಾಪಾರಿಗಳು ಸೇರಿ ಹಲವು ಸಣ್ಣಪುಟ್ಟ ವ್ಯಾಪಾರಿಗಳಿಗೆ ನಷ್ಟವಾಗಲಿದೆ ಎಂದು ಹೇಳಲಾಗುತ್ತಿದೆ.

**ಏನಿದು ಪ್ರಾಶಸ್ತ್ಯಗಳ ಸಾಮಾನ್ಯ ವ್ಯವಸ್ಥೆ ?**

- ಜಿಎಸ್ಪಿಯು 1976 ರಲ್ಲಿ ಪರಿಚಯಿಸಲ್ಪಟ್ಟ ಅತ್ಯಂತ ದೊಡ್ಡ ಮತ್ತು ಹಳೆಯ US ವ್ಯಾಪಾರ ಆದ್ಯತೆ ಕಾರ್ಯಕ್ರಮವಾಗಿದೆ.
- ಸಾಮಾನ್ಯ ಪ್ರಾಧಾನ್ಯತೆಗಳ ವ್ಯವಸ್ಥೆಯು (ಜಿಎಸ್ಪಿ) ಒಂದು ಆದ್ಯತೆಯ ಸುಂಕ ವ್ಯವಸ್ಥೆಯಾಗಿದ್ದು, ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಅಭಿವೃದ್ಧಿಪಡಿಸಿದ ರಾಷ್ಟ್ರಗಳಿಗೆ ತಮ್ಮ ಮಾರುಕಟ್ಟೆಗಳಿಗೆ ಕೆಲವು ಸರಕುಗಳ ಎಮ್ಎಫ್ಎನ್ ಟ್ಯಾರಿಫ್ಗಳನ್ನು (ಹೆಚ್ಚಿನ ಅನುಕೂಲಕರ ರಾಷ್ಟ್ರ) ಅಥವಾ ತೆರಿಗೆ-ಮುಕ್ತ ಪ್ರವೇಶವನ್ನು ವಿಸ್ತರಿಸುತ್ತವೆ.
- ಅಭಿವೃದ್ಧಿ ಹೊಂದಿದ ದೇಶಗಳು ಅಥವಾ ಈ ವ್ಯಾಪಾರದ ಆದ್ಯತೆಯನ್ನು ವಿಸ್ತರಿಸುವ ರಾಷ್ಟ್ರಗಳನ್ನು ದಾನಿ ರಾಷ್ಟ್ರಗಳು ಎಂದು ಕರೆಯಲಾಗುತ್ತದೆ ಮತ್ತು ಲಾಭ-ಸ್ವೀಕರಿಸುವ ರಾಷ್ಟ್ರಗಳನ್ನು ಫಲಾನುಭವಿಯ ದೇಶಗಳು ಎಂದು ಕರೆಯಲಾಗುತ್ತದೆ.
- ಜಿಎಸ್ಪಿಯು ಎಮ್ಎಫ್ಎನ್ ತತ್ವದಿಂದ ವಿನಾಯಿತಿ ಪಡೆದಿದೆ, ಅದರ ಅಡಿಯಲ್ಲಿ ಡಬ್ಲ್ಯುಟಿಒ ಸದಸ್ಯರು ಎಲ್ಲಾ ಇತರ ಡಬ್ಲ್ಯುಟಿಒ ಸದಸ್ಯರನ್ನು ತಮ್ಮ 'ಅತ್ಯಂತ ಅನುಕೂಲಕರ' ವ್ಯಾಪಾರ ಪಾಲುದಾರ-ರಾಷ್ಟ್ರವನ್ನಾಗಿ ಪರಿಗಣಿಸಲು ತೀರ್ಮಾನಿಸುತ್ತಾರೆ.
- GSP ಯು ಭಾರತೀಯ ರಫ್ತುದಾರರಿಗೆ ಪ್ರಯೋಜನಗಳ ಮೂಲಕ ಪರೋಕ್ಷವಾಗಿ ಸುಂಕದ ಸುಂಕ ಮತ್ತು / ಅಥವಾ ಕರ್ತವ್ಯ ಮುಕ್ತ ಪ್ರವೇಶದ ಮೂಲಕ ಆಮದುದಾರರಿಂದ ಲಾಭ ಪಡೆಯುತ್ತದೆ. ಇದು ಹೊಸ ರಫ್ತುದಾರರಿಗೆ ಒಂದು ಹೊಸ ಮಾರುಕಟ್ಟೆಯನ್ನು ಕಂಡುಹಿಡಿಯಲು ಸಹಾಯ ಮಾಡುತ್ತದೆ ಮತ್ತು ದಾನಿ ದೇಶದಲ್ಲಿ ಅಂಚುಗಳನ್ನು ಸುಧಾರಿಸಲು ರಫ್ತುದಾರರನ್ನು ಸ್ಥಾಪಿಸಿದೆ. ಪ್ರಸ್ತುತ, ಇಯು ಸೇರಿದಂತೆ 29 ಅಭಿವೃದ್ಧಿಶೀಲ ದೇಶಗಳು ಭಾರತಕ್ಕೆ ಜಿಎಸ್ಪಿ ವಿಸ್ತರಿಸುತ್ತವೆ

## 7. ಅಬುಧಾಬಿ ಕೋರ್ಟ್‌ಗಳಲ್ಲಿ ತೃತೀಯ ಭಾಷೆಯಾಗಿ ಹಿಂದಿ ಸೇರ್ಪಡೆ

**ಪ್ರಮುಖ ಸುದ್ದಿ**

- ಅಬುಧಾಬಿ ನ್ಯಾಯಾಲಯಗಳಲ್ಲಿ ಹಿಂದಿಯನ್ನು ಅಧಿಕೃತ ತೃತೀಯ ಭಾಷೆಯಾಗಿ ಸೇರ್ಪಡೆ ಮಾಡುವ ಮೂಲಕ ಅಲ್ಲಿನ ನ್ಯಾಯಾಂಗ ಇಲಾಖೆ ಐತಿಹಾಸಿಕ ನಿರ್ಧಾರ ತಳೆದಿದೆ.

**ಮುಖ್ಯ ಅಂಶಗಳು**

**ಈ ತೀರ್ಮಾನ ಕೈಗೊಳ್ಳಲು ಕಾರಣ ?**

- ಅರಬ್ ಸಂಯುಕ್ತ ಸಂಸ್ಥಾನ (ಯುಎಇ)ದಲ್ಲಿ ವಿದೇಶಿಯರ ಸಂಖ್ಯೆ ಸುಮಾರು 50 ಲಕ್ಷ. ಆ ಪೈಕಿ ಭಾರತೀಯರು ಸುಮಾರು 26 ಲಕ್ಷ ಮಂದಿ ಇದ್ದು, ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇ.30ರಷ್ಟು ಇದ್ದಾರೆ.
- ಅರಬ್ ಸಂಯುಕ್ತ ಸಂಸ್ಥಾನದಲ್ಲಿ ಭಾರತೀಯರು ಹೆಚ್ಚಿನ ಸಂಖ್ಯೆಯಲ್ಲಿ ನೆಲೆಸಿರುವ ಕಾರಣ ಅವರಿಗೆ ನೆಲದ ಕಾನೂನು ಅರ್ಥವಾಗಲಿ ಎಂಬ ಕಾರಣಕ್ಕೆ ಈ ತೀರ್ಮಾನ ಕೈಗೊಳ್ಳಲಾಗಿದೆ.
- ಅಬುಧಾಬಿಯ ನ್ಯಾಯಾಂಗ ವ್ಯವಸ್ಥೆಯಲ್ಲಿಅರೇಬಿಕ್ ಹಾಗೂ ಇಂಗ್ಲಿಷ್ ಇತ್ತು. ಇನ್ನು ಮುಂದೆ ಈ ಭಾಷೆಗಳೊಂದಿಗೆ ತೃತೀಯ ಭಾಷೆಯಾಗಿ ಹಿಂದಿಯೂ ಸೇರ್ಪಡೆಗೊಂಡಿದೆ. ಅಬುಧಾಬಿ ನ್ಯಾಯಾಂಗ ಇಲಾಖೆ ಈ ಕುರಿತ ಅಧಿಸೂಚನೆ ಹೊರಡಿಸಿದೆ. ನ್ಯಾಯಾಲಯಕ್ಕೆ ಸಂಬಂಧಿಸಿದ ಎಲ್ಲಾ ಅರ್ಜಿಗಳು ಹಾಗೂ ಇತರ ಕಾನೂನು ಪರಿಕರಗಳು ಇನ್ನು ಮುಂದೆ ಹಿಂದಿಯಲ್ಲಿ ಸಿಗಲಿದೆ. ನ್ಯಾಯಾಂಗ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ತರಲು ಈ ಕ್ರಮ ಕೈಗೊಳ್ಳಲಾಗಿದೆ

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

## ECONOMY

### 1. ಮಧ್ಯಂತರ ಬಜೆಟ್ 2019-20

ಪ್ರಮುಖ ಸುದ್ದಿ

- ಹಣಕಾಸು, ಕಾರ್ಪೊರೇಟ್ ವ್ಯವಹಾರಗಳು, ರೈಲ್ವೆ ಮತ್ತು ಕಲ್ಲಿದ್ದಲು ಸಚಿವ, ಶ್ರೀ ಪಿಯೂಶ್ ಗೋಯಲ್ರಿಂದ ಮಧ್ಯಂತರ ಬಜೆಟ್ 2019-20 ಸಂಸತ್ತಿನಲ್ಲಿ ಪ್ರಸ್ತುತಪಡಿಸಲಾಗಿದೆ.ಮುಂದಿನ ಐದು ವರ್ಷಗಳಲ್ಲಿ 5 ಟ್ರಿಲಿಯನ್ ಯುಎಸ್ ಡಾಲರ್ ಮತ್ತು ಮುಂದಿನ ಎಂಟು ವರ್ಷಗಳಲ್ಲಿ ಯುಎಸ್ಡಿ 10 ಟ್ರಿಲಿಯನ್ ಆರ್ಥಿಕತೆಗೆ ಭಾರತವು ಎದುರು ನೋಡುತ್ತಿದೆ.

### ಮುಖ್ಯ ಅಂಶಗಳು

- ಮಧ್ಯಂತರ ಬಜೆಟ್ 2019 2030 ಕ್ಕೆ 10-ಪಾಯಿಂಟ್ ದೃಷ್ಟಿಕೋನವನ್ನು ನೀಡಿದೆ

### ವಿಷನ್ 2030:

- ಶಾರೀರಿಕ ಹಾಗೂ ಸಾಮಾಜಿಕ ಮೂಲಸೌಕರ್ಯ.
- ಡಿಜಿಟಲ್ ಇಂಡಿಯಾ
- ಶುಚಿತ್ವ ಮತ್ತು ಹಸಿರು ಭಾರತ
- ಗ್ರಾಮೀಣ ಕೈಗಾರಿಕೀಕರಣ
- ನದಿ ಶುದ್ಧೀಕರಣ
- ಸಾಗರ ಮತ್ತು ಕರಾವಳಿ
- ಅಂತರಿಕ್ಷ
- ಆಹಾರ ಉತ್ಪಾದನೆಗೆ ಸ್ವಾವಲಂಬನೆ
- ಆರೋಗ್ಯ
- ಕನಿಷ್ಠ ಸರಕಾರ ಗರಿಷ್ಠ ಆಡಳಿತ
- ಭಾರತವು ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಯಾಗಿದೆ
- 2024 ರ ಹೊತ್ತಿಗೆ, ಭಾರತದಲ್ಲಿ ಎಲ್ಲರಿಗೂ ವಸತಿ ಕಲ್ಪಿಸುವುದು, ಭ್ರಷ್ಟಾಚಾರ, ಕೋಮುವಾದ ಮತ್ತು ಸ್ವಜನಪಕ್ಷಪಾತಗಳಿಂದ ಮುಕ್ತವಾಗಿಸುವುದು.
- ಭಾರತ ಈಗ ವಿಶ್ವದ 6 ನೇ ಅತಿದೊಡ್ಡ ಆರ್ಥಿಕತೆಯಾಗಿದೆ.
- ಹಣದುಬ್ಬರವನ್ನು 1 ಪ್ರತಿಶತಕ್ಕೆ ಇಳಿಸಲಾಗಿದೆ; ಸರಾಸರಿ ಹಣದುಬ್ಬರವು ಶೇ 4.6 ರಷ್ಟಿದೆ
- ಹಣಕಾಸಿನ ಕೊರತೆಯನ್ನು 1 ಪ್ರತಿಶತಕ್ಕೆ ಇಳಿಸಲಾಗಿದೆ.
- ಕರೆಂಟ್ ಅಕೌಂಟ್ ಡೆಫಿಸಿಟ್ ಅನ್ನು ಸಹ ಕೆಳಗೆ ತರಲಾಗಿದೆ.
- 2018-19ರಲ್ಲಿ ಭಾರತ ಗರಿಷ್ಠ ವಿದೇಶಿ ನೇರ ಹೂಡಿಕೆ (ಎಫ್ಡಿಐ) ಅನ್ನು ಆಕರ್ಷಿಸಿತು, ಇದು 239 ಮಿಲಿಯನ್ ಡಾಲರ್ಗಳಷ್ಟಿತ್ತು. ಎಫ್ಡಿಐ ನೀತಿಯ ಶೀಘ್ರ ಉದಾರೀಕರಣದ ಮೂಲಕ ಇದು ಸಾಧ್ಯವಾಗಿದೆ.
- ಕಳೆದ 5 ವರ್ಷಗಳಲ್ಲಿ (2014-2018), ಭಾರತ ಸರಕು ಮತ್ತು ಸೇವೆಗಳ ತೆರಿಗೆ (ಜಿಎಸ್ಟಿ) ಮತ್ತು ಇತರ ತೆರಿಗೆ ಸುಧಾರಣೆಗಳನ್ನು ಪರಿಚಯಿಸುವ ಮೂಲಕ ರಚನಾತ್ಮಕ ಸುಧಾರಣೆಗಳನ್ನು ಕಂಡಿತು.

### ಕೃಷಿ ವಲಯಕ್ಕೆ

- ರೈತರ ಆದಾಯವನ್ನು ಹೆಚ್ಚಿಸಲು ಸರ್ಕಾರವು ಹಲವಾರು ಉಪಕ್ರಮಗಳನ್ನು ಕೈಗೊಂಡಿದೆ.
- ಕನಿಷ್ಟ ಬೆಂಬಲ ಬೆಲೆ (MSP) ಉತ್ಪನ್ನಗಳನ್ನು ಕನಿಷ್ಠ 50 ಪ್ರತಿಶತದಷ್ಟು ಎಂದು ಖಾತರಿಪಡಿಸಿದೆ ಮತ್ತು ರೈತರ ಪರವಾದ ನೀತಿಯನ್ನು ಪರಿಚಯಿಸಿದೆ .
- ರಾಷ್ಟ್ರೀಯ ಗೋಕುಲ್ ಮಿಷನ್ಗೆ 750 ಕೋಟಿ ರೂನೀಡಲಾಗಿದೆ .
- ಹಸುಗಳ ಉತ್ಪಾದನೆ ಮತ್ತು ಉತ್ಪಾದಕತೆಗಾಗಿ 'ರಾಷ್ಟ್ರೀಯ ಕಾಮಧೇನು ಆಯೋಗ' ಸ್ಥಾಪಿಸಲು ಇದು ಘೋಷಿಸಿದೆ .
- ಮೀನುಗಾರಿಕೆ ವಲಯಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಲು ಪ್ರತ್ಯೇಕ ಮೀನುಗಾರಿಕಾ ಇಲಾಖೆ ರಚಿಸಲಾಗುವುದು.
- ಪಶುಸಂಗೋಪನೆ ಮಾಡುವ ರೈತರಿಗೆ 2 ಪ್ರತಿಶತ ಬಡ್ಡಿದರ ಸಬ್ಸಿಡಿಯನ್ನು ನೀಡಲಾಗುವುದು ಮತ್ತು ಸಮಯಕ್ಕೆ ಸಾಲವನ್ನು ಮರುಪಾವತಿಸುವವರಿಗೆ ಹೆಚ್ಚುವರಿ 3 ಪ್ರತಿಶತ ಬಡ್ಡಿದರ ಸಬ್ಸಿಡಿಯನ್ನು ನೀಡಲಾಗುತ್ತದೆ.
- ತೀವ್ರವಾದ ನೈಸರ್ಗಿಕ ವಿಕೋಪಗಳಿಂದ ಬಳಲುತ್ತಿರುವ ರೈತರಿಗೆ, ಮೂರು ಪ್ರತಿಶತದಷ್ಟು ಸಾಲಗಳ ಬಡ್ಡಿ ದರ ಸಬ್ಸಿಡಿಯನ್ನು ನೀಡಲಾಗುತ್ತದೆ. ಸಾಲವನ್ನು ಸಮಯಕ್ಕೆ ಪಾವತಿಸಿದಲ್ಲಿ ಹೆಚ್ಚುವರಿ ಮೂರು ಶೇಕಡ ಸಬ್ಸಿಡಿಯನ್ನು ನೀಡಲಾಗುವುದು.

### ಘೋಷಣೆಯಾದ ಪ್ರಮುಖ ಯೋಜನೆಗಳು

### "ಪ್ರಧಾನ್ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ (PM-KISAN)" .

- ಕೃಷಿ ಸರಕುಗಳು ಮತ್ತು ಆಹಾರ ಹಣದುಬ್ಬರಗಳ ಕುಸಿತದ ಬೆಲೆಗಳು ರೈತರಿಗೆ ಕಡಿಮೆ ಆದಾಯವನ್ನು ತಂದುಕೊಟ್ಟಿದೆ ಎಂದು ಪರಿಗಣಿಸಿ ಸರ್ಕಾರವು ಕಾರ್ಮಿಕರನ್ನು ಮತ್ತು ಬೀಜಗಳನ್ನುಖರೀದಿಸಲು ರೈತರಿಗೆ ರಚನಾತ್ಮಕ ಆದಾಯದ ಬೆಂಬಲ ಅಗತ್ಯವೆಂದು ಭಾವಿಸಿತು ಮತ್ತು ರೈತರ ಕಲ್ಯಾಣಕ್ಕಾಗಿ ಹೊಸ ಯೋಜನೆಯನ್ನು ಪರಿಚಯಿಸಿತು.
- ಯೋಜನೆ 'ಪ್ರಧಾನ್ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ' ಸಣ್ಣ ಮತ್ತು ಅಲ್ಪ ರೈತರಿಗೆ ಖಚಿತವಾದ ಆದಾಯವನ್ನು ನೀಡುತ್ತದೆ.
- 2 ಹೆಕ್ಟೇರ್ ಭೂಮಿಯನ್ನು ಹೊಂದಿರುವ ದುರ್ಬಲ ರೈತರಿಗೆ ವರ್ಷಕ್ಕೆ 6000 ರೂ. ಮೊತ್ತವನ್ನು ನೇರವಾಗಿ ಅವರ ಖಾತೆಗೆ 3 ಸಮಾನ ಕಂತುಗಳಲ್ಲಿ ವರ್ಗಾಯಿಸಲಾಗುತ್ತದೆ.
- ಈ ಯೋಜನೆಗೆ ರೂ. 75000 ಕೋಟಿಗಳ ಸಂಪೂರ್ಣ ಖರ್ಚು ಕೇಂದ್ರ ಸರಕಾರದಿಂದ ಕೊಡಲಾಗುತ್ತದೆ.
- 12 ಕೋಟಿಗಿಂತಲೂ ಹೆಚ್ಚು ರೈತರ ಕುಟುಂಬಗಳು ಈ ಯೋಜನೆಯಡಿಯಲ್ಲಿ ಪ್ರಯೋಜನ ಪಡೆಯಲಿವೆ. ಇದು ಡಿಸೆಂಬರ್ 2018 ರಿಂದ ಜಾರಿಗೊಳ್ಳುತ್ತದೆ .
- ಕೃಷಿ ಕ್ಷೇತ್ರಕ್ಕೆ 100000 ಕೋಟಿ ರೂಪಾಯಿಗಳನ್ನು ನಿಗದಿಪಡಿಸಲಾಗಿದೆ (ರೂ. 75000 ಯೋಜನೆ + 25000 ಕೋಟಿ ಈ ವರ್ಷ ಪರಿಷ್ಕೃತ ಅಂದಾಜಿನ ಪ್ರಕಾರ).

### ಪ್ರಧಾನ್ ಮಂತ್ರಿ ಶ್ರಮ್-ಯೋಗಿ ಮಾನ ಧನ :

ಅಸಂಘಟಿತ ವಲಯಕ್ಕೆ ದೊಡ್ಡ ಪಿಂಚಣಿ ಯೋಜನೆ

- ಜಿಡಿಪಿಯ ಅರ್ಧದಷ್ಟು ಅಸಂಘಟಿತ ವಲಯದಿಂದ ಬರುತ್ತದೆ ಎಂದು ಪರಿಗಣಿಸಿ, 15,000 ರೂ.ಗಿಂತ ಕಡಿಮೆ ಆದಾಯ ಹೊಂದಿರುವ ಅಸಂಘಟಿತ ವಲಯ ಕಾರ್ಮಿಕರಿಗೆ ಮೆಗಾ ಪೆನ್ಷನ್ ಯೋಜನೆಯನ್ನು ಪ್ರಾರಂಭಿಸಲು ಹಣಕಾಸು ಸಚಿವರು ಘೋಷಿಸಿದರು.
- ಈ ಯೋಜನೆಯಡಿಯಲ್ಲಿ, 60 ವರ್ಷ ವಯಸ್ಸಿನ ನಂತರ ಕಾರ್ಮಿಕರಿಗೆ ರೂ 3000 ಗಳಿಸಲು ಸಾಧ್ಯವಾಗುತ್ತದೆ.
- ಈ ಯೋಜನೆಗೆ 500 ಕೋಟಿ ರೂಪಾಯಿ ವೆಚ್ಚವನ್ನು ಬಜೆಟ್ ನಿಗದಿಪಡಿಸಿದೆ.
- 18 ವರ್ಷಗಳಲ್ಲಿ ಪಿಂಚಣಿ ಯೋಜನೆಯೊಂದನ್ನು ಸೇರುವ ಕೆಲಸಗಾರನು ತಿಂಗಳಿಗೆ ರೂ 55 ಕ್ಕೆ ಮಾತ್ರ ಕೊಡುಗೆ ನೀಡಬೇಕಾಗುತ್ತದೆ.

## ರಾಷ್ಟ್ರೀಯ ಗೋಕುಲ್ ಮಿಷನ್

- ಜುಲೈ 28, 2014 ರಂದು ಭಾರತದ ಕೇಂದ್ರ ಸರ್ಕಾರವು ಸ್ಥಳೀಯ ಹಸುಗಳ ಸಂರಕ್ಷಣೆಯನ್ನು ಮತ್ತು ಬೆಳವಣಿಗೆಯನ್ನು ಕೇಂದ್ರೀಕೃತ ಮತ್ತು ವೈಜ್ಞಾನಿಕ ರೀತಿಯಲ್ಲಿ ಉತ್ತೇಜಿಸಲು ರಾಷ್ಟ್ರೀಯ ಗೊಕುಲ್ ಮಿಷನ್ (ರಾಷ್ಟ್ರದಾದ್ಯಂತ ಯೋಜನೆ) ಪ್ರಾರಂಭಿಸಿತು.ಗೋವಿನ ಸಂತಾನವೃದ್ಧಿ ಮತ್ತು ಡೈರಿ ಅಭಿವೃದ್ಧಿಗಾಗಿ ರಾಷ್ಟ್ರೀಯ ಕಾರ್ಯಕ್ರಮದ ಅಡಿಯಲ್ಲಿ ಮಿಷನ್ ಕೇಂದ್ರೀಕೃತ ಯೋಜನೆಯಾಗಿದೆ.

## ಮಿಷನ್ ಗುರಿ

- ಸ್ಥಳೀಯ ತಳಿಗಳ ಅಭಿವೃದ್ಧಿ ಮತ್ತು ಸಂರಕ್ಷಣೆ
- ಅನುವಂಶಿಕ ಮೇಕ್‌ಅಪ್ ಸುಧಾರಿಸಲು ಮತ್ತು ತಳಿಗಳನ್ನು ಹೆಚ್ಚಿಸಲು ಸ್ಥಳೀಯ ಜಾನುವಾರು ತಳಿಗಳಿಗೆ ತಳಿಯ ಸುಧಾರಣೆ ಕಾರ್ಯಕ್ರಮವನ್ನು ಕೈಗೊಳ್ಳುವುದು .
- ಇದು ಹಾಲು ಉತ್ಪಾದನೆ ಮತ್ತು ಉತ್ಪಾದಕತೆಯನ್ನು ಹೆಚ್ಚಿಸುವ ಗುರಿಯನ್ನು ಹೊಂದಿದೆ
- ಗೀರ್, ಸಹಿವಾಲ್, ರಥಿ, ದಿಯೋನಿ, ಥಾರ್ಪಾರ್ಕರ್, ರೆಡ್ ಸಿಂಧಿ ಮತ್ತು ಇತರಗಣ್ಯ ದೇಶೀಯ ತಳಿಗಳನ್ನು ಬಳಸಿಕೊಂಡು ವಿವರವಿಲ್ಲದ ಜಾನುವಾರುಗಳ ಉನ್ನತೀಕರಣಗೊಳಿಸುವುದು .
- ನೈಸರ್ಗಿಕ ರೋಗಮುಕ್ತ ಉನ್ನತ ತಳೀಯ ಅರ್ಹ ಎತ್ತುಗಳ ವಿತರಣೆ.

## ರಾಷ್ಟ್ರೀಯ ಗೋಕುಲ್ ಮಿಷನ್ ಅನುಷ್ಠಾನ

- ರಾಜ್ಯ ಗೊಕುಲ್ ಮಿಷನ್ ಅನ್ನು ರಾಜ್ಯ ಇಂಪ್ಲಿಮೆಂಟಿಂಗ್ ಏಜೆನ್ಸಿ (ಎಸ್‌ಐಎ ವಿಜ್ ಜಾನುವಾರು ಅಭಿವೃದ್ಧಿ ಮಂಡಳಿಗಳು) ಮೂಲಕ ಜಾರಿಗೆ ತರಲಾಗುತ್ತದೆ. ಇಂಟಿಗ್ರೇಟೆಡ್ ಇಂಡಿಜಿನಸ್ ಕ್ಯಾಟಲ್ ಸೆಂಟರ್, ಗೊಕುಲ್ ಗ್ರಾಮ್ ಸ್ಥಾಪನೆಗೆ ಈ ಯೋಜನೆಯ ನಿಧಿಯನ್ನು ಹಂಚಲಾಗುತ್ತದೆ.

- ವಾರ್ಷಿಕ 5 ಲಕ್ಷದವರೆಗಿನ ಆದಾಯ ಹೊಂದಿದ ಮಧ್ಯಮ ವರ್ಗದವರಿಗೆ ಸಂಪೂರ್ಣ ತೆರಿಗೆ ವಿನಾಯಿತಿ ದೊರೆಯಲಿದೆ.
- ಪ್ರಾವಿಡೆಂಟ್ ಫಂಡ್‌ಗಳಲ್ಲಿ ಹಾಗೂ ನಿಗದಿತ ಷೇರುಗಳ ಈಕ್ವಿಟಿಗಳಲ್ಲಿ ಹೂಡಿಕೆ ಮಾಡಿದರೆ ಆದಾಯ ತೆರಿಗೆ ಕಟ್ಟುವ ದೇಶದ ನಾಗರಿಕರ ಒಟ್ಟು ಆದಾಯ 5 ಲಕ್ಷ ರೂ. ವರೆಗೆ ಹೊಂದಿದವರು ಯಾವುದೇ ತೆರಿಗೆ ಕಟ್ಟಬೇಕಿಲ್ಲ ಎಂದೂ ಘೋಷಣೆಯಾಗಿದೆ.
- ದೇಶದ 3 ಕೋಟಿ ಮಧ್ಯಮ ವರ್ಗದವರಿಗೆ, ಸಣ್ಣ ತೆರಿಗೆದಾರರಿಗೆ ಸುಮಾರು 18,500 ತೆರಿಗೆ ಲಾಭವನ್ನು ಕೇಂದ್ರ ಬಜೆಟ್ 2019 – 20 ರಲ್ಲಿ ಘೋಷಿಸಲಾಗಿದೆ. ಜತೆಗೆ, ಪ್ರಮಾಣಿತ ಕಡಿತವನ್ನು ಸದ್ಯದ 40 ಸಾವಿರ ರೂ. ನಿಂದ 50 ಸಾವಿರಕ್ಕೆ ಹೆಚ್ಚಳ ಮಾಡಲಾಗಿದೆ.
- ಅಲ್ಲದೆ, ಬ್ಯಾಂಕ್ ಹಾಗೂ ಅಂಚೆ ಕಚೇರಿಗಳಲ್ಲಿ ಠೇವಣಿ ಹೂಡಿರುವ ಟಿಡಿಎಸ್ ಮಿತಿಯನ್ನು 10 ಸಾವಿರದಿಂದ 40 ಸಾವಿರಕ್ಕೆ ಹೆಚ್ಚಳವಾಗಿದೆ. ಅಲ್ಲದೆ, ಬಾಡಿಗೆ ಮೇಲಿನ ತೆರಿಗೆ ವಿನಾಯಿತಿಯನ್ನು 1 ಲಕ್ಷ 80 ಸಾವಿರ ರೂ. ನಿಂದ 2 ಲಕ್ಷ 40 ಸಾವಿರಕ್ಕೆ ಹೆಚ್ಚಿಸಲಾಗಿದೆ. ಇದರಿಂದ ಸಣ್ಣ ತೆರಿಗೆದಾರರಿಗೆ ರಿಲೀಫ್ ಸಿಗಲಿದೆ.
- ಇಂದಿನಿಂದ, ಎಲ್ಲಾ ರಿಟರ್ನ್ಸ್‌ಗಳನ್ನು 24 ಗಂಟೆಗಳಲ್ಲಿ ಪ್ರಕ್ರಿಯೆಗೊಳಿಸಲಾಗುವುದು ಮತ್ತು ಮರುಪಾವತಿಯನ್ನು ಪ್ರಾರಂಭದಲ್ಲಿ ಪ್ರಾರಂಭಿಸಲಾಗುವುದು.
- ಸಂಪೂರ್ಣ ಪ್ರಕ್ರಿಯೆಯನ್ನು ಹಿಂಭಾಗದಲ್ಲಿ ಮಾಡಲಾಗುತ್ತದೆ, ಇದರಿಂದ ತೆರಿಗೆ ಪಾವತಿಸುವವರು ಅಧಿಕಾರಿಯೊಂದಿಗೆ ಸಂವಹನ ಮಾಡಬೇಕಾಗಿಲ್ಲ, ಆದ್ದರಿಂದ ಸಮಯವನ್ನು ಕಡಿಮೆಗೊಳಿಸಬಹುದು.
- ಜಿಎಸ್ಟಿ ಕೌನ್ಸಿಲ್ನ ಪ್ರಯತ್ನದಿಂದ, ಸರಕು ಮತ್ತು ಸೇವಾ ತೆರಿಗೆ (ಜಿಎಸ್ಟಿ) ತೆರಿಗೆ ಹೆಚ್ಚಳ ಮತ್ತು ಹೆಚ್ಚಿದ ಸಂಗ್ರಹವನ್ನು ಹೆಚ್ಚಿಸಿತು.
- ಬಹು ತೆರಿಗೆಗಳಿಗೆ 50 ಪ್ರತಿಶತದಷ್ಟು ಒಳಗಾಗಿದ್ದ ಸಿನಿಮಾ ಪ್ರಯಾಣಿಕರು ಈಗ 12% ರಷ್ಟು ಕಡಿಮೆ ತೆರಿಗೆಯನ್ನು ಪಾವತಿಸುತ್ತಿದ್ದಾರೆ.
- ಸಣ್ಣ ಉದ್ಯಮಗಳಿಗೆ ಜಿಎಸ್ಟಿ ಯಿಂದ ವಿನಾಯಿತಿ ರೂ. 20 ಲಕ್ಷದಿಂದ ರೂ 40 ಲಕ್ಷಕ್ಕೆ ದುಪ್ಪಟ್ಟು ಮಾಡಲಾಗಿದೆ.
- GST ಪಾವತಕರಲ್ಲಿ 90 ಪ್ರತಿಶತದಷ್ಟು ವ್ಯಾಪಾರವನ್ನು ಹೊಂದಿರುವ ವ್ಯಾಪಾರಗಳು ಶೀಘ್ರದಲ್ಲೇ ತ್ರೈಮಾಸಿಕ ಲಾಭವನ್ನು ಸಲ್ಲಿಸಲು ಅನುಮತಿಸಲಾಗುತ್ತದೆ.
- 36 ಬಂಡವಾಳದ ಸರಕುಗಳ ಮೇಲೆ ಸರಕಾರ ಕರ್ತವ್ಯಗಳನ್ನು ರದ್ದುಪಡಿಸಿತು. ಭಾರತೀಯ ಕಸ್ಟಮ್ಸ್ ಪೂರ್ಣ ಡಿಜಿಟೈಸೇಶನ್ ಪರಿಚಯಿಸುತ್ತಿದೆ.
- ಮೂರು ಮನೆಗಳನ್ನು ಹೊಂದಿದ್ದರೆ, ಈ ಪೈಕಿ ಒಂದು ಮನೆಯಲ್ಲಿ ನೀವು ವಾಸ ಮಾಡುತ್ತಿದ್ದು, ಉಳಿದ ಎರಡು ಮನೆಗಳನ್ನು ಬಾಡಿಗೆ ನೀಡಿಲ್ಲವಾದರೆ, ಈ ಪೈಕಿ ಒಂದು ಮನೆಗೆ ತೆರಿಗೆ ಕಟ್ಟಬೇಕಿಲ್ಲ. ಆ ಒಂದು ಮನೆಯನ್ನು ಸ್ವಯಂ ಆಕ್ರಮಿತ ಮನೆ ಎಂದು ಘೋಷಿಸಿಕೊಳ್ಳಬಹುದು. ಆದರೆ, ಮೂರನೇ ಮನೆ ಬಾಡಿಗೆಗೆ ನೀಡದಿದ್ದರೂ ಬಾಡಿಗೆಗೆ

ನೀಡಿದಂತೆ ಎಂದು ತಿಳಿದುಕೊಂಡು ಅದಕ್ಕೆ ತೆರಿಗೆ ಕಟ್ಟಬೇಕು ಎಂದು ಹೇಳಿದೆ. ಇಲ್ಲಿಯವರೆಗೆ ಎರಡು ಮನೆ ಹೊಂದಿದ್ದು, ಈ ಪೈಕಿ ಎರಡನೇ ಮನೆಗೆ ತೆರಿಗೆ ಕಟ್ಟಬೇಕಿತ್ತು.

### ವೇತನಗಳು ಮತ್ತು ಪಿಂಚಣಿಗಳು

- ಉದ್ಯೋಗಿಗಳ ಪ್ರಾವಿಡೆಂಟ್ ಫಂಡ್ ಸಂಸ್ಥೆ (ಇಪಿಎಫ್ಒ) ಯ ಸದಸ್ಯತ್ವವು ಐದು ವರ್ಷಗಳಲ್ಲಿ 2 ಕೋಟಿ ರೂ. ಹೆಚ್ಚಾಗಿದೆ.
- ಕಳೆದ ಐದು ವರ್ಷಗಳಲ್ಲಿ, ಎಲ್ಲಾ ವರ್ಗದ ಕಾರ್ಮಿಕರ ವೇತನದಲ್ಲಿ 42 ಪ್ರತಿಶತ ಹೆಚ್ಚಳವಾಗಿದೆ.
- ಏಳನೇ ವೇತನ ಆಯೋಗ ಶಿಫಾರಸುಗಳನ್ನು ತ್ವರಿತವಾಗಿ ಅಳವಡಿಸಲಾಗಿದೆ.
- ಹೊಸ ಪಿಂಚಣಿ ಯೋಜನೆ (ಎನ್‌ಪಿಎಸ್) ಅನ್ನು ಉದಾರೀಕರಿಸಲಾಗಿದೆ.
- ಕಾರ್ಮಿಕರಿಗೆ ನೀಡಿದ ಬೋನಸ್ ಗರಿಷ್ಠ ಸೀಲಿಂಗ್ ಅನ್ನು ತಿಂಗಳಿಗೆ ರೂ 3500 ರಿಂದ 7000 ರೂ ವರೆಗೆ ಹೆಚ್ಚಿಸಲಾಗಿದೆ ಮತ್ತು ವೇತನದ ಗರಿಷ್ಟ ಸೀಲಿಂಗ್ ಅನ್ನು ತಿಂಗಳಿಗೆ 10,000 ರಿಂದ ರೂ 21,000 ವರೆಗೆ ಹೆಚ್ಚಿಸಲಾಗಿದೆ.
- 10 ಲಕ್ಷದಿಂದ 20 ಲಕ್ಷ ರುಪಾಯಿಗಳಿಂದ ಹಣದುಬ್ಬರ ಪಾವತಿಯ ಸೀಲಿಂಗ್ ಅನ್ನು ಹೆಚ್ಚಿಸಲಾಗಿದೆ.
- ಸೇವೆಯ ಸಮಯದಲ್ಲಿ ಕಾರ್ಮಿಕರ ಸಾವಿನ ಸಂದರ್ಭದಲ್ಲಿ, ಇಪಿಎಫ್ಓ ಪಾವತಿಸುವ ಮೊತ್ತವನ್ನು 5 ಲಕ್ಷದಿಂದ 6 ಲಕ್ಷದಿಂದ ಹೆಚ್ಚಿಸಲಾಗಿದೆ.
- ಉದ್ಯೋಗಿಗಳ ರಾಜ್ಯ ವಿಮೆ (ಇಎಸ್ಐ) ವ್ಯಾಪ್ತಿಯ ಮಿತಿಯನ್ನು ತಿಂಗಳಿಗೆ 15,000 ರೂ.ನಿಂದ 21000 ರೂ.ಗೆ ಹೆಚ್ಚಿಸಲಾಗಿದೆ.
- ಕನಿಷ್ಠ ಪಿಂಚಣಿ ಸಹ ರೂ 1000 ಗೆ ಹೆಚ್ಚಿಸಲಾಯಿತು
- ಮನೆಗೆಲಸದವರು, ರಿಕ್ಷಾವಾಲಾಗಳು ಮುಂತಾದ ಅಸಂಘಟಿತ ಕಾರ್ಮಿಕರಿಗೆ ಈ ಯೋಜನೆ ಅನ್ವಯವಾಗಲಿದೆ.

### ಮಹಿಳೆಯರ ಭದ್ರತೆಗೆ

- ಮಧ್ಯಂತರ ಬಜೆಟ್‌ನಲ್ಲಿ ಮಹಿಳಾ ರಕ್ಷಣೆ ಮತ್ತು ಸಬಲೀಕರಣಕ್ಕೆ ಒತ್ತು ನೀಡಲಾಗಿದ್ದು ಈ ಉದ್ದೇಶಕ್ಕಾಗಿ 1,330 ಕೋಟಿ ರೂ. ಅನ್ನು ಮೀಸಲಾಗಿರಿಸಲಾಗಿದೆ.

### ಪ್ರಮುಖ ಯೋಜನೆಗಳು

- **ಉಜ್ವಲಾ ಯೋಜನೆ ಯಶಸ್ಸು** :ಗ್ರಾಮೀಣ ಪ್ರದೇಶದ ಮಹಿಳೆಯರು ಅಡುಗೆ ಮಾಡುವಾಗ ಕಣ್ಣೀರು ಹಾಕುವಂತಿರಬಾರದು ಎಂಬ ಉದ್ದೇಶದಿಂದ ಸರಕಾರ ಉಜ್ವಲ ಯೋಜನೆಯನ್ನು ಘೋಷಿಸಿತು.

- ಈ ಯೋಜನೆ ಅಡಿಯಲ್ಲಿ ಉಚಿತವಾಗಿ 8ಕೋಟಿ LPG ಅನಿಲ ಸಂಪರ್ಕಿಸುವ ಗುರಿ ಇದೆ. 6 ಕೋಟಿಗಿಂತ ಹೆಚ್ಚು ಕುಟುಂಬಗಳಿಗೆ ಅನಿಲ ಸಂಪರ್ಕ ಕಲ್ಪಿಸಲಾಗಿದ್ದು, ಉಳಿದ 2 ಕೋಟಿ ಗುರಿಯನ್ನು ಮುಂದಿನ ವರ್ಷದೊಳಗೆ ತಲುಪಲಾಗುವುದು.
- **ಮಾತೃವಂದನಾ ಯೋಜನೆ :** ಪ್ರಧಾನ ಮಂತ್ರಿ ಮುದ್ರಾ ಯೋಜನೆಯ 70% ಫಲಾನುಭವಿಗಳು ಮಹಿಳೆಯರಾಗಿದ್ದಾರೆ. ಮಹಿಳೆಯರಿಗಾಗಿ ಜಾರಿಗೆ ತಂದಿರುವ ಅನೇಕ ಯೋಜನೆಗಳ ಪೈಕಿ ಪ್ರಧಾನ ಮಂತ್ರಿ ಮಾತೃ ವಂದನಾ ಯೋಜನೆಯ ಗರ್ಭಿಣಿ ಮಹಿಳೆಯರಿಗೆ ಆರ್ಥಿಕ ನೆರವನ್ನೊದಗಿಸಿದೆ. 26 ವಾರಗಳ ರಜೆಯನ್ನೊಳಗೊಂಡಿರುವ ಈ ಯೋಜನೆ ಮಹಿಳಾ ಸಬಲೀಕರಣಕ್ಕೆ ಮಹತ್ವದ ಕೊಡುಗೆ ನೀಡಿದೆ, ಕೇಂದ್ರ ಸಚಿವರು ಹೇಳಿದ್ದಾರೆ.
- ಅಂಗನವಾಡಿ ಮತ್ತು ಆಶಾ ಕಾರ್ಯಕರ್ತರಿಗೆ ಈ ಬಾರಿ ಬಜೆಟ್‌ನಲ್ಲಿ ಬಂಪರ್ ಕೊಡುಗೆ ಲಭಿಸಿದ್ದು ವೇತನದಲ್ಲಿ ಶೇ.50 ರಷ್ಟು ಹೆಚ್ಚಳವಾಗಲಿದೆ.

## ಯುವಶಕ್ತಿ ಸಬಲೀಕರಣ

- ಜಗತ್ತಿನಲ್ಲಿ ಅತಿ ಹೆಚ್ಚು ಯುವಜನಾಂಗವನ್ನು ಹೊಂದಿರುವ ದೇಶಗಳಲ್ಲಿ ನಮ್ಮ ದೇಶವೂ ಒಂದು.
- ಪ್ರಧಾನ ಮಂತ್ರಿ ಕೌಶಲ್ಯ ವಿಕಾಸ ಯೋಜನೆ ಅಡಿಯಲ್ಲಿ ಸುಮಾರು 1 ಕೋಟಿ ಯುವಕ-ಯುವತಿಯರು ಜೀವನೋಪಾಯಕ್ಕೆ ದಾರಿ ಕಂಡುಕೊಳ್ಳಲು ತರಬೇತಿ ನೀಡಲಾಗಿದೆ.
- ಮುದ್ರಾ, ಸ್ಟಾರ್ಟ್ ಅಪ್ ಇಂಡಿಯಾ ಮತ್ತು ಸ್ಟ್ಯಾಂಡ್ ಅಪ್ ಇಂಡಿಯಾದಂತಹ ಸ್ವಯಂ ಉದ್ಯೋಗ ಯೋಜನೆಗಳ ಮೂಲಕ ಯುವಶಕ್ತಿಯನ್ನು ಸಬಲಗೊಳಿಸಲಾಗಿದೆ.
- ಮುದ್ರಾ ಯೋಜನೆ ಅಡಿಯಲ್ಲಿ `7,23,000 ಜನರಿಗೆ 56 ಕೋಟಿ ಸಾಲ ನೀಡಲಾಗಿದೆ ಎಂದಿದ್ದಾರೆ ಸಚಿವರು.

## ಕೃತಕ ಬುದ್ಧಿಮತ್ತೆ ಕೇಂದ್ರ

- ಕೃತಕ ಬುದ್ಧಿಮತ್ತೆ ಮತ್ತು ಸಂಬಂಧಿತ ತಂತ್ರಜ್ಞಾನದ ಪ್ರಯೋಜನಗಳನ್ನು ಪಡೆಯಲು 'ಕೃತಕ ಬುದ್ಧಿಮತ್ತೆ' ಕುರಿತಾದ ರಾಷ್ಟ್ರೀಯ ಕಾರ್ಯಕ್ರಮವನ್ನು ಸರ್ಕಾರ ರೂಪಿಸಿದೆ.
- ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ ಸಂಶೋಧನೆಗೆ ಅತ್ಯುನ್ನತ ಕೇಂದ್ರ ಸ್ಥಾಪನೆಗೆ ನಿರ್ಧರಿಸಲಾಗಿದೆ. ಸದ್ಯದಲ್ಲಿಯೇ ರಾಷ್ಟ್ರೀಯ ಕೃತಕ ಬುದ್ಧಿಮತ್ತೆ ಕೇಂದ್ರವನ್ನು ಸ್ಥಾಪಿಸಲಾಗುವುದು.
- ರಾಷ್ಟ್ರೀಯ ಕೃತಕ ಬುದ್ಧಿಮತ್ತೆ ಪೋರ್ಟಲ್ ಕೂಡ ಶೀಘ್ರದಲ್ಲೇ ಅಭಿವೃದ್ಧಿಗೊಳ್ಳಲಿದೆ.

## ರೈಲ್ವೆ ಬಜೆಟ್

- ದೇಶದ ಅತ್ಯಂತ ಹಳೆಯ ಸಂಚಾರ ಸಾಧನವಾದ ಭಾರತೀಯ ರೈಲ್ವೆಗೆ 'ಫಾಸ್ಟ್ ಆ್ಯಂಡ್ ಫ್ಯಾನ್ಸಿ ' ಆಯಾಮ, ರೈಲ್ವೆ ನಿಲ್ದಾಣಗಳು -ವಿಮಾನ ನಿಲ್ದಾಣಗಳಂತೆ ಕಾಣಿಸಬೇಕು ಎನ್ನುವ ಕನಸು

ಹಾಗೂ ಸಂಪೂರ್ಣ ಸುರಕ್ಷತೆ ಖಾತ್ರಿ- ಇದು ಮುಂಗಡ ಪತ್ರದ 'ಅನುಬಂಧ'ವಾಗಿದ್ದ ರೈಲ್ವೆ ಬಜೆಟ್‌ನ ಸಾರಾಂಶ.

- ರೈಲ್ವೆ ಗೆ ಇದೇ ಮೊದಲ ಬಾರಿಗೆ 58 ಲಕ್ಷ ಕೋಟಿ ರೂ. ಮೀಸಲಿರಿಸಲಾಗಿದೆ.
- ಪ್ರಯಾಣ ದರ ಮತ್ತು ಸರಕು ಸಾಗಣೆ ದರದಲ್ಲಿ ಯಾವುದೇ ಏರಿಕೆ ಮಾಡದೆ ರೈಲ್ವೆಯನ್ನು ಆಧುನಿಕತೆಯ ಹಳಿಗೆ ತರುವ ಕನಸನ್ನು ಪಿಯೂಶ್ ಗೋಯಲ್ ಬಿಡಿಸಿಟ್ಟಿದ್ದಾರೆ.
- 2018-19 ಭಾರತೀಯ ರೈಲ್ವೆ ಪಾಲಿಗೆ 'ಸುರಕ್ಷತಾ ವರ್ಷ'
- ಬ್ರಾಡ್‌ಗೇಜ್ ಸಂಪರ್ಕ ಜಾಲದಲ್ಲಿ ಎಲ್ಲ ಮಾನವ ರಹಿತ ಕ್ರಾಸಿಂಗ್‌ಗಳನ್ನು ತೆಗೆದು ಹಾಕಲಾಗಿದೆ. ಎಲ್ಲೆಡೆ ಸುರಕ್ಷತಾ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ.
- ಸಿಸಿಟಿವಿಗಳ ಅಳವಡಿಕೆ, ಹಳಿಗಳ ನಿರ್ವಹಣೆಯಂಥ ಕಾರ್ಯಗಳಿಗೆ ಕಳೆದ ವರ್ಷವೇ ಚಾಲನೆ ನೀಡಲಾಗಿದ್ದು ಈ ವರ್ಷ ಅದಕ್ಕೆ ಇನ್ನಷ್ಟು ವೇಗ ನೀಡಲು ಉದ್ದೇಶಿಸಲಾಗಿದೆ.
- ವಂದೇ ಭಾರತ್: ಸಂಪೂರ್ಣ ಸ್ವದೇಶಿ ನಿರ್ಮಿತ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು, ಭಾರತೀಯ ಪ್ರಯಾಣಿಕರಿಗೆ ಜಾಗತಿಕ ಅನುಭವ ನೀಡಲಿದೆ. ಇದೊಂದು ಭಾರತದ ಅತ್ಯಂತ ಮಹತ್ವಕಾಂಕ್ಷೆ ಯೋಜನೆಯಾಗಿದ್ದು, ಶೀಘ್ರದಲ್ಲೇ ದೇಶದ ಹಳಿಯ ಮೇಲೆ ಗಂಟೆಗೆ 180 ಕಿ.ಮೀ ವೇಗದಲ್ಲಿ ವಂದೇ ಭಾರತ್ ರೈಲು ಸಂಚರಿಸಲಿದೆ. ಮೇಕಿಂಗ್ ಇಂಡಿಯಾ ಕನಸಿನ ಸಕಾರ ರೂಪವಿದು. ಇದೊಂದು ಎಂಜಿನ್ ಇಲ್ಲದ,ಸ್ವಯಂ ಚಾಲಿತ ವ್ಯವಸ್ಥೆ ಇರುವ ಟ್ರೇನ್. ಮುಂದಿನ ಕೆಲ ವರ್ಷಗಳಲ್ಲಿ ಇನ್ನಷ್ಟು ಇಂಥ ರೈಲುಗಳನ್ನು ಓಡಿಸುವ ಹೆಗ್ಗುರಿಯನ್ನು ಹೊಂದಲಾಗಿದೆ.
- ಅತ್ಯಾಧುನಿಕ ತಂತ್ರಜ್ಞಾನ ಹೊಂದಿರುವ ಬೋಗಿಗಳ ನಿರ್ಮಾಣಕ್ಕೆ ಹೊಸ ಗುರಿಯನ್ನು ನೀಡಲಾಗಿದೆ. ರಾಯ್‌ಬರೇಲಿ, ಚೆನ್ನೈ, ಕಪುರ್ತಲ ಮತ್ತು ಹಲ್ದಿಯಾಗಳಲ್ಲಿರುವ ಬೋಗಿ ನಿರ್ಮಾಣ ಕೈಗಾರಿಕೆಗಳು 2019-20ರ ವೇಳೆಗೆ 15 ಸಾವಿರ ವಿವಿಧ ಬಗೆಯ ಬೋಗಿಗಳನ್ನು ನಿರ್ಮಾಣ ಮಾಡಲಿದೆ.

IAS/KAS ನಮ್ಮ ಐಎಎಸ್ ಅಕಾಡೆಮಿ ಬೆಂಗಳೂರಿಂದ..... ಮಸ್ಸೂರಿಗೆ/ಮೈಸೂರಿಗೆ

## ಪ್ರಯಾಣಿಕ ಸ್ನೇಹಿ ಉಪಕ್ರಮಗಳು:

- ಉಚಿತ ವೈಫೈ, ಎಲ್ಲ ನಿಲ್ದಾಣಗಳಲ್ಲಿ ದಿವ್ಯಾಂಗರಿಗೆ ವಿಶೇಷ ಸೌಕರ್ಯ, ವಸತಿ, ಊಟದ ವ್ಯವಸ್ಥೆಯಲ್ಲಿ ಅಚ್ಚುಕಟ್ಟು, ರೈಲ್ ಆ್ಯಪ್‌ಗಳ ಆರಂಭ ಮೊದಲಾದ ಅನುಕೂಲಗಳನ್ನು ಈಗಾಗಲೇ ಒದಗಿಸಲಾಗಿದ್ದು ಪ್ರಸಕ್ತ ವರ್ಷ ಇದು ಇನ್ನಷ್ಟು ವಿಸ್ತರಣೆಯಾಗಲಿದೆ.
- ಹಿಂದೆಲ್ಲ ರೈಲ್ವೆಗೆ ಪ್ರತ್ಯೇಕ ಬಜೆಟ್ ಮಂಡಿಸಲಾಗುತ್ತಿತ್ತು. ಇದೊಂದು ವಸಾಹತುಶಾಹಿ ಕಾಲದ ಪದ್ಧತಿಯಾಗಿತ್ತು. 2017ರಲ್ಲಿ ಮೋದಿ ಸರಕಾರ ಈ ಪದ್ಧತಿಗೆ ಗುಡ್ ಬೈ ಹೇಳಿತು. ಕೇಂದ್ರ ಬಜೆಟ್ ಜತೆ ರೈಲ್ವೆ ಬಜೆಟ್‌ಅನ್ನು ವಿಲೀನಗೊಳಿಸಿತು. ಇದಲ್ಲದೆ ಬಜೆಟ್ ಮಂಡನೆಯಲ್ಲಿ ಹೊಸ ರೈಲುಗಳ ಘೋಷಣೆಯ ಪದ್ಧತಿಯನ್ನು ಕೈಬಿಡಲಾಗಿದೆ.ವೇಗ, ಸುರಕ್ಷತೆ, ಮೂಲ ಸೌಕರ್ಯಗಳಿಗೆ ಆದ್ಯತೆಯಂಥ ಸಂಗತಿಗಳಿಗೆ ಗಮನ ಹರಿಸಲಾಗಿದೆ.

## ಶಿಕ್ಷಣ ಅನುದಾನ

- ಪ್ರಸ್ತುತ ಬಜೆಟ್‌ನಲ್ಲಿ ಶಿಕ್ಷಣ ಕ್ಷೇತ್ರದ ಅನುದಾನದಲ್ಲಿ ಕಳೆದ ವರ್ಷಕ್ಕಿಂತ ಈ ಬಾರಿ ಶೇ.10ರಷ್ಟು ಹೆಚ್ಚಳವಾಗಿದೆ. ಒಟ್ಟು 93,847.64 ಕೋಟಿ ರೂ.ಗಳನ್ನು ಶಿಕ್ಷಣಕ್ಕಾಗಿ ಕಾಯ್ದಿರಿಸಿದೆ.
- ಕಳೆದ ವರ್ಷ ಶಿಕ್ಷಣ ಕ್ಷೇತ್ರದ ಒಟ್ಟು ಅನುದಾನ 85,010 ಕೋಟಿ ರೂ. ಆಗಿತ್ತು. ಉತ್ತನ ಶಿಕ್ಷಣ ಸಂಸ್ಥೆಗಳಲ್ಲಿ ಗುಣಮಟ್ಟದ ಸಂಶೋಧನೆಗಳನ್ನು ಬೆಂಬಲಿಸುವ ದಿಸೆಯಲ್ಲಿ ಸರಕಾರ 'ಶಿಕ್ಷಣ ವ್ಯವಸ್ಥೆ ಹಾಗೂ ಮೂಲಸೌಲಭ್ಯಗಳ ಪುನಶ್ಚೇತನ-(ರೈಸ್)' ಯೋಜನೆ ರೂಪಿಸಿದ್ದು, ಇದಕ್ಕಾಗಿ ಮುಂದಿನ ನಾಲ್ಕು ವರ್ಷಗಳಲ್ಲಿ 1 ಲಕ್ಷ ಕೋಟಿ ರೂ. ವಿನಿಯೋಗಿಸಲು ನಿರ್ಧರಿಸಿದೆ.
- ಹೊಸ ಸಂಶೋಧನೆಗಳ ಮೇಲಿನ ಅನುದಾನವನ್ನು 23 ಕೋಟಿ ರೂ.ಗಳಿಂದ 608.87 ಕೋಟಿ ರೂ.ಗಳಿಗೆ ಹೆಚ್ಚಳ ಮಾಡಲಾಗಿದೆ.
- ದೇಶದ ಯೋಜನೆ ಮತ್ತು ವಿನ್ಯಾಸ ವಲಯದ ಸವಾಲು ನಿಭಾಯಿಸುವುದಕ್ಕಾಗಿಯೇ 'ಸ್ಕೂಲ್ಸ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್ (ಸ್ಪಾ)' ಸಂಸ್ಥೆಗಳನ್ನು ಆರಂಭಿಸುವ ಇಂಗಿತವನ್ನು ಸರಕಾರ ವ್ಯಕ್ತಪಡಿಸಿದೆ.
- ಐಐಟಿ ಮತ್ತು ಎನ್‌ಐಟಿಗಳು ಸೇರಿದಂತೆ ಇತರೆ 18 ಸ್ವಾಯತ್ತ ಶಿಕ್ಷಣ ಸಂಸ್ಥೆಗಳಲ್ಲಿಯೂ ಸ್ಪಾ ಆರಂಭಿಸಲು ನಿರ್ಧರಿಸಲಾಗಿದೆ. ಇವುಗಳ ಆರಂಭಕ್ಕೆ ಈಗಾಗಲೇ ಪ್ರಕ್ರಿಯೆ ಶುರುವಾಗಿದೆ.
- 'ಆಪರೇಷನ್ ಡಿಜಿಟಲ್ ಬೋರ್ಡ್ ' ಕಾರ್ಯಕ್ರಮದ ರೂಪುರೇಷೆಗಳನ್ನು ಉನ್ನತ ಶಿಕ್ಷಣ ಇಲಾಖೆ ಸಿದ್ಧಪಡಿಸುತ್ತಿದೆ.

### ರಕ್ಷಣಾ ಬಜೆಟ್

- 2019-20ನೇ ಸಾಲಿನ ರಕ್ಷಣಾ ಬಜೆಟ್ ಪ್ರಸಕ್ತ ಸಾಲಿನ 85 ಲಕ್ಷ ಕೋಟಿಗೆ ಹೋಲಿಸಿದರೆ 20,000 ಕೋಟಿ ಹೆಚ್ಚಾಗಿದೆ.
- ರಕ್ಷಣಾ ವ್ಯವಸ್ಥೆ ಬಲಗೊಳಿಸಲು ಒತ್ತು ನೀಡಿರುವ ಮೋದಿ ಸರಕಾರವು, ಈ ವಲಯಕ್ಕೆ ಬಜೆಟ್‌ನಲ್ಲಿ 05 ಲಕ್ಷ ಕೋಟಿ ರೂ. ಮೀಸಲಿಡಲಾಗಿದೆ.
- 'ದೇಶದ ಗಡಿಗಳು ಭದ್ರಪಡಿಸಲು ಮತ್ತು ರಕ್ಷಣಾ ವ್ಯವಸ್ಥೆಯನ್ನು ಸನ್ನದ್ಧ ಸ್ಥಿತಿಯಲ್ಲಿಡಲು ಈ ಬಜೆಟ್‌ನಲ್ಲಿ ಹೆಚ್ಚಿನ ಹಣ ನೀಡಲಾಗಿದೆ.
- ಕಳೆದ 40 ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ಏಕ ರಾರಯಂಕ್ ಏಕ ಪಿಂಚಣಿ(ಒಆರ್‌ಒಪಿ) ಯೋಜನೆಯನ್ನು ನಮ್ಮ ಸರಕಾರವು ಜಾರಿಗೊಳಿಸಿದೆ
- ಮಿಲಿಟರಿ ಸೇವಾ ವೇತನವನ್ನು(ಎಂಎಸ್‌ಪಿ) ಎಲ್ಲ ಸಿಬ್ಬಂದಿಗೆ, ಅಪಾಯದ ಕೆಲಸಗಳಿಗೆ ನಿಯೋಜನೆಯಾಗಿರುವ ನೌಕಾಪಡೆ ಮತ್ತು ವಾಯುಪಡೆಯ ಸಿಬ್ಬಂದಿಗೆ ವಿಶೇಷ ಭತ್ಯೆಯನ್ನು ನೀಡುವುದಾಗಿ ಘೋಷಿಸಿದ್ದಾರೆ.

### ಚಿತ್ರೋದ್ಯಮ

- ಕೇಂದ್ರದಿಂದ ಮಂಡನೆಯಾಗಿರುವ ಈ ಬಾರಿಯ ಬಜೆಟ್‌ನಲ್ಲಿ 'ಸಿಂಗಲ್ ವಿಂಡೋ ಕ್ಲಿಯರೆನ್ಸ್' ವ್ಯವಸ್ಥೆಯಡಿ ಭಾರತೀಯ ಸಿನಿಮಾಗಳ ನಿರ್ಮಾಣಕ್ಕೆ ಒತ್ತು ನೀಡಲಾಗಿದೆ. ಇದು ಚಿತ್ರರಂಗಕ್ಕೆ ಸಹಾಯ ಮಾಡುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆಯಾಗಿದೆ.
- ಒಂದೇ ಕಡೆ ಸಿನಿಮಾ ನಿರ್ಮಾಣಕ್ಕೆ ಸಂಬಂಧಪಟ್ಟ ಅನುಮತಿ ಪತ್ರಗಳನ್ನು ನೀಡುವುದು ಸಾಧ್ಯವಾದರೆ ಈಗಿರುವ ಪದ್ಧತಿಯಿಂದ ಆಗುತ್ತಿರುವ ಸಮಸ್ಯೆಗಳು ತಪ್ಪಲಿವೆ. ಈ ಮೊದಲು ವಿದೇಶಗಳ ಚಿತ್ರಗಳಿಗೆ ಮಾತ್ರ ಸಿಂಗಲ್ ವಿಂಡೋ ಪದ್ಧತಿ ಜಾರಿಯಲ್ಲಿತ್ತು. ಈಗ ಅದನ್ನು ಭಾರತೀಯ ಚಿತ್ರಗಳಿಗೂ ವಿಸ್ತರಿಸಲಾಗಿದೆ.
- ಸಿನಿಮಾ ಫೋಟೋಗ್ರಫಿಯ ಪ್ರೈವಸಿಗಾಗಿ ಆಂಟಿ ಕ್ಯಾಮ್ ಕೋರ್ಡಿಂಗ್ ರಚಿಸಲಾಗಿದ್ದು ಇದರಿಂದ ಪೈರಸಿ ವಿರುದ್ಧ ಹೋರಾಡಲು ಚಿತ್ರೋದ್ಯಮಕ್ಕೆ ಭಾರಿ ಬಲ ಬರಲಿದೆ.
- ಜತೆಗೆ, ಮುಂದಿನ 5 ವರ್ಷಗಳಲ್ಲಿ 1 ಲಕ್ಷ ಡಿಜಿಟಲ್ ಹಳ್ಳಿಗಳ ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ. 5 ವರ್ಷಗಳ ನಂತರ ಮತ್ತೂ ಲಕ್ಷಗಳಷ್ಟು ಡಿಜಿಟಲ್ ಹಳ್ಳಿಗಳ ಸೃಷ್ಟಿಗಾಗಿ ಯೋಜನೆ ರೂಪಿಸಲಾಗಿದೆ.
- ಅಷ್ಟೇ ಅಲ್ಲದೇ, 'ಡಿಜಿಟಲ್ ಗ್ರಾಮ'ಗಳ ನಿರ್ಮಾಣಕ್ಕೆ ಒತ್ತು ನೀಡಲಾಗಿದೆ. ಇದೂ ಕೂಡ ಚಿತ್ರೋದ್ಯಮಕ್ಕೆ ಲಾಭ ತರಲಿದೆ. ತಾಂತ್ರಿಕತೆ ಒಳಗೊಂಡಿರುವ ಇಂತಹ ಗ್ರಾಮಗಳ ಮೂಲಕ ಚಿತ್ರ ನಿರ್ಮಾಣಕ್ಕೆ ಹೆಚ್ಚಿನ ಮಹತ್ವ ಸಿಗಲಿದೆ. ಹಳ್ಳಿಗಳಲ್ಲಿ ತಾಂತ್ರಿಕತೆ ಮನೆಮಾಡುವ ಮೂಲಕ ಈಗಿರುವ ಸಿಟಿ-ಹಳ್ಳಿಗಳ ಅಂತರ ಕಮ್ಮಿಯಾಗಿ ತಾಂತ್ರಿಕತೆ ಅಳವಡಿಸಕೊಂಡ ಹಳ್ಳಿಗಳ ಮೂಲಕ ಚಿತ್ರೋದ್ಯಮ ಹೆಚ್ಚಿನ ಲಾಭ ಗಳಿಸಲಿದೆ.

## MSME ಸೆಕ್ಟರ್

- 59 ನಿಮಿಷಗಳಲ್ಲಿ 1 ಕೋಟಿ ರೂ. ವರೆಗೆ ಸಾಲ ನೀಡುವ ಮಂಜೂರಾತಿ ಯೋಜನೆಯನ್ನು ಪ್ರಾರಂಭಿಸಲಾಗಿದೆ. ಜಿಎಸ್ಟಿ-ನೋಂದಾಯಿತ ಎಂಎಸ್ಎಂಇ ಘಟಕಗಳು 1 ಕೋಟಿ ರೂ. ಹೆಚ್ಚಳದ ಸಾಲದ ಮೇಲೆ 2 ಪ್ರತಿಶತ ಬಡ್ಡಿ ರಿಯಾಯಿತಿ ದರವನ್ನು ಪಡೆಯುತ್ತವೆ.
- ಉದ್ಯೋಗ ಹುಡುಕುವವರು ಉದ್ಯೋಗ ನೀಡುವವನಾಗಿ ಮಾರ್ಪಟ್ಟಿದ್ದಾರೆ.
- ಸರ್ಕಾರದ ಯೋಜನೆಗಳಿಗೆ 25% ರಷ್ಟು ಮೂಲಸೌಕರ್ಯವು ಈಗ MSME ವಲಯದಿಂದ ಹೊರಹೊಮ್ಮಲಿದೆ, ಅದರಲ್ಲಿ ಮೂರು ಪ್ರತಿಶತ ಮಹಿಳೆಯರು ಮಹಿಳಾ ಉದ್ಯಮಿಗಳು.
- MSME ಗಳು ಈಗ ತಮ್ಮ ಉತ್ಪನ್ನಗಳನ್ನು ಸರ್ಕಾರಿ ಇಮಾರ್ಕೆಟ್ಪ್ಲೇಸ್ (ಜಿಎಂಎಂ) ನಲ್ಲಿ ಮಾರಾಟ ಮಾಡಬಹುದು, ಸಾಮಾನ್ಯ ಬಳಕೆಯ ಸರಕುಗಳ ಆನ್ಲೈನ್ ಗಳಿಕೆಯನ್ನು ಸುಲಭಗೊಳಿಸಲು ಒಂದು ಸ್ವಾಪ್-ಶಾಪ್

## ಬೆಳವಣಿಗೆ ಮತ್ತು ಎಫ್‌ಡಿಐ

- ಕಳೆದ ಐದು ವರ್ಷಗಳಲ್ಲಿ ದೇಶವು ತನ್ನ ಅತ್ಯುತ್ತಮ ಆರ್ಥಿಕ ಸ್ಥಿರತೆಯ ಸ್ಥಿತಿಯನ್ನು ಕಂಡುಕೊಂಡಿದೆ. "ಕಳೆದ ಐದು ವರ್ಷಗಳಲ್ಲಿ ಆರ್ಥಿಕ ಸುಧಾರಣೆಗಳು 1991 ರಲ್ಲಿ ಆರಂಭವಾದಂದಿನಿಂದ ಯಾವುದೇ ಸರ್ಕಾರದ ಸಾಧನೆಯ ಬೆಳವಣಿಗೆಗಿಂತ ಹೆಚ್ಚಿನ ವಾರ್ಷಿಕ

ಸರಾಸರಿ ಜಿಡಿಪಿ ಬೆಳವಣಿಗೆಯೊಂದಿಗೆ ನಾವು ಜಗತ್ತಿನಲ್ಲಿ ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಆರ್ಥಿಕತೆಯಾಗಿದೆ.

- 2013-14ನೇ ಸಾಲಿನಲ್ಲಿ ವಿಶ್ವದ 11 ನೇ ಅತಿದೊಡ್ಡ ಆರ್ಥಿಕತೆಯಿಂದ, ನಾವು ಇಂದು ಜಗತ್ತಿನಲ್ಲಿ 6 ನೆಯ ಅತಿ ದೊಡ್ಡ ಆರ್ಥಿಕ ದೇಶವಾಗಿ ಬೆಳೆದ್ದಿದ್ದೇವೆ

### ಹಣಕಾಸಿನ ಕೊರತೆ

- 2018-19ರಲ್ಲಿ ಹಣಕಾಸಿನ ಕೊರತೆಯನ್ನು 4% ಕ್ಕೆ ಇಳಿಸಲಾಗಿದೆ. ಏಳು ವರ್ಷಗಳ ಹಿಂದೆ ಸುಮಾರು 6% ನಷ್ಟು ಹೆಚ್ಚಳವಾಗಿದೆ. ಆರು ವರ್ಷಗಳ ಹಿಂದೆಯೇ 5.6% ರಷ್ಟಕ್ಕೆ ಹೋಲಿಸಿದರೆ ಕರೆಂಟ್ ಅಕೌಂಟ್ ಡೆಫಿಸಿಟ್ (ಸಿಎಡಿ) ಈ ವರ್ಷದ ಜಿಡಿಪಿಯಲ್ಲಿ ಕೇವಲ 2.5% ರಷ್ಟಿದೆ.
- "ಹಣಕಾಸಿನ ಆಯೋಗದ ಶಿಫಾರಸುಗಳು ಕೇಂದ್ರ ತೆರಿಗೆಗಳಲ್ಲಿ 32% ರಿಂದ 42% ರವರೆಗೆ ರಾಜ್ಯಗಳ ಪಾಲನ್ನು ಹೆಚ್ಚಿಸುವುದರ ಹೊರತಾಗಿಯೂ ನಾವು ಹಣಕಾಸಿನ ಕೊರತೆಯನ್ನು ಹೊಂದಿದ್ದೇವೆ.
- ನಾವು ಸಹಕಾರ ಫೆಡರಲಿಸಂನ ನಿಜವಾದ ಉತ್ಸಾಹದಲ್ಲಿ ಸ್ವೀಕರಿಸಿದ್ದೇವೆ, ಇದರಿಂದಾಗಿ ರಾಜ್ಯಗಳಿಗೆ ಗಣನೀಯವಾಗಿ ಹೆಚ್ಚಿನ ಪ್ರಮಾಣದ ವರ್ಗಾವಣೆ ಮಾಡಲಾಗುತ್ತಿದೆ"

## 2. ಇ-ಕಾಮರ್ಸ್‌ಗೆ ಪರಿಷ್ಕೃತ ನಿಯಮ

### ಪ್ರಮುಖ ಸುದ್ದಿ

- ಇ-ಕಾಮರ್ಸ್ (ಆನ್‌ಲೈನ್ ವ್ಯಾಪಾರ) ಹೂಡಿಕೆಗೆ ಕೇಂದ್ರ ಸರ್ಕಾರದ ಪರಿಷ್ಕೃತ ನೀತಿಗಳು ಫೆ.1ರಿಂದ ಜಾರಿಗೊಂಡಿವೆ.

### ಮುಖ್ಯ ಅಂಶಗಳು

### ಏನಿದು ಹೊಸ ಇ-ವಾಣಿಜ್ಯ ನಿಯಮ ?

- ಕಂಪನಿಗಳು ತಮ್ಮ ಪಾಲನ್ನು ಹೊಂದಿರುವ ಕಂಪನಿಗಳ ಉತ್ಪನ್ನಗಳನ್ನು ಮಾರಾಟ ಮಾಡುವುದನ್ನು ನಿರ್ಬಂಧಿಸುತ್ತದೆ.
- ಮಾರಾಟಗಾರರನು ಮಾರುಕಟ್ಟೆಯ ಘಟಕದ ಮೂಲಕ (ಇ-ಕಾಮರ್ಸ್ ಘಟಕದ ಐಟಿ ಪ್ಲಾಟ್‌ಫಾರ್ಮ್) ಅಥವಾ ಅದರ ಗುಂಪಿನ ಕಂಪೆನಿಗಳ ಮೂಲಕ ಮಾರಬಲ್ಲ ದಾಸ್ತಾನು ಶೇಕಡಾವನ್ನು ಕಾಪಾಡುವುದು.
- ಆಳವಾದ ರಿಯಾಯಿತಿಯ ಅಭ್ಯಾಸವನ್ನು ನಿಗ್ರಹಿಸಲು ಸರಕಾರವು, ಸರಕು ಮತ್ತು ಸೇವೆಗಳ ಬೆಲೆಯನ್ನು ನೇರವಾಗಿ ಅಥವಾ ಪರೋಕ್ಷವಾಗಿ ಪ್ರಭಾವಿಸಬಾರದು ಮತ್ತು ಉತ್ಪನ್ನಗಳ ಮಾರಾಟವನ್ನು ಕೇವಲ ಒಂದು ಮಾರುಕಟ್ಟೆಯಲ್ಲಿ ನಿಷೇಧಿಸುವ ನಿಯಮಗಳ ಹೊಸ ನಿಯಮವನ್ನೂ ಕೂಡ ತಂದಿದೆ.

## ಇ-ವಾಣಿಜ್ಯ ಮಾರುಕಟ್ಟೆ ಮಾದರಿ ಮತ್ತು ದಾಸ್ತಾನು ಮಾದರಿಯ ನಡುವಿನ ವ್ಯತ್ಯಾಸವೇನು?

- ಇ-ವಾಣಿಜ್ಯ ಮಾರುಕಟ್ಟೆಯಲ್ಲಿ ಹೊಸ ಎಫ್‌ಡಿಐ ನೀತಿ ನಿಯಂತ್ರಣವು ಇ-ವಾಣಿಜ್ಯ ಮಾರುಕಟ್ಟೆಯಲ್ಲಿ ಸ್ವಯಂಚಾಲಿತ ಮಾರ್ಗದಲ್ಲಿ 100% ಎಫ್‌ಡಿಐಗೆ ಅನುಮತಿ ನೀಡಿದೆ. ಇದಕ್ಕೆ ಅನುಗುಣವಾಗಿ, ದಾಸ್ತಾನು ಮಾದರಿಯಲ್ಲಿ ಎಫ್‌ಡಿಐ ಅನ್ನು ಅನುಮತಿಸಲಾಗುವುದಿಲ್ಲ.
- ಎಫ್‌ಡಿಐ ನೀತಿ ಮಾರ್ಗದರ್ಶಿ ಪ್ರಕಾರ, "ಇ-ಕಾಮರ್ಸ್ ಗೆ ಮಾರುಕಟ್ಟೆ ಮಾದರಿ ಅರ್ಥಾತ್ ಡಿಜಿಟಲ್ ಮತ್ತು ಎಲೆಕ್ಟ್ರಾನಿಕ್ ನೆಟ್ವರ್ಕ್‌ನಲ್ಲಿ ಇ-ಕಾಮರ್ಸ್ ಘಟಕದ ಮೂಲಕ ಮಾಹಿತಿ ತಂತ್ರಜ್ಞಾನ ವೇದಿಕೆಯನ್ನು ಒದಗಿಸುವವರು ಖರೀದಿದಾರ ಮತ್ತು ಮಾರಾಟಗಾರರ ನಡುವೆ ಅನುಕೂಲಕರವಾಗಿ ಕಾರ್ಯನಿರ್ವಹಿಸುವಂತೆ".
- ಮಾರುಕಟ್ಟೆ ಸ್ಥಳಗಳು ವೇದಿಕೆಗಳಾಗಿವೆ, ಇದು ಖರೀದಿದಾರರು ಮತ್ತು ಮಾರಾಟಗಾರರ ದೊಡ್ಡದಾದ, ಛಿದ್ರಗೊಂಡ ಬೇಸ್ ಅನ್ನು ಸಮರ್ಥವಾಗಿ, ಪಾರದರ್ಶಕ ಮತ್ತು ವಿಶ್ವಾಸಾರ್ಹವಾಗಿರುವ ವಾತಾವರಣದಲ್ಲಿ ಪರಸ್ಪರ ಪತ್ತೆಹಚ್ಚಲು ಮತ್ತು ವಿನಿಮಯ ಮಾಡಿಕೊಳ್ಳಲು ಸಹಾಯ ಮಾಡುತ್ತದೆ.

## ಮಾರುಕಟ್ಟೆ ಸ್ಥಳ ಮಾದರಿಯ ಮುಖ್ಯ ಲಕ್ಷಣಗಳು

- ಫ್ಲಿಪ್ಕಾರ್ಟ್, ಸ್ನ್ಯಾಪ್‌ಡೀಲ್, ಅಮೆಜಾನ್ ಮುಂತಾದ ಇ-ಕಾಮರ್ಸ್ ಸಂಸ್ಥೆಯು ಆಯ್ಕೆಮಾಡಿದ ಸಂಖ್ಯೆಯ ಮಾರಾಟಗಾರರೊಂದಿಗೆ ಸಂವಹನ ನಡೆಸಲು ವೇದಿಕೆ ಒದಗಿಸುತ್ತಿದೆ.
- ಒಬ್ಬ ವ್ಯಕ್ತಿಯು ಫ್ಲಿಪ್ಕಾರ್ಟ್‌ನಿಂದ ಉತ್ಪನ್ನವನ್ನು ಖರೀದಿಸಿದಾಗ, ಅವನು / ಅವಳು ನಿಜವಾಗಿ ಫ್ಲಿಪ್ಕಾರ್ಟ್‌ನಲ್ಲಿ ನೋಂದಾಯಿತ ಮಾರಾಟಗಾರರಿಂದ ಅದನ್ನು ಖರೀದಿಸುತ್ತಾನೆ.
- ಉತ್ಪನ್ನವನ್ನು ಫ್ಲಿಪ್ಕಾರ್ಟ್ ನೇರವಾಗಿ ಮಾರಾಟ ಮಾಡುವುದಿಲ್ಲ. ಇಲ್ಲಿ ಫ್ಲಿಪ್ಕಾರ್ಟ್ ಒಂದು ವೆಬ್‌ಸೈಟ್ ಪ್ಲಾಟ್‌ಫಾರ್ಮ್ ಆಗಿದ್ದು, ಗ್ರಾಹಕನು ಮಾರಾಟಗಾರನನ್ನು ಭೇಟಿಯಾಗುತ್ತಾನೆ.
- ಇನ್ವೆಂಟರಿ, ಸ್ಟಾಕ್ ನಿರ್ವಹಣೆ, ಲಾಜಿಸ್ಟಿಕ್ಸ್ ಇತ್ಯಾದಿಗಳನ್ನು ಇಕಾಮರ್ಸ್ ಸಂಸ್ಥೆಯಿಂದ ಸಕ್ರಿಯವಾಗಿ ಮಾಡಬೇಕಾಗಿಲ್ಲ.

## ಇನ್ವೆಂಟರಿ ಮಾದರಿ ಎಂದರೇನು ?

- ಎಫ್‌ಡಿಐ ನೀತಿಯ ಅನುಸಾರ, " ಇನ್ವೆಂಟರಿ ಮಾದರಿಯು ಇಕಾಮರ್ಸ್ ಚಟುವಟಿಕೆಯಾಗಿದೆ, ಅಲ್ಲಿ ಸರಕು ಮತ್ತು ಸೇವೆಗಳ ಪಟ್ಟಿ ಇ-ಕಾಮರ್ಸ್ ಘಟಕದ ಮಾಲೀಕತ್ವವನ್ನು ಹೊಂದಿದೆ ಮತ್ತು ನೇರವಾಗಿ ಗ್ರಾಹಕರಿಗೆ ಮಾರಲಾಗುತ್ತದೆ."

## ಇ ಕಾಮರ್ಸ್-ದಾಸ್ತಾನು ಮಾದರಿಯ ಮುಖ್ಯ ಲಕ್ಷಣಗಳು

- ಗ್ರಾಹಕರು ಇಕಾಮರ್ಸ್ ಸಂಸ್ಥೆಯಿಂದ ಉತ್ಪನ್ನವನ್ನು ಖರೀದಿಸುತ್ತಾರೆ.
- ಅವನು / ಅವಳು ಒಂದು ದಾಸ್ತಾನು (ಉತ್ಪನ್ನಗಳ ಸ್ಟಾಕ್), ಗ್ರಾಹಕರೊಂದಿಗೆ ಸಂಪರ್ಕಸಾಧನಗಳನ್ನು ನಿರ್ವಹಿಸುತ್ತಾನೆ, ಜಾರಿ ವ್ಯವಸ್ಥೆಯನ್ನು ನಡೆಸುತ್ತಾನೆ ಮತ್ತು ವ್ಯಾಪಾರದ ಎಲ್ಲ ಅಂಶಗಳನ್ನು ಒಳಗೊಂಡಿದೆ.

- ಚೀನಾ ಅಲಿಬಾಬಾ ದಾಸ್ತಾನು ಮಾದರಿಯನ್ನು ಅನುಸರಿಸುತ್ತಿದೆ

## 3. ಆರ್ಥಿಕ ಬೆಳವಣಿಗೆ, ಅಂತ್ಯೋದಯದ ಕನಸು

### ಪ್ರಮುಖ ಸುದ್ದಿ

- ಇತ್ತೀಚಿನ ವರ್ಷಗಳಲ್ಲಿ ದೇಶ ಸದ್ದಿಲ್ಲದೆ ಬಡತನ ನಿರ್ಮೂಲನೆಯಲ್ಲಿ ದಾಪುಗಾಲಿಕ್ಕಿದೆ. ಕಡು ಬಡತನದ ದವಡೆಯಿಂದ ಪಾರಾಗುತ್ತಿರುವವರ ಸಂಖ್ಯೆ ಗಣನೀಯವಾಗಿ ಹೆಚ್ಚುತ್ತಿದೆ ಎಂದು ವಿಶ್ವಬ್ಯಾಂಕ್ ವರದಿ ಹೇಳಿದೆ.

### ಮುಖ್ಯ ಅಂಶಗಳು

- ವಿಶ್ವದಲ್ಲೇ ವೇಗದ ಆರ್ಥಿಕ ಬೆಳವಣಿಗೆಯನ್ನು ದಾಖಲಿಸುತ್ತಿರುವ ರಾಷ್ಟ್ರಗಳಲ್ಲೊಂದಾಗಿರುವ ಭಾರತದಲ್ಲಿ ಈಗಲೂ ಕೋಟ್ಯಂತರ ಮಂದಿ ಬಡವರಿದ್ದಾರೆ ಎನ್ನುವುದೂ ವಾಸ್ತವ. ಆದರೆ ನೆಮ್ಮದಿಯ ಸಂಗತಿ ಏನೆಂದರೆ, ಇತ್ತೀಚಿನ ವರ್ಷಗಳಲ್ಲಿ ದೇಶ ಸದ್ದಿಲ್ಲದೆ ಬಡತನ ನಿರ್ಮೂಲನೆಯಲ್ಲಿ ದಾಪುಗಾಲಿಕ್ಕಿದೆ. ಕಡು ಬಡತನದ ದವಡೆಯಿಂದ ಪಾರಾಗುತ್ತಿರುವವರ ಸಂಖ್ಯೆ ಗಣನೀಯವಾಗಿ ಹೆಚ್ಚುತ್ತಿದೆ ಎಂದು ವಿಶ್ವಬ್ಯಾಂಕ್ ವರದಿ ಹೇಳಿದೆ. ಇನ್ನು ಹತ್ತೇ ವರ್ಷದಲ್ಲಿ ಭಾರತ ಬಡತನ ಮುಕ್ತ ರಾಷ್ಟ್ರವಾಗಿ ಹೊರಹೊಮ್ಮಲಿದೆ ಎನ್ನುತ್ತವೆ ಕೆಲ ಅಂತಾರಾಷ್ಟ್ರೀಯ ಸಂಶೋಧನೆಗಳು.
- ಐಎಂಎಫ್, ವಿಶ್ವಬ್ಯಾಂಕ್, ಮೂಡೀಸ್ ಇತ್ಯಾದಿ ಜಾಗತಿಕ ಸಂಸ್ಥೆಗಳೂ ಭಾರತದ ಆರ್ಥಿಕ ಬೆಳವಣಿಗೆ ಬಗ್ಗೆ ಪದೇಪದೆ ಭರವಸೆ ವ್ಯಕ್ತಪಡಿಸಿವೆ.
- ಎಂಟು ವರ್ಷಗಳ ಹಿಂದೆ, 2011ರಲ್ಲಿ 26 ಕೋಟಿ ಮಂದಿ ಭಾರತೀಯರು ಪ್ರತಿ ದಿನ ಸರಾಸರಿ 135 ರೂ.ಗಿಂತ ಕಡಿಮೆ ಆದಾಯದಲ್ಲಿ ದಿನ ದೂಡುತ್ತಿದ್ದರು. ಆದರೆ ಇಂದು ಇಂಥ ಬಡ ಭಾರತೀಯರ ಸಂಖ್ಯೆ 5 ಕೋಟಿಗೆ ಇಳಿಕೆಯಾಗಿರುವ ನಿರೀಕ್ಷೆ ಇದೆ. 2030ರ ವೇಳೆಗೆ ಭಾರತದಲ್ಲಿ ಕಡು ಬಡತನದ ರೇಖೆಗಿಂತ ಕೆಳಗೆ ಯಾರೂ ಇರಲಾರರು. ಭಾರತೀಯರ ಜಿಡಿಪಿ ಏರಿಕೆಯೊಂದಿಗೆ ತಲಾ ಆದಾಯ ಕೂಡ ಹೆಚ್ಚಳವಾಗಿದೆ. ಮಧ್ಯಮ ವರ್ಗದ ಆದಾಯದ ಜನರ ಸಂಖ್ಯೆ ಹೆಚ್ಚಳವಾಗಿದೆ ಎನ್ನುತ್ತದೆ ವಿಯೆನ್ನಾ ಮೂಲದ ವರ್ಲ್ಡ್ ಡೇಟಾ ಲ್ಯಾಬ್‌ನ ವರದಿ.
- ವಿಶ್ವದ ಜನಸಂಖ್ಯೆಯನ್ನು ತೋರಿಸುವ, 'ವರ್ಲ್ಡ್ ಪಾಪ್ಯುಲೇಷನ್ ಕ್ಲಾಕ್' ಪ್ರತಿ ಸೆಕೆಂಡ್‌ಗೂ ಏರುತ್ತಿದೆ. ಇದೇ ರೀತಿ ವಿಶ್ವದ ಕಡುಬಡವರ ಸಂಖ್ಯೆಯನ್ನು ತೋರಿಸುವ 'ವರ್ಲ್ಡ್ ಪವರ್ಟಿ ಕ್ಲಾಕ್' ಅನ್ನು ವಿಯೆನ್ನಾ ಮೂಲದ ವರ್ಲ್ಡ್ ಡೇಟಾ ಲ್ಯಾಬ್ ಎಂಬ ಎನ್‌ಜಿಒ ಪ್ರಕಟಿಸುತ್ತದೆ. ವಿಶ್ವಸಂಸ್ಥೆ, ವಿಶ್ವಬ್ಯಾಂಕ್, ಐಎಂಎಫ್ ಇತ್ಯಾದಿ ಪ್ರತಿಷ್ಠಿತ ಸಂಸ್ಥೆಗಳು ಪ್ರತಿಯೊಂದು ರಾಷ್ಟ್ರಗಳಿಂದ ಪಡೆಯುವ ಅಂಕಿ ಅಂಶಗಳನ್ನು ಆಧರಿಸಿ ಪರಿಷ್ಕೃತ ವಿವರಗಳನ್ನು ಒದಗಿಸುತ್ತದೆ. ಈ ವರ್ಲ್ಡ್ ಡೇಟಾ ಲ್ಯಾಬ್ ಮತ್ತು ಅಮೆರಿಕದ ಸಂಶೋಧನಾ ಗ್ರೂಪ್ ಬ್ರೂಕಿಂಗ್ಸ್ ಮತ್ತು ವಿಶ್ವ ಬ್ಯಾಂಕ್ ಸಮೂಹದ ವರದಿಗಳೂ ಭಾರತದಲ್ಲಿ ಇತ್ತೀಚಿನ ವರ್ಷಗಳಲ್ಲಿ ಕಡು ಬಡತನ ತ್ವರಿತವಾಗಿ ಕಡಿಮೆಯಾಗುತ್ತಿದೆ ಎಂದು ಸಾರಿವೆ.

- ಪಂಡಿತ್ ದೀನದಯಾಳ್ ಉಪಾಧ್ಯಾಯ ಅವರ ಚಿಂತನೆಗಳಲ್ಲಿ 'ಅಂತ್ಯೋದಯ' ಎಂಬ ಆರ್ಥಿಕ ಚಿಂತನೆಯೂ ಪ್ರಮುಖ. ಯಾವುದೇ ಆರ್ಥಿಕ ನೀತಿಯ ಯಶಸ್ಸು ಉಳ್ಳವರ ಪ್ರಗತಿಯನ್ನು ಅವಲಂಬಿಸಿ ಇರಕೂಡದು. ಸಮಾಜದ ಕಟ್ಟಕಡೆಯ ಬಡವರ ಕಲ್ಯಾಣವನ್ನು ಆಧರಿಸಿರಬೇಕು. ಕ್ಯಾಪಿಟಲಿಸ್ಟ್ ಅಥವಾ ಕಮ್ಯುನಿಸ್ಟ್ ಎರಡೂ ಸಿದ್ಧಾಂತಗಳ ವ್ಯವಸ್ಥೆಗಳು ಮನುಷ್ಯನನ್ನು ಸಮಗ್ರ ವ್ಯಕ್ತಿಯಾಗಿ ಪರಿಗಣಿಸುವಲ್ಲಿ ವಿಫಲವಾಗಿವೆ. ಆರ್ಥಿಕ ಬೆಳವಣಿಗೆಯು ದೇಶದ ಪ್ರತಿಯೊಬ್ಬರಿಗೂ ಮೂಲಭೂತ ಅವಶ್ಯಕತೆಗಳನ್ನು ಒದಗಿಸಿಕೊಡಬೇಕು ಎಂದಿದ್ದರು ಅವರು.
- 2014ರಿಂದೀಚೆಗೆ ಕೇಂದ್ರ ಸರಕಾರ ಜಾರಿಗೊಳಿಸಿರುವ ಉಜ್ವಲ (ಬಡವರಿಗೆ ಉಚಿತ ಅಡುಗೆ ಅನಿಲ ಸಂಪರ್ಕ), ಪ್ರಧಾನಮಂತ್ರಿ ಜನ್ ಔಷಧಿ ಯೋಜನೆ, ಮುದ್ರಾ, ಜನ್‌ಧನ್, ದೀನ ದಯಾಳ್ ಗ್ರಾಮಜ್ಯೋತಿ, ಸುಕನ್ಯಾ ಸಮೃದ್ಧಿ, ಪ್ರಧಾನಮಂತ್ರಿ ಆವಾಸ್ ಯೋಜನೆ, ಉಡಾನ್, ನರೇಗಾ ಅನುದಾನ ಗಣನೀಯ ಹೆಚ್ಚಳ, ಆಯುಷ್ಮಾನ್ ಭಾರತ್, ಸ್ವಚ್ಛ ಭಾರತ, ಡಿಜಿಟಲ್ ಇಂಡಿಯಾ, ಅಟಲ್ ಪಿಂಚಣಿ, ಆರ್ಥಿಕವಾಗಿ ದುರ್ಬಲರಿಗೆ ಸರಕಾರಿ ಉದ್ಯೋಗದಲ್ಲಿ ಶೇ.10 ಮೀಸಲು ಇತ್ಯಾದಿ ಯೋಜನೆಗಳೆಲ್ಲವೂ ಬಡವರಿಗೆ ನೆರವೀಯುವ ಅಂತ್ಯೋದಯದ ಆಶಯವನ್ನು ಒಳಗೊಂಡಿವೆ.

## ಭಾರತದ ಆರ್ಥಿಕ ಬೆಳವಣಿಗೆಗೆ ಮತ್ತು ಬಡತನ ನಿರ್ಮೂಲನೆಕ್ಕೆ ಸಹಕಾರಿಯಾಗುತ್ತಿರುವ ಪ್ರಮುಖ ಯೋಜನೆಗಳು

- **ಉಜ್ವಲ ಯೋಜನೆ:** ಉಜ್ವಲ ಯೋಜನೆಯಡಿ ಉಚಿತ ಅಡುಗೆ ಅನಿಲ (ಎಲ್ಪಿಜಿ ) ಸಂಪರ್ಕ
- **ಪ್ರಧಾನಮಂತ್ರಿ ಜನ್ ಔಷಧಿ ಯೋಜನೆ** -ಜನತೆಗೆ ಅಗ್ಗದ ಬೆಲೆಗೆ ಔಷಧಗಳನ್ನು ಒದಗಿಸುವ ಈ ಯೋಜನೆಯಡಿಯಲ್ಲಿ ತೆರೆದಿರುವ ಪಿಎಂಬಿಜೆಪಿ ಕೇಂದ್ರಗಳು: 4,844
- **ಮುದ್ರಾ** -ಮುದ್ರಾ ಯೋಜನೆಯಡಿಯಲ್ಲಿ ಸ್ವ ಉದ್ಯೋಗಿಗಳು, ವರ್ತಕರು ಹಾಗೂ ಸಣ್ಣ ಉದ್ದಿಮೆದಾರರಿಗೆ 10 ಲಕ್ಷ ರೂ. ತನಕ ಜಾಮೀನು ಭದ್ರತೆಯ ಅಗತ್ಯ ಇಲ್ಲದೆ ಸಾಲ ಸೌಲಭ್ಯ. 2015ರಲ್ಲಿ ಆರಂಭವಾದ ಯೋಜನೆ
- **ಜನ್ ಧನ್** -2014ರಲ್ಲಿ ಜಾರಿಯಾದ ಜನ್ ಧನ್ ಅಡಿಯಲ್ಲಿ 18ರಿಂದ 65 ವರ್ಷ ವಯಸ್ಸಿನ ಜನ ಬ್ಯಾಂಕ್ ಖಾತೆ ತೆರೆಯಬಹುದು. ಉದ್ಘಾಟನೆಯ ದಿನವೇ 1.5 ಕೋಟಿ ಮಂದಿ ಖಾತೆ ತೆರೆದಿದ್ದರು. ಎಲ್ಲರಿಗೂ ಬ್ಯಾಂಕಿಂಗ್ ಸೇವೆ ಒದಗಿಸುವುದು ಇದರ ಮುಖ್ಯ ಉದ್ದೇಶ.
- **ದೀನ್ ದಯಾಳ್ ಗ್ರಾಮಜ್ಯೋತಿ** -ಭಾರತದ ಪ್ರತಿಯೊಂದು ಗ್ರಾಮಕ್ಕೂ ವಿದ್ಯುತ್ ಸಂಪರ್ಕ ಕಲ್ಪಿಸುವ ದೀನ್ ದಯಾಳ್ ಗ್ರಾಮಜ್ಯೋತಿ ಯಶಸ್ವಿಯಾಗಿದ್ದು, ಈ ವರ್ಷ ಭಾರತದ ಎಲ್ಲ ಗ್ರಾಮಗಳೂ ವಿದ್ಯುತ್ ಸಂಪರ್ಕ ಪಡೆದಂತಾಗಿದೆ. ಮೋದಿಯವರು ಅಧಿಕಾರಕ್ಕೆ ಬಂದಾಗ 30 ಕೋಟಿ ಮಂದಿಯ ಮನೆಗೆ ವಿದ್ಯುತ್ ಸೌಲಭ್ಯ ಇರಲಿಲ್ಲ ಎನ್ನುವುದನ್ನು ಗಮನಿಸಬಹುದು.
- **ಸುಕನ್ಯಾ ಸಮೃದ್ಧಿ ಯೋಜನೆ** -ಹೆಣ್ಣು ಮಕ್ಕಳ ಭವಿಷ್ಯಕ್ಕಾಗಿ ವಿಶೇಷವಾಗಿ ರೂಪಿಸಿರುವ ಸುಕನ್ಯಾ ಸಮೃದ್ಧಿ ಸಣ್ಣ ಉಳಿತಾಯ ಯೋಜನೆ

- **ಪ್ರಧಾನಮಂತ್ರಿ ಆವಾಸ್ ಯೋಜನೆ** -ದೇಶದಲ್ಲಿ 2022ರೊಳಗೆ 1 ಕೋಟಿ ಮನೆಗಳ ನಿರ್ಮಾಣಕ್ಕೆ ಸಹಕರಿಸುವ ಉದ್ದೇಶ ಹೊಂದಿರುವ ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿಯಲ್ಲಿ ವಾರ್ಷಿಕ 18 ಲಕ್ಷ ರೂ. ತನಕ ಆದಾಯ ಇರುವವರೂ ಗೃಹ ಸಾಲಕ್ಕೆ ಬಡ್ಡಿ ಸಬ್ಸಿಡಿ ಪಡೆಯಬಹುದು.
- **ಉಡಾನ್** -ದೇಶದ ಸಾಮಾನ್ಯ ಪ್ರಜೆಗೂ ವಿಮಾನ ಯಾನ ಸೇವೆ ಕೈಗೆಟುಕಬೇಕೆಂಬ ಗುರಿಯೊಂದಿಗೆ 2017ರಲ್ಲಿ ಜಾರಿಯಾದ ಯೋಜನೆ ಉಡಾನ್. 425ಕ್ಕೂ ಹೆಚ್ಚು ವಿಮಾನ ನಿಲ್ದಾಣಗಳು ಇದರ ವ್ಯಾಪ್ತಿಯಲ್ಲಿದ್ದು, ಅಗ್ಗದ ದರದಲ್ಲಿ ಜನತೆ ವಿಮಾನ ಪ್ರಯಾಣ ಮಾಡಬಹುದು. ಉಡಾನ್ ಮಾರ್ಗದಲ್ಲಿ ಪ್ರತಿ ಗಂಟೆಗೆ 2,500 ರೂ. ಏರ್ ಟಿಕೆಟ್ ದರದ ಮಿತಿಯನ್ನು ನಿಗದಿಪಡಿಸಲಾಗಿದೆ. ಹೀಗಾಗಿ ಜನತೆಗೆ ಅನುಕೂಲಕರವಾಗಿದೆ. ಪ್ರಾದೇಶಿಕ ವಿಮಾನಯಾನ ಅಭಿವೃದ್ಧಿಗೆ ಇದು ಸಹಕಾರಿ.
- **ನರೇಗಾ** -ಗ್ರಾಮಾಂತರ ಪ್ರದೇಶಗಳಲ್ಲಿ ಉದ್ಯೋಗ ಖಾತರಿಯನ್ನು ಕಲ್ಪಿಸುವ ನರೇಗಾ ಯೋಜನೆಗೆ ಕೇಂದ್ರ ಸರಕಾರ 2018-19ರ ಸಾಲಿನಲ್ಲಿ ದಾಖಲೆಯ 61,084 ಕೋಟಿ ರೂ.ಗಳನ್ನು ಮಂಜೂರು ಮಾಡಿದೆ. ನರೇಗಾಗೆ ವರ್ಷವೊಂದರಲ್ಲಿ ಲಭಿಸಿದ ಗರಿಷ್ಠ ಹಣ ಇದಾಗಿದೆ. ಭಾರತದ ಗ್ರಾಮೀಣ ಪ್ರದೇಶದಲ್ಲಿ ನಿರುದ್ಯೋಗ ಸಮಸ್ಯೆ ನಿವಾರಣೆ ನಿಟ್ಟಿನಲ್ಲಿ ಇದು ಗಮನಾರ್ಹ.
- **ಆಯುಷ್ಮಾನ್ ಭಾರತ್** -ದೇಶದ 10 ಕೋಟಿ ಕುಟುಂಬಗಳಿಗೆ ವಾರ್ಷಿಕ 5 ಲಕ್ಷ ರೂ. ತನಕ ವೈದ್ಯಕೀಯ ವೆಚ್ಚವನ್ನು ಉಚಿತವಾಗಿ ಭರಿಸುವ ಆರೋಗ್ಯ ಯೋಜನೆ ಇದು.

### ಐತಿಹಾಸಿಕ ಸುಧಾರಣಾ ನೀತಿಗಳು

- **ಜಿಎಸ್‌ಟಿ:** ಸ್ವತಂತ್ರ ಭಾರತದ ಅತಿ ದೊಡ್ಡ ಪರೋಕ್ಷ ತೆರಿಗೆ ನೀತಿ ಸುಧಾರಣೆ ಎಂದು ಪರಿಗಣನೆಯಾಗಿರುವ ಸರಕು ಮತ್ತು ಸೇವೆ ತೆರಿಗೆಯಿಂದ ದೇಶ ವ್ಯಾಪಿ ಏಕರೂಪದ ತೆರಿಗೆ ಹಾಗೂ ಮಾರುಕಟ್ಟೆ ನಿರ್ಮಾಣವಾಗಿದೆ. ತೆರಿಗೆ ಸಂಗ್ರಹದಲ್ಲಿ ಗಣನೀಯ ಏರಿಕೆ, ಹೊಸ ತೆರಿಗೆದಾರರ ಹೆಚ್ಚಳದ ಸಕಾರಾತ್ಮಕ ಪರಿಣಾಮ ಈಗಾಗಲೇ ಕಾಣಿಸಿದೆ. ಇದರ ಪರಿಣಾಮ ನೂರಾರು ವಸ್ತುಗಳ ತೆರಿಗೆ ದರವೂ ಇಳಿಕೆಯಾಗಿದ್ದು, ಬೆಲೆ ಏರಿಕೆಯನ್ನು ನಿಯಂತ್ರಿಸಲು ಸಹಕಾರಿಯಾಗಿದೆ.
- **ನೋಟು ಅಮಾನ್ಯತೆ:** ನೋಟು ಅಮಾನ್ಯತೆಯಿಂದ ಕಪ್ಪುಹಣದ ಮೇಲೆ ಪ್ರಹಾರ ಆಗಿರುವುದು ನಿಜ. 10,000ಕ್ಕೂ ಅಧಿಕ ಮಂದಿಯ ಆದಾಯ ಮೂಲ ವಿವರವನ್ನು ಕೋರಿ ಐಟಿ ಇಲಾಖೆ ನೋಟಿಸ್ ಕಳುಹಿಸಿತ್ತು. ಇದರ ತನಿಖೆ ಮುಂದುವರಿದಿದೆ. ಡಿಜಿಟಲ್ ವರ್ಗಾವಣೆಯೂ ಏರಿಕೆಯಾಗಿದೆ.
- **ದಿವಾಳಿ ಪ್ರಕ್ರಿಯೆಯ ನೀತಿ (ಐಬಿಸಿ):** ಕಾರ್ಪೊರೇಟ್ ವಲಯದ ದಿಗ್ಗಜ ಕಂಪನಿಗಳು ಪಡೆದ ಸಾಲ ಹಿಂತಿರುಗಿಸಲು ವಿಫಲವಾದಾಗ ನಿರ್ದಿಷ್ಟ ಕಾನೂನಿನ ಕೊರತೆಯಿಂದ ಸಾಲ ಮರು ವಸೂಲು, ಆಸ್ತಿ ಜಪ್ತಿ ಹಾಗೂ ದಿವಾಳಿ ಪ್ರಕ್ರಿಯೆ ವಿಳಂಬವಾಗಿ ಬ್ಯಾಂಕ್‌ಗಳ ಎನ್‌ಪಿಎ ಭಾರಿ ಏರುತ್ತಿತ್ತು. ಆದರೆ ನೂತನ ದಿವಾಳಿ ಕಾಯಿದೆ (ಐಬಿಸಿ) ಜಾರಿಯಾದ ನಂತರ ಈಗ ಕಾರ್ಪೊರೇಟ್ ಕಂಪನಿಗಳ ದಿವಾಳಿ ಪ್ರಕ್ರಿಯೆ ಚುರುಕಾಗಿದೆ.
- **ವಿತ್ತಾಪರಾಧಿಗಳ ವಿರುದ್ಧ ಕಠಿಣ ಕಾನೂನು:** ವಿದೇಶಗಳಲ್ಲಿ ತಲೆಮರೆಸಿಕೊಂಡಿರುವ ವಿಜಯ್ ಮಲ್ಯ, ನೀರವ್ ಮೋದಿ, ಮೆಹುಲ್ ಚೋಕ್ಸಿ ಮುಂತಾದ ವಿತ್ತಾಪರಾಧಿಗಳ ವಿರುದ್ಧ ಕಾನೂನು

ಕ್ರಮ ಜರುಗಿಸಲು, ಕಳೆದ ವರ್ಷ ಅಂಗೀಕಾರವಾದ ವಿತ್ತಾಪರಾಧಿಗಳ ಕಾಯಿದೆ 2018 ನೆರವಾಗುತ್ತಿದೆ.

### ಭಾರತ ಸೂಪರ್ ಪವರ್ ಆಗಲು ಏನು ಮಾಡಬೇಕು?

- ಭಾರತ ತನ್ನ ಉತ್ಪಾದನೆಯನ್ನು ಗಣನೀಯವಾಗಿ ಹೆಚ್ಚಿಸಲು ಮುಂದಾಗಬೇಕು.
- ಮೂಲ ಸೌಕರ್ಯ ವಲಯದಲ್ಲಿ ಹೂಡಿಕೆ ಹೆಚ್ಚಳಕ್ಕೆ ಸಾರ್ವಜನಿಕ-ಖಾಸಗಿ ಸಹಭಾಗಿತ್ವ (ಪಿಪಿಪಿ) ಏರಿಕೆ ಅನಿವಾರ್ಯ.
- ಸಾಲ ವಿತರಣೆಯ ಹರಿವು ಹೆಚ್ಚಿಸಲು ಸಾರ್ವಜನಿಕ ಬ್ಯಾಂಕ್‌ಗಳ ಆರ್ಥಿಕತೆಯನ್ನು ಬಲಪಡಿಸಬೇಕು. ವಸೂಲಾಗದ ಸಾಲದ ಬಿಕ್ಕಟ್ಟು ಗರಿಷ್ಠ ನಿವಾರಿಸಬೇಕು.
- ಒಟ್ಟು ವಸೂಲಾಗದ ಸಾಲ ಅಥವಾ ಎನ್‌ಪಿಎ (ಲಕ್ಷ ಕೋಟಿ ರೂ.ಗಳಲ್ಲಿ)
- ದೇಶದ ಜನತೆಯ ಉಳಿತಾಯ ಹೆಚ್ಚಿಸಲು ಬ್ಯಾಂಕ್ ಖಾತೆದಾರರ ಸಂಖ್ಯೆ ವೃದ್ಧಿಸುವುದು ಮುಖ್ಯ.
- ಜಿಡಿಪಿಗೆ ತೆರಿಗೆಯ ಅನುಪಾತ ಹೆಚ್ಚಳ ಅಗತ್ಯ. ಇದರಿಂದ ಬೆಳವಣಿಗೆಗೆ ಸಹಾಯಕ.
- ತೆರಿಗೆ-ಜಿಡಿಪಿಯ ಅನುಪಾತ (%)
- ಕೃಷಿ ಕ್ಷೇತ್ರವನ್ನು ಹೆಚ್ಚು ಮಾರುಕಟ್ಟೆ ಆಧಾರಿತವಾಗಿಸಬೇಕು.
- ಆರೋಗ್ಯ, ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿಗೆ ಒತ್ತು.
- ರಫ್ತು ವಲಯವನ್ನು ಸ್ಪರ್ಧಾತ್ಮಕವಾಗಿಸಬೇಕು.
- ಸ್ಟಾರ್ಟಪ್ ವಲಯದ ಪ್ರಗತಿಗೆ ಉತ್ತೇಜನ
- ಕಚ್ಚಾ ತೈಲದ ಏರುಪೇರುಗಳಿಂದ ಆರ್ಥಿಕತೆಯ ರಕ್ಷಣೆಗೆ ಸಮಗ್ರ ಇಂಧನ ನೀತಿ.

### ಬಗೆಹರಿಸಬೇಕಾದ ಸಾಮಾಜಿಕ ಸವಾಲುಗಳು:

- ಕೃಷಿ ಬಿಕ್ಕಟ್ಟು: ಕೃಷಿಯ ಮೇಲಿನ ಅವಲಂಬನೆ ಇಳಿಸಲು ಉದ್ಯೋಗ ಸೃಷ್ಟಿ ಅಗತ್ಯ
- ಆದಾಯ ಅಸಮಾನತೆ: ಕಡು ಬಡತನ ನಿರ್ಮೂಲನೆಗೆ ಆದಾಯ ನೆರವು ಬೇಕು.
- ಉದ್ಯೋಗದಲ್ಲಿ ಮಹಿಳೆ: ಔದ್ಯೋಗಿಕ ವಲಯದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಗೆ ಪೂರಕ ವಾತಾವರಣ ನಿರ್ಮಿಸಬೇಕು.
- ಉದ್ಯೋಗ: ಆಟೊಮೇಶನ್ ಸವಾಲಿನೆದುರು ಉದ್ಯೋಗ ನಷ್ಟವಾಗದಂತೆ ನೋಡಿಕೊಳ್ಳಬೇಕು. ಕಾರ್ಮಿಕ ಕಾನೂನು ಸುಧಾರಣೆ ಅಗತ್ಯ

## 4. ಉಕ್ಕಿನ ಉತ್ಪಾದನೆ: ವಿಶ್ವದ ಟಾಪ್ 2 ಸ್ಥಾನಕ್ಕೆ ಭಾರತ

### ಪ್ರಮುಖ ಸುದ್ದಿ

- ಉಕ್ಕಿನ ಉತ್ಪಾದನೆಗೆ ಸಂಬಂಧಿಸಿದಂತೆ ಜಾಗತಿಕ ಮಟ್ಟದಲ್ಲಿ ಭಾರತವು ಜಪಾನ್ ದೇಶವನ್ನು ಹಿಂದಿಕ್ಕಿ ಎರಡನೇ ಸ್ಥಾನವನ್ನು ತಲುಪಿದೆ.

### ಮುಖ್ಯ ಅಂಶಗಳು

- ಚೀನಾ ಮೊದಲ ಸ್ಥಾನದಲ್ಲಿದ್ದು ಜಗತ್ತಿನ ಉಕ್ಕಿನಲ್ಲಿ ಶೇ.51ರಷ್ಟು ಉತ್ಪಾದನೆಯನ್ನು ಈ ದೇಶವೇ ಮಾಡುತ್ತಿದೆ ಎಂದು ವರ್ಲ್ಡ್ ಸ್ಟೀಲ್ ಅಸೋಷಿಯೇಷನ್‌ನ ವಾರ್ಷಿಕ ವರದಿಯಲ್ಲಿ ಹೇಳಲಾಗಿದೆ.
- ಚೀನಾದ ಉಕ್ಕಿನ ಉತ್ಪಾದನೆಯು 2018ರಲ್ಲಿ ಶೇ.6ರಷ್ಟು ಏರಿಕೆಯಾಗಿದ್ದು 92.8 ಕೋಟಿ ಟನ್‌ಗಳಿಗೆ ಏರಿಕೆಯಾಗಿದೆ.
- ಭಾರತವು 2018ರಲ್ಲಿ 65 ಕೋಟಿ ಟನ್ ಹಾಗೂ 2017ರಲ್ಲಿ 10.15 ಕೋಟಿ ಟನ್ ಉತ್ಪಾದಿಸಿತ್ತು. ಇದರೊಂದಿಗೆ ಶೇ.4.9ರಷ್ಟು ಏರಿಕೆ ದಾಖಲಿಸಿತ್ತು.
- ಜಪಾನ್ 2018ರಲ್ಲಿ 43 ಕೋಟಿ ಟನ್ ಉತ್ಪಾದಿಸಿದ್ದು, 2017ಕ್ಕೆ ಹೋಲಿಸಿದರೆ ಶೇ.0.3ರಷ್ಟು ಇಳಿಕೆಯಾಗಿದೆ. 2018ರಲ್ಲಿ ಜಾಗತಿಕ ಕಚ್ಚಾ ಉಕ್ಕು ಉತ್ಪಾದನೆ 180 ಕೋಟಿ ಟನ್ ಆಗಿತ್ತು.
- ಉಕ್ಕು ಉತ್ಪಾದನೆಯಲ್ಲಿ ಅಮೆರಿಕ 4ನೇ ಸ್ಥಾನದಲ್ಲಿದೆ. (6 ಕೋಟಿ ಟನ್) ದಕ್ಷಿಣ ಕೊರಿಯಾ, ರಷ್ಯಾ, ಜರ್ಮನಿ, ಟರ್ಕಿ, ಬ್ರೆಜಿಲ್, ಇರಾನ್ ನಂತರದ ಸ್ಥಾನದಲ್ಲಿವೆ.

### ವರ್ಲ್ಡ್ ಸ್ಟೀಲ್ ಅಸೋಸಿಯೇಷನ್ (WSA) ಬಗ್ಗೆ

- WSA ಒಂದು ಲಾಭೋದ್ದೇಶವಿಲ್ಲದ ಸಂಸ್ಥೆಯಾಗಿದೆ ಮತ್ತು ಇದು ವಿಶ್ವದಲ್ಲೇ ಅತಿ ದೊಡ್ಡ ಉದ್ಯಮ ಸಂಘಟನೆಯಾಗಿದೆ.
- ಇದು ಜುಲೈ 1967 ರಲ್ಲಿ ಸ್ಥಾಪಿಸಲ್ಪಟ್ಟಿತು ಮತ್ತು ಬ್ರುಸೆಲ್ಸ್, ಬೆಲ್ಜಿಯಂನ ಪ್ರಧಾನ ಕಚೇರಿಯಾಗಿದೆ.
- ಇದರ ಸದಸ್ಯರು ವಿಶ್ವದ ಉಕ್ಕಿನ ಉತ್ಪಾದನೆಯ ಸುಮಾರು 85% ರಷ್ಟು ಪ್ರತಿನಿಧಿಸುತ್ತಾರೆ.
- ಇದರಲ್ಲಿ 10 ದೊಡ್ಡ ಉಕ್ಕು ಕಂಪನಿಗಳು, ರಾಷ್ಟ್ರೀಯ ಮತ್ತು ಪ್ರಾದೇಶಿಕ ಉಕ್ಕಿನ ಉದ್ಯಮ ಸಂಘಗಳು ಮತ್ತು ಉಕ್ಕು ಸಂಶೋಧನಾ ಸಂಸ್ಥೆಗಳ ಪೈಕಿ 9 ಕ್ಕಿಂತಲೂ ಹೆಚ್ಚು ಉಕ್ಕಿನ ಉತ್ಪಾದಕರು ಸೇರಿದ್ದಾರೆ.

## 5. ಕಿಸಾನ್ ಕ್ರೆಡಿಟ್ ಕಾರ್ಡ್ ಯೋಜನೆ

### ಪ್ರಮುಖ ಸುದ್ದಿ

- ಭಾರತೀಯ ಬ್ಯಾಂಕಿಂಗ್ ಅಸೋಸಿಯೇಷನ್ (ಐಬಿಎ) ದಾಖಲಾತಿ, ತಪಾಸಣೆ, ಲೆಡ್ಜರ್ ಶುಲ್ಕಗಳು ಮತ್ತು 3 ಲಕ್ಷ ರೂ ವರೆಗೆ ಬೆಳೆ ಸಾಲಗಳ ಎಲ್ಲಾ ಇತರ ಸೇವಾ ಶುಲ್ಕಗಳನ್ನು ಅಥವಾ ಕಿಸಾನ್ ಕ್ರೆಡಿಟ್ ಕಾರ್ಡ್ ಯೋಜನೆಗಾಗಿ ಬ್ಯಾಂಕ್ ಗಳನ್ನು ವಿನಂತಿಸಲು ಸಲಹಾ ಮಾರ್ಗಸೂಚಿಗಳನ್ನು ಜಾರಿಗೊಳಿಸಿದೆ.

### ಮುಖ್ಯ ಅಂಶಗಳು

- ಈ ಕ್ರಮವು ರೈತರಿಗೆ ನೇರ ಪ್ರಯೋಜನವನ್ನು ಒದಗಿಸಲು ಮತ್ತು ಅವುಗಳ ಮೇಲೆ ಒತ್ತಡವನ್ನು ತಗ್ಗಿಸಲು ಉದ್ದೇಶಿಸುತ್ತದೆ.

## ಏನಿದು ಕಿಸಾನ್ ಕ್ರೆಡಿಟ್ ಕಾರ್ಡ್ ಯೋಜನೆ ?

- ಕಿಸಾನ್ ಕ್ರೆಡಿಟ್ ಕಾರ್ಡ್ ಎಂಬ ಯೋಜನೆಯನ್ನು 1998ರಲ್ಲಿ ರಿಸರ್ವ್ ಬ್ಯಾಂಕ್ ಮತ್ತು ನಬಾರ್ಡ್ ಜಾರಿಗೆ ತಂದಿತು . ದೇಶದ ಸಹಕಾರಿ ಬ್ಯಾಂಕುಗಳಲ್ಲಿ , ಸಾರ್ವಜನಿಕ ವಲಯದ ಬ್ಯಾಂಕುಗಳಲ್ಲಿ ಮತ್ತು ಪ್ರಾದೇಶಿಕ ಬ್ಯಾಂಕುಗಳಲ್ಲೂ ಭಾರತದ ಯಾವುದೇ ರೈತನಿಗೂ ಕೆಲವು ನಿಯಮಗಳಿಗನುಸಾರವಾಗಿ ನೀಡಲಾಗುತ್ತಿದೆ .
- ರೈತರ ಬೆಳೆಗೆ ಬೆಂಬಲವಾಗಿ ಕಡಿಮೆ ಬಡ್ಡಿಯೊಂದಿಗೆ ಈ ವ್ಯವಸ್ಥೆ ಆರ್ಥಿಕವಾಗಿ ನೆರವಾಗಬಲ್ಲದು ಕೊಯ್ಲಾದ ನಂತರ ರೈತ ಹಣ ಪಾವತಿಸಬೇಕಾಗುತ್ತದೆ . ಒಂದು ವೇಳೆ ಈ ವರ್ಷ ಒಳ್ಳೆಯ ಫಸಲು ಬರದಿದ್ದರೆ ಬಡ್ಡಿ ಕಟ್ಟಿ ನಂತರವೂ ಪಾವತಿಸಬಹುದು .

ಉಳಿದ ಎ.ಟಿ.ಎಂ ಕಾರ್ಡ್'ಗಳಂತೆಯೇ ಇರುವ ಇವುಗಳಲ್ಲಿ ಎರಡು ವಿಧ :

- **1.ಕ್ಯಾಶ್ ಕ್ರೆಡಿಟ್ :** ಬೀಜಗಳ ಖರೀದಿಗೆ , ಗೊಬ್ಬರ , ಕೀಟನಾಶಕಗಳ ಖರೀದಿಗೆ , ನೀರಾವರಿ ವ್ಯವಸ್ಥೆಗೆ , ಕೊಯ್ಲಿನ ಮುಂಚೆಯೂ , ನಂತರವೂ ನೆರವಾಗುವಂತದ್ದು
- **2.ಟರ್ಮ್ ಕ್ರೆಡಿಟ್ :** ಪಂಪ್ ಸೆಟ್ , ಜಮೀನು ಅಭಿವೃದ್ಧಿಗೆ , ಸಮ್ಮಿಶ್ರ ಚಟುವಟಿಕೆಗಳಿಗೆ ನೆರವಾಗುವಂತವು.

## ಕಿಸಾನ್ ಕ್ರೆಡಿಟ್ ಕಾರ್ಡ್ ಲಾಭಾಂಶ

- ಸಣ್ಣ , ಕನಿಷ್ಠ ,ಪಾಲು ಬೆಳೆಗಾರರಿಗೂ ಲಭ್ಯ
- ಸರಳ ಹಾಗೂ ತ್ವರಿತ ವಿಧಾನಗಳು
- ಒಂದೇ ದಾಖಲೆ ಪತ್ರ ಪರಿಶೀಲನೆಯೊಂದಿಗೆ ಕಾರ್ಡ್ ಒದಗುತ್ತದೆ
- ಕಾರ್ಡ್ ಮೂಲಕ ಹಣ ಪಡೆದುಕೊಳ್ಳಬಹುದು
- ಬೆಳೆಗಾರನ ಜಮೀನು , ಆದಾಯ ಹಾಗು ಸಾಲಗಳ ಇತಿಹಾಸ ಪರಿಶೀಲಿಸಿ ಕಾರ್ಡ್ ವಿತರಿಸುವುದು
- ಕೊಯ್ಲೋತ್ತರದ ನಂತರ ಮರುಪಾವತಿಸಬಹುದು , ಒಂದು ವೇಳೆ ಇಳುವರಿ ಕಡಿಮೆ ಇದ್ದರೆ ಬಡ್ಡಿ ಕಟ್ಟಿ ನಂತರವೂ ಪಾವತಿಸಬಹುದು
- ಬ್ಯಾಂಕ್ ಕಾರ್ಯವಿಧಾನಗಳ ಪರಿಚಯವಿಲ್ಲದವರಿಗೆ ಸಾಲ ತೆಗೆದುಕೊಳ್ಳಲು ಸರಳ ವಿಧಾನ ಕಿಸಾನ್ ಕ್ರೆಡಿಟ್ ಕಾರ್ಡ್
- ಈಗ ಕಾರ್ಡುಗಳನ್ನು ರೈತರ ಬ್ಯಾಂಕ್ ಖಾತೆಯೊಂದಿಗೆ ಲಿಂಕ್ ಮಾಡಲಾಗಿದ್ದು ಖಾತೆಯ ಮೊತ್ತದೊಂದಿಗೆ ರೈತನಿಗೆ ಬಡ್ಡಿಯ ಮೊತ್ತವೂ ದೊರಕುತ್ತದೆ
- ಅತೀ ಕಡಿಮೆ ಬಡ್ಡಿಯೊಂದಿಗೆ ಸಾಲ ದೊರಕುತ್ತದೆ
- ಆಕಸ್ಮಿಕ ಅಪಘಾತದ ಸಮಯದಲ್ಲಿ ೫೦೦೦೦ ಹಾಗೂ ಮರಣೋತ್ತರವಾಗಿ ೨೫೦೦೦ವರೆಗೂ ನೆರವಾಗುತ್ತದೆ .

## ಕಾರ್ಯವೈಖರಿ

- ಬೆಳೆಗಾರರಿಗೆ ಸಾಲವನ್ನು ಕಾರ್ಡ್ ಮೂಲಕ ಅಥವಾ ಪಾಸ್ಬುಕ್ ಮೂಲಕ ಪಡೆದುಕೊಳ್ಳಬಹುದು . ೨೫೦೦೦ ಮಿತಿಯಿರುವ ಕಾರ್ಡ್ ಹೋಲ್ಡರ್ಗಳಿಗೆ ಚೆಕ್ ಪುಸ್ತಕ ಸೌಲಭ್ಯವೂ ಇದೆ . ಬೇರೆ ಎ.ಟಿ.ಎಂ , ಅಥವಾ ವಿಮೆಯ ಕಾರ್ಡ್ಗಳು ಹೇಗೆ ಕೆಲಸ ಮಾಡುತ್ತವೋ ಅದೇ ಕಾರ್ಯವೈಖರಿ ಕಿಸಾನ್ ಕಾರ್ಡಿನದ್ದೂ ಕೂಡ
- ಸಾಲಗಳ ಮೇಲಿನ ಬಡ್ಡಿ ಬ್ಯಾಂಕಿನಿಂದ ಬ್ಯಾಂಕಿಗೆ ಬದಲಾಗುತ್ತದೆ . ಕಿಸಾನ್ ಕ್ರೆಡಿಟ್ ಕಾರ್ಡ್ ಸರಾಸರಿ ವಾರ್ಷಿಕ ಬಡ್ಡಿ 7-9 % , ಕ್ರೆಡಿಟ್ ಮಿತಿ 3 ಲಕ್ಷ . ಸಾಲ ಮರುಪಾವತಿಸಬಲ್ಲ ಎಂಬ ದೃಢತೆ ಇದ್ದಾರೆ ಆತನಿಗೆ ಸಬ್ಸಿಡಿ ವ್ಯವಸ್ಥೆಗಳೂ ಇದೆ
- ವಿಮೆ ಬೇಕಾದ್ದಲ್ಲಿ ಬೆಳೆಗಾರನ ವಯಸ್ಸು 70ಕ್ಕಿಂತ ಕಡಿಮೆಯಾಗಿರಬೇಕು. ಆಕಸ್ಮಿಕ ಅಪಘಾತದ ಸಮಯದಲ್ಲಿ ಆರ್ಥಿಕವಾಗಿ ನೆರವಾಗಬಲ್ಲದು

## 6. ರೆಪೋದರ ಕಡಿತಗೊಳಿಸಿದ ಆರ್‌ಬಿಐ

### ಪ್ರಮುಖ ಸುದ್ದಿ

- ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ರೆಪೋದರದಲ್ಲಿ .25 ಮೂಲಾಂಕದಷ್ಟು ಕಡಿತ ಮಾಡಿದೆ. ಇದರಿಂದ ರೆಪೋ ದರ ಈ ಮೊದಲಿದ್ದ ಶೇ. 6.50 ರಿಂದ ಶೇ. 6.25ಕ್ಕೆ ಇಳಿಕೆಯಾಗಿದ್ದು, ಗೃಹ ಸಾಲದ ಇಎಮ್‌ಐ ಮತ್ತು ಇತರ ಸಾಲಗಳ ಮೇಲಿನ ಬಡ್ಡಿದರ ಇಳಿಕೆಯಾಗುವ ಸಾಧ್ಯತೆಯಿದೆ.

### ಮುಖ್ಯ ಅಂಶಗಳು

- ಇತ್ತೀಚೆಗೆ ಆರ್‌ಬಿಐನ ಆರು ಸದಸ್ಯರ ಪಾಲಿಸಿ ಸಮಿತಿ ಸಭೆಯಲ್ಲಿ ಈ ಕ್ರಮದ ನಿರ್ಧಾರಕ್ಕೆ ಬರಲಾಗಿದ್ದು, ಶಕ್ತಿಕಾಂತ ದಾಸ್ ಅವರು ಆರ್‌ಬಿಐನ ಗವರ್ನರ್ ಆಗಿ ಅಧಿಕಾರ ಸ್ವೀಕರಿಸಿದ ಬಳಿಕ ಕೈಗೊಂಡ ಮೊದಲ ನಿರ್ಧಾರ ಇದಾಗಿದ್ದು, ಈ ಮೊದಲು ಆರ್‌ಬಿಐ ರೆಪೋದರ ಬದಲಾವಣೆಗೆ ಸಮ್ಮತಿಸಿರಲಿಲ್ಲ.
- ಆರ್‌ಬಿಐನ ನಿಯಮಗಳ ಸಡಿಲತೆಯಿಂದ ಬ್ಯಾಂಕಿಂಗ್ ಮತ್ತು ಗೃಹ ಸಾಲ, ಇತರ ಸಾಲಗಳಲ್ಲಿನ ಬಡ್ಡಿದರ ಇಳಿಕೆಯಾಗುವ ಸಾಧ್ಯತೆಯಿದ್ದು, ಮಧ್ಯಮವರ್ಗಕ್ಕೆ ಅನುಕೂಲವಾಗಲಿದೆ.
- ರೆಪೋದರ ಇಳಿಕೆಗೆ ಸಮಿತಿ ಎದುರು ಮಂಡಿಸಿದ ಮಂಡಿಸಿದ ಪ್ರಸ್ತಾವಕ್ಕೆ 4:2ರ ಮತ ಪಡೆದು, ರೆಪೋದರ 25 ಅಂಕ ಕಡಿಮೆ ಮಾಡುವ ನಿರ್ಧಾರ ಪ್ರಕಟಿಸಲಾಯಿತು. ಈ ಮೊದಲು 2017ರ ಆಗಸ್ಟ್‌ನಲ್ಲಿ ಆರ್‌ಬಿಐ ರೆಪೋ ದರ ಇಳಿಕೆ ಮಾಡಿತ್ತು. ಅದಾದ ಬಳಿಕ ಇದೇ ಮೊದಲ ಬಾರಿ ಮತ್ತೆ ರೆಪೋದರ ಬದಲಾಗಿದೆ.

### ಏನಿದು ರೆಪೋ ದರ..?

- ರೆಪೋ ಎಂದರೆ (ಮರುಕೊಳ್ಳುವ ದರ). ಆರ್‌ಬಿಐ ಬ್ಯಾಂಕುಗಳಿಗೆ ನೀಡುವ ಸಾಲದ ಬಡ್ಡಿ ದರಕ್ಕೆ ರೆಪೋ ಎಂದು ಕರೆಯುತ್ತಾರೆ. ಇದು ಹಣಕಾಸಿನ ವಹಿವಾಟಿನಲ್ಲಿ ಒಂದು ಮುಖ್ಯವಾದ ಅಂಶ. ಬ್ಯಾಂಕ್ ಗಳಿಗೆ ತಮಗೆ ದುಡ್ಡು ಬೇಕು ಎಂದನಿಸಿದಲ್ಲಿ ಆರ್‌ಬಿಐನಿಂದ ಸಾಲ ಪಡೆಯುತ್ತವೆ.

ಆರ್‌ಬಿಐನಿಂದ ಸಾಲ ಪಡೆಯುವಾಗ ಬ್ಯಾಂಕ್ ಗಳು ತಮ್ಮಲ್ಲಿರುವ ಒಪ್ಪಿಗೆ ಪಡೆದ ಸರಕಾರಿ ಭದ್ರತೆಗಳನ್ನು ಅಡವಿಟ್ಟಿರುತ್ತವೆ. ಪಡೆದ ಸಾಲವನ್ನು ಇಂತಿಷ್ಟು ದಿನಗಳೊಳಗೆ ಬ್ಯಾಂಕ್ ಗಳು ತೀರಿಸಬೇಕು ಎಂದು ಆರ್‌ಬಿಐ ಕಟ್ಟಲೆ ವಿದಿಸಿರುತ್ತದೆ. ಇಂತಿಷ್ಟು ದಿನದಲ್ಲಿ ಬ್ಯಾಂಕ್ ತಾನು ಪಡೆದಿರುವ ಸಾಲವನ್ನು ತೀರಿಸಬೇಕು. ಹಣವನ್ನು ಬ್ಯಾಂಕುಗಳಿಗೆ ಸಾಲವಾಗಿ ನೀಡಲು ಆರ್‌ಬಿಐ ಹಾಕುವ ಬಡ್ಡಿಗೆ ರೆಪೋ ಎಂದು ಕರೆಯಲಾಗುತ್ತದೆ.

### ರಿವರ್ಸ್ ರೆಪೋ ದರ..?

- ವಾಣಿಜ್ಯ ಬ್ಯಾಂಕುಗಳು ಆರ್‌ಬಿಐ ಯಲ್ಲಿ ಇಡುವ ಠೇವಣಿಗಳ ಮೇಲೆ ಪಡೆಯುವ ಬಡ್ಡಿದರವೇ ವಿರುದ್ಧ ರೆಪೋ ರೇಟ್. ಆರ್ಬಿಐನಲ್ಲಿ ಠೇವಣಿ ಇಡುವುದು ಬ್ಯಾಂಕುಗಳಿಗೆ ಸುರಕ್ಷಿತ. ರಿವರ್ಸ್‌ರೆಪೋ ದರ ಹೆಚ್ಚಾದಾಗ ಬ್ಯಾಂಕುಗಳು ಹೆಚ್ಚಿನ ಮೊತ್ತವನ್ನು ಆರ್‌ಬಿಐಗೆ ವರ್ಗಾಯಿಸುತ್ತದೆ.

## 7. ಅನಿಯಂತ್ರಿತ ಠೇವಣಿ ಯೋಜನೆಗಳ ನಿಷೇಧ ಮಸೂದೆ-2018

### ಪ್ರಮುಖ ಸುದ್ದಿ

- ಪ್ರಧಾನ ಮಂತ್ರಿಅವರ ನೇತೃತ್ವದಲ್ಲಿ ಕೇಂದ್ರ ಸಂಪುಟ, ಅನಿಯಂತ್ರಿತ ಠೇವಣಿ ಯೋಜನೆಗಳ ನಿಷೇಧ ಮಸೂದೆ-2018ಕ್ಕೆ ಅಧಿಕೃತ ತಿದ್ದುಪಡಿ ತರುವ ಪ್ರಸ್ತಾವಕ್ಕೆ ಹಣಕಾಸು ಸ್ಥಾಯಿ ಸಮಿತಿಯ ಶಿಫಾರಸಿನ ಅನುಸಾರವಾಗಿ ಅನುಮತಿ ನೀಡಿದೆ.

### ಮುಖ್ಯ ಅಂಶಗಳು

- ದೇಶದಲ್ಲಿ ಅಕ್ರಮ ಠೇವಣಿಯ ಅಪಾಯವನ್ನು ನಿಭಾಯಿಸುವಲ್ಲಿ ಅಧಿಕೃತ ತಿದ್ದುಪಡಿಗಳು ಪ್ರಮುಖ ಪಾತ್ರ ವಹಿಸಲಿದ್ದು, ಮಸೂದೆಗೆ ಮತ್ತಷ್ಟು ಬಲ ತುಂಬಲಿವೆ. ಬಡವರು ಕಷ್ಟಪಟ್ಟು ಗಳಿಸಿ ಕೂಡಿಟ್ಟ ಹಣಕ್ಕೆ ಅಂತಹ ಯೋಜನೆಗಳಿಂದ ಮೋಸವಾಗದಂತೆ ತಡೆಯುತ್ತದೆ.
- ಮಸೂದೆಯು ನಿಷೇಧಿತ ನಿಬಂಧನೆಯನ್ನು ಒಳಗೊಂಡಿದ್ದು, ಠೇವಣಿ ಪಡೆಯುವವರು ಪ್ರಚಾರ, ಕಾರ್ಯಾಚರಣೆ ಮತ್ತು ಜಾಹೀರಾತು ನೀಡುವ ಮೂಲಕ ಯಾವುದೇ ಅನಿಯಂತ್ರಿತ ಠೇವಣಿ ಯೋಜನೆಯಡಿ ಠೇವಣಿ ಸ್ವೀಕರಿಸುವಂತಿಲ್ಲ. ಒಟ್ಟಾರೆಯಾಗಿ ಈ ನಿಯಮವು ಅನಿಯಂತ್ರಿತ ಠೇವಣಿ ಚಟುವಟಿಕೆಗಳನ್ನು ನಿಷೇಧಿಸುತ್ತದೆ. ಅಸ್ತಿತ್ವದಲ್ಲಿರುವ ಶಾಸಕಾಂಗ ನಿಯಂತ್ರಣ ಚೌಕಟ್ಟನ್ನು ಹೊರತುಪಡಿಸಿ ಅಪರಾಧ ಜರುಗುವ ಮೊದಲೇ ಈ ನಿಯಮವನ್ನು ಜಾರಿಗೆ ತರಬಹುದಾಗಿದೆ.
- ಈ ಮಸೂದೆಯು ೩ ವಿಭಿನ್ನ ರೀತಿಯ ಅಪರಾಧಗಳನ್ನು ಉಲ್ಲೇಖಿಸುತ್ತದೆ. ಅವುಗಳೆಂದರೆ ಅನಿಯಂತ್ರಿತ ಠೇವಣಿ ಯೋಜನೆಗಳ ಚಾಲನೆ, ನಿಯಂತ್ರಿತ ಠೇವಣಿ ಯೋಜನೆಗಳಲ್ಲಿ ಮೋಸದ ಅಸಡ್ಡೆ, ಅನಿಯಂತ್ರಿತ ಠೇವಣಿ ಯೋಜನೆಗಳಿಗೆ ಸಂಬಂಧಿಸಿದಂತೆ ತಪ್ಪು ಪ್ರಚೋದನೆ.
- ಮಸೂದೆಯಲ್ಲಿ ಉಲ್ಲೇಖಿಸಿರುವ ತೀವ್ರ ಶಿಕ್ಷೆ ಮತ್ತು ದಂಡ ನಿರೋಧಕವಾಗಿ ಕಾರ್ಯನಿರ್ವಹಿಸುತ್ತದೆ.

- ಅಕ್ರಮವಾಗಿ ಠೇವಣಿಗಳನ್ನು ಸಂಗ್ರಹಿಸುವ ಪ್ರಕರಣಗಳಲ್ಲಿ ಠೇವಣಿಗಳ ಅಸಮಾಧಾನ ಮತ್ತು ಮರುಪಾವತಿಗೆ ಈ ಮಸೂದೆಯು ಅನೇಕ ನಿಬಂಧನೆಗಳನ್ನು ಒಳಗೊಂಡಿದೆ.
- ಸ್ವರ್ಧಾತ್ಮಕ ಪ್ರಾಧಿಕಾರದಿಂದ ಆಸ್ತಿಯನ್ನು ಲಗತ್ತಿಸುವ ಅಧಿಕಾರವನ್ನು ಮಸೂದೆ ಒದಗಿಸುತ್ತದೆ. ಮತ್ತು ಠೇವಣಿದಾರರಿಗೆ ಮರುಪಾವತಿಸುವಾಗ ಆಸ್ತಿಗಳ ಬಗ್ಗೆ ಅರಿವನ್ನು ಒದಗಿಸುತ್ತದೆ.
- ಸ್ವತ್ತಿನ ಜೋಡಣೆಗಾಗಿ ಸ್ಪಷ್ಟ ಸಮಯವನ್ನು ಒದಗಿಸಲಾಗಿದೆ ಮತ್ತು ಠೇವಣಿದಾರರಿಗೆ ಮರುಪಾವತಿ ಮಾಡಲಾಗುತ್ತದೆ.
- ದೇಶದಲ್ಲಿ ಠೇವಣಿ ಸ್ವೀಕರಿಸುವ ಚಟುವಟಿಕೆಗಳಿಗೆ ಸಂಬಂಧಿಸಿದ ಮಾಹಿತಿ ಸಂಗ್ರಹಿಸಲು ಮತ್ತು ಹಂಚಿಕೆ ಮಾಡಲು ಆನ್‌ಲೈನ್ ದತ್ತಸಂಚಯವನ್ನು ರಚಿಸಲು ಈ ಮಸೂದೆಯು ಶಕ್ತವಾಗಿದೆ.

**ಈ ಮಸೂದೆಯು 'ಠೇವಣಿ ಸ್ವೀಕರಿಸುವವರು' ಮತ್ತು 'ಠೇವಣಿ'ಯನ್ನು ಸಮಗ್ರವಾಗಿ ವ್ಯಾಖ್ಯಾನಿಸುತ್ತದೆ.**

- 'ಠೇವಣಿ ಸ್ವೀಕರಿಸುವವರು' ಎಂಬುದು ಶಾಸನವು ಒಳಗೊಂಡ ನಿರ್ದಿಷ್ಟ ಘಟಕಗಳನ್ನು ಹೊರತುಪಡಿಸಿ ಎಲ್ಲ ಸಂಭಾವ್ಯ ಘಟಕಗಳು (ವ್ಯಕ್ತಿ ಸೇರಿದಂತೆ) ಠೇವಣಿಗಳನ್ನು ಸ್ವೀಕರಿಸುವುದು ಅಥವಾ ವಿನಂತಿಸುವುದನ್ನು ಒಳಗೊಂಡಿರುತ್ತದೆ
- 'ಠೇವಣಿ' ಎಂಬುದನ್ನು ಸಾರ್ವಜನಿಕ ಠೇವಣಿಗಳನ್ನು ರಶೀದಿಗಳಾಗಿ ಮರೆಮಾಚುವುದನ್ನು ನಿಬಂಧಿಸಲಾಗಿದೆ ಎಂಬುದಾಗಿ ವ್ಯಾಖ್ಯಾನಿಸಬಹುದಾಗಿದೆ. ಮತ್ತು ವ್ಯವಹಾರದ ಸಾಮಾನ್ಯ ವಿಧಾನದ ಮೂಲಕ ಅಂಗೀಕಾರವನ್ನು ನಿಗ್ರಹಿಸುವಂತಿಲ್ಲ. ಮತ್ತು
- ಸಮಗ್ರ ಕೇಂದ್ರ ಕಾನೂನಾಗಿರುವ ಈ ಮಸೂದೆಯು ರಾಜ್ಯ ಕಾನೂನುಗಳಿಂದ ಉತ್ತಮ ರೂಢಿಗಳನ್ನು ಅಳವಡಿಸಿಕೊಳ್ಳುತ್ತದೆ. ಆದರೆ ರಾಜ್ಯ ಸರ್ಕಾರಗಳಿಗೆ ಶಾಸನದ ನಿಬಂಧನೆಗಳನ್ನು ಅನುಷ್ಠಾನಗೊಳಿಸುವ ಪ್ರಾಥಮಿಕ ಜವಾಬ್ದಾರಿಯನ್ನು ವಹಿಸುತ್ತದೆ.

ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

**ಹಿನ್ನೆಲೆ:**

- ಇತ್ತೀಚಿನ ದಿನಗಳಲ್ಲಿ ಅಕ್ರಮ ಠೇವಣಿ ಸ್ವೀಕರಿಸುವ ಯೋಜನೆಗಳಿಂದ ದೇಶದ ವಿವಿಧ ಭಾಗಗಳಲ್ಲಿ ಜನರು ಮೋಸ ಹೋಗುತ್ತಿರುವ ಘಟನೆಗಳು ನಡೆಯುತ್ತಿವೆ. ಆದ್ದರಿಂದ ಇಂತಹ ಅಕ್ರಮವನ್ನು ನಿಗ್ರಹಿಸಲು ಸಮಗ್ರ ಕೇಂದ್ರ ಕಾನೂನನ್ನು ಜಾರಿಗೆ ತರಲಾಗುವುದೆಂದು ಹಣಕಾಸು ಸಚಿವರು 2016-17ನೇ ಸಾಲಿನ ಬಜೆಟ್‌ನಲ್ಲಿ ಘೋಷಿಸಿದ್ದರು.
- ಇಂತಹ ಅಕ್ರಮ ಠೇವಣಿಯಿಂದ ಬಡವರು, ಆರ್ಥಿಕ ಅನಕ್ಷರಸ್ಥರೇ ಹೆಚ್ಚಾಗಿ ಬಲಿಪಶುಗಳಾಗಿದ್ದಾರೆ. ಅಲ್ಲದೇ ಇಂತಹ ಅಕ್ರಮಗಳು ದೇಶದ ವಿವಿಧ ರಾಜ್ಯಗಳಿಗೂ ಹಬ್ಬಿವೆ. ಆರ್‌ಬಿಐ ನೀಡಿದ ಮಾಹಿತಿ ಪ್ರಕಾರ, 2014ರ ಜುಲೈ ಮತ್ತು 2018ರ ಮೇ ನಡುವೆ ಒಟ್ಟಾರೆ ಅನಧಿಕೃತ ಯೋಜನೆಗಳ 928 ಪ್ರಕರಣಗಳನ್ನು ವಿವಿಧ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ ರಾಜ್ಯಮಟ್ಟದ ಸಹಕಾರಿ ಸಮಿತಿ ಸಭೆಗಳಲ್ಲಿ ಚರ್ಚಿಸಲಾಗಿದೆ ಮತ್ತು ರಾಜ್ಯಗಳಲ್ಲಿ ಆಯಾ ನಿಯಂತ್ರಕರು ಕಾನೂನು ಜಾರಿ ಸಂಸ್ಥೆಗಳಿಗೆ ನೀಡಲಾಗಿದೆ.
- ಆ ರೀತಿಯ ಹೆಚ್ಚಿನ ಪ್ರಕರಣಗಳು ದೇಶದ ಪೂರ್ವಭಾಗದದಿಂದಲೇ ಹೆಚ್ಚು ವರದಿಯಾಗಿವೆ. ಅಕ್ರಮ ಠೇವಣಿ ಯೋಜನೆಗಳನ್ನು ನಿವಾರಿಸಲು ಕರಡು ಮಸೂದೆಯನ್ನು ಸಾರ್ವಜನಿಕ

ಡೊಮೇನ್‌ನಲ್ಲಿ ಪ್ರಕಟಪಡಿಸಲಾಗುವುದು ಮತ್ತು ಅದನ್ನು ಅಂತಿಮಗೊಳಿಸಿದ ಕೆಲವೇ ದಿನಗಳಲ್ಲಿ ಪರಿಚಯಿಸಲಾಗುವುದು ಎಂದು 2017-18ರ ಬಜೆಟ್ ಭಾಷಣದಲ್ಲಿ ಹಣಕಾಸು ಸಚಿವರು ಘೋಷಿಸಿದರು.

**ಸಂಸತ್ತಿನಲ್ಲಿ ಮಂಡಿಸಿರುವ ಅನಿಯಂತ್ರಿತ ಠೇವಣಿ ಯೋಜನೆಗಳ ನಿಷೇಧ ಕಾಯ್ದೆ-2018 ದೇಶದಲ್ಲಿ ಅಕ್ರಮ ಠೇವಣಿ ಯೋಜನೆಗಳ ನಿವಾರಣೆಗೆ ಸಮಗ್ರ ಶಾಸನವನ್ನು ಒದಗಿಸುತ್ತದೆ.**

- ಅನಿಯಂತ್ರಿತ ಠೇವಣಿ ತೆಗೆದುಕೊಳ್ಳುವ ಚಟುವಟಿಕೆಗಳ ಸಂಪೂರ್ಣ ನಿಷೇಧ
- ಅನಿಯಂತ್ರಿತ ಠೇವಣಿ ಯೋಜನೆಯಲ್ಲಿ ಕಾರ್ಯನಿರ್ವಹಿಸುವುದು ಅಥವಾ ಉತ್ತೇಜನಕ್ಕೆ ತೀವ್ರ ಶಿಕ್ಷೆ
- ಠೇವಣಿದಾರರಿಗೆ ಮರುಪಾವತಿ ಮಾಡುವಾಗ ಮೋಸ ಮಾಡಿದರೆ ಶಿಕ್ಷೆ
- ಠೇವಣಿಗಳ ಮರುಪಾವತಿಯನ್ನು ಖಚಿತಪಡಿಸಲು ರಾಜ್ಯ ಸರ್ಕಾರವು ಸ್ಪರ್ಧಾತ್ಮಕ ಪ್ರಾಧಿಕಾರವನ್ನು ಹೆಸರಿಸುವುದು.
- ಡಿಫಾಲ್ಟ್ ಸ್ಥಾಪನೆಯ ಸ್ವತ್ತುಗಳನ್ನು ಜೋಡಿಸುವ ಅಧಿಕಾರ ಸೇರಿದಂತೆ ಅಧಿಕಾರ ಮತ್ತು ಕಾರ್ಯಗಳು
- ಠೇವಣಿದಾರರ ಮರುಪಾವತಿಯನ್ನು ಮೇಲ್ವಿಚಾರಣೆ ಮಾಡಲು ಕಾಯ್ದೆಯಡಿ ಅಪರಾಧಗಳನ್ನು ಪರೀಕ್ಷಿಸಲು ನ್ಯಾಯಾಲಯಗಳ ಸ್ಥಾನೀಕರಿಸುವುದು ಮತ್ತು
- ಮಸೂದೆಯಲ್ಲಿ ನಿಯಂತ್ರಣಾ ಠೇವಣಿ
- ಯೋಜನೆಗಳ ಪಟ್ಟಿ ಜತೆಗೆ ಕೇಂದ್ರ ಸರ್ಕಾರವು ಪಟ್ಟಿಯನ್ನು ವಿಸ್ತರಿಸುವ ಅಥವಾ ತೆಗೆಯುವ ಷರತ್ತುಗಳನ್ನು ಪರಿಚಯಿಸುವುದು.

ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

## 8. ಆದಾಯ ತೆರಿಗೆ ಒಂಬುಡ್ಸ್ ಮನ್

### ಪ್ರಮುಖ ಸುದ್ದಿ

- ಪ್ರಧಾನಮಂತ್ರಿ ಅವರ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಂಪುಟ ಸಭೆಯು ಆದಾಯ ತೆರಿಗೆ ಒಂಬುಡ್ಸ್ ಮನ್ ಮತ್ತು ಪರೋಕ್ಷ ತೆರಿಗೆ ಒಂಬುಡ್ಸ್ ಮನ್ ಸಂಸ್ಥೆಯ ರದ್ದತಿಗೆ ಅನುಮೋದನೆ ನೀಡಿತು.

### ಮುಖ್ಯ ಅಂಶಗಳು

- ಪರ್ಯಾಯ ದೂರು ಪರಿಹಾರ ವ್ಯವಸ್ಥೆಯ ಆಯ್ಕೆ ಇರುವುದರಿಂದ ಮತ್ತು ಒಂಬುಡ್ಸ್ ಮನ್ ಸಂಸ್ಥೆಯು ಹಾಲಿ ನಿಯಮಿತವಾಗಿ ಸಮಾನಾಂತರ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ದೂರು, ಕುಂದು ಕೊರತೆ ಪರಿಹಾರ ವ್ಯವಸ್ಥೆಗಳಿಗಿಂತ ಹೆಚ್ಚು ದಕ್ಷ ಯಾ ಕ್ರಿಯಾಶಾಲಿ ಎಂಬುದು ಸಾಬೀತಾಗದಿರುವ ಹಿನ್ನೆಲೆಯಲ್ಲಿ ಆದಾಯ ತೆರಿಗೆ ಒಂಬುಡ್ಸ್ ಮನ್ ಮತ್ತು ಪರೋಕ್ಷ ತೆರಿಗೆ ಒಂಬುಡ್ಸ್ ಮನ್ ಗಳನ್ನು ರದ್ದು ಮಾಡಲು ಅನುಮೋದನೆ ನೀಡಲಾಗಿದೆ.

### ಹಿನ್ನೆಲೆ

- ಆದಾಯ ತೆರಿಗೆ ಒಂಬುಡ್ಸ್ ಮನ್ ಸಂಸ್ಥೆಯನ್ನು ಆದಾಯ ತೆರಿಗೆಗೆ ಸಂಬಂಧಿಸಿದಂತೆ ಸಾರ್ವಜನಿಕರ ಕುಂದು ಕೊರತೆಗಳ ಪರಿಹಾರಕ್ಕಾಗಿ 2003 ರಲ್ಲಿ ಸ್ಥಾಪಿಸಲಾಗಿತ್ತು. ಆದಾಗ್ಯೂ ಒಂಬುಡ್ಸ್ ಮನ್ ಸಂಸ್ಥೆ ತನ್ನ ಉದ್ದೇಶ ಸಾಧನೆಯಲ್ಲಿ ಸಫಲವಾಗಲಿಲ್ಲ.
- ದೂರುಗಳ ಸಂಖ್ಯೆ ಏಕ ಅಂಕೆಗಳ ಮಟ್ಟಕ್ಕೆ ಕುಸಿದುದರಿಂದ ಮತ್ತು ತೆರಿಗೆ ಪಾವತಿದಾರರು ಸಿ.ಪಿ.ಜಿ.ಆರ್. ಎ.ಎಂ.ಎಸ್. ( ಕೇಂದ್ರೀಕೃತ ಸಾರ್ವಜನಿಕ ಕುಂದು ಕೊರತೆ ಪರಿಹಾರ ಮತ್ತು ನಿಗಾ ವ್ಯವಸ್ಥೆ ) , ಆಯಕರ ಸೇವಾ ಕೇಂದ್ರ ಇತ್ಯಾದಿ ಪರ್ಯಾಯ ವಿಧಾನಗಳನ್ನು ಬಳಸಲು ಆಯ್ಕೆ ಮಾಡಿಕೊಂಡದ್ದರಿಂದ , 2011 ರಲ್ಲಿ ಪರೋಕ್ಷ ತೆರಿಗೆ ಒಂಬುಡ್ಸ್ ಮನ್ ವ್ಯವಸ್ಥೆಯ ಖಾಲಿ ಕಚೇರಿಯನ್ನು ಮುಚ್ಚಲು ನಿರ್ಧರಿಸಲಾಗಿತ್ತು.

## 9. ಡಿಜಿಟಲ್ ವಿಲೇಜ್

### ಪ್ರಮುಖ ಸುದ್ದಿ

- ಇತ್ತೀಚಿಗೆ  ಮಂಡನೆಯಾದ ಕೇಂದ್ರ ಬಜೆಟ್‌ನಲ್ಲಿ ಒಂದು ಲಕ್ಷ 'ಡಿಜಿಟಲ್ ವಿಲೇಜ್'ಗಳನ್ನು ನಿರ್ಮಾಣ ಮಾಡುವ ಯೋಜನೆಯನ್ನು ಪ್ರಕಟಿಸಲಾಗಿದೆ.

### ಮುಖ್ಯ ಅಂಶಗಳು

### ಡಿಜಿಟಲ್ ಹಳ್ಳಿ ಎಂದರೇನು?

- ಸಾಮಾನ್ಯ ಅರ್ಥದಲ್ಲಿ ಡಿಜಿಟಲ್ ವಿಲೇಜಜಿರಿ ಎಂದರೆ, ಗ್ರಾಮವೊಂದು ಸಂಜಿರಿರ್ಣವಾಗಿ ಇಂಟರ್ನೆಟ್ ಸಂಪೂರ್ಣ ಹೊಂದುವುದಾಗಿದೆ.
- ಅಂದರೆ, ಬ್ರಾಡ್ ಬ್ಯಾಂಡ್ ಸಂಪರ್ಕ ಕಲ್ಪಿಸುವುದಾಗಿರುತ್ತದೆ. ಅದರಲ್ಲೂ ಕಂಪ್ಯೂಟರ್‌ಗಳು, ಟ್ಯಾಬ್ಲೆಟ್ ಮತ್ತು ಮೊಬೈಲ್ ಫೋನ್‌ಗಳ ಬಳಕೆಗೆ ಸಾಕಾಗುವಷ್ಟು ಹೈಬ್ಯಾಂಡ್ ವಿಡ್ತ್ ಇಂಟರ್ನೆಟ್ ಪೂರೈಸುವುದಾಗಿರುತ್ತದೆ.

### ಏನೇನು ಮಾಡಬಹುದು?

- ಒಮ್ಮೆ ಗ್ರಾಮವೊಂದು ಸಂಪೂರ್ಣವಾಗಿ ಇಂಟರ್ನೆಟ್ ಸಂಪರ್ಕಕ್ಕೆ ಒಳಪಟ್ಟರೆ, ಅದು – 6 ಡಿಜಿಟಲ್ ವಿಲೇಜ್ ಆಗಿ ಬದಲಾಗಲು ಬೇಕಾದ ವೇದಿಕೆಯನ್ನು ಸಜ್ಜುಗೊಳಿಸುತ್ತದೆ.
- ಗ್ರಾಮದ ಪ್ರತಿಯೊಬ್ಬರು ಇಂಟರ್ನೆಟ್ ಸಂಪರ್ಕಕ್ಕೆ ಒಳಪಡುವುದರಿಂದ ಸರಕಾರದ ಈ ಯೋಜನೆಗಳು, ಮೂಲ ಸೌಕರ್ಯಗಳನ್ನು ತಂತ್ರಜ್ಞಾನದ ಮೂಲಕ ಪಡೆಯಲು ಸಾಧ್ಯವಾಗುತ್ತದೆ.
- ಇಂಟರ್ನೆಟ್ ಆಧರಿತ ಎಲ್ಲ ಸೇವೆಗಳನ್ನು ಪಡೆಯಬಹುದು:
- ಮಾಹಿತಿ, ಸುದ್ದಿ, ಶಿಕ್ಷಣ.
- ಸಾಮಾಜಿಕ ಜಾಲತಾಣಗಳು, ಸಿನಿಮಾ, ಟಿವಿ ಪ್ರದರ್ಶನ.

- ಸ್ನೇಹಿತರು, ಕುಟುಂಬದ ಸದಸ್ಯರು, ಉದ್ಯೋಗಿಗಳು, ಸರಕಾರದ ಜತೆ ಸಂಪರ್ಕ.
- ಕೃಷಿ ಹಾಗೂ ಅದಕ್ಕೆ ಸಂಬಂಧಿಸಿದ ಮಾಹಿತಿ ಪಡೆಯುವುದು.
- ವೈದ್ಯರ ಅಪಾಯಿಂಟ್ಮೆಂಟ್, ದಾಖಲೆಗಳನ್ನು ಪಡೆಯುವುದು.
- ಸಾರ್ವಜನಿಕ ಕಾರ್ಯಕ್ರಮಗಳು.
- ಗ್ರಾಮಕ್ಕೆ ಸಂಬಂಧಿಸಿದ ನಾಗರಿಕ ಸೇವೆಗಳ ಕೊರತೆ ದಾಖಲು.

### ಇದರಿಂದ ಆಗುವ ಲಾಭವೇನು ?

### ಕೃಷಿಗೆ ಲಾಭ:

- ಹಳ್ಳಿಗಳು ಸಂಪೂರ್ಣವಾಗಿ ಡಿಜಿಟಲೀಕರಣಗೊಂಡರೆ ಅದರ ಮೊದಲ ಉಪಯೋಗವಾಗುವುದು ಕೃಷಿ ಕ್ಷೇತ್ರಕ್ಕೆ.
- ಹವಾಮಾನ, ಕೃಷಿ ಉತ್ಪನ್ನ, ಕೃಷಿ ಪದ್ಧತಿಗಳಲ್ಲಿ ಸುಧಾರಣೆಗಳು ಸೇರಿದಂತೆ ಆ ಕ್ಷೇತ್ರದಲ್ಲಾಗುತ್ತಿರುವ ಶರವೇಗದ ಬದಲಾವಣೆಗಳನ್ನು ರೈತರು ತಮ್ಮ ಹಳ್ಳಿಗಳಲ್ಲಿ ಕುಳಿತುಕೊಂಡು ತಿಳಿದುಕೊಳ್ಳಲು ಸಾಧ್ಯವಾಗಲಿದೆ.
- ಅವರು ಹಣಕಾಸು ಮತ್ತು ಮಾರುಕಟ್ಟೆಯ ಮಾಹಿತಿಯನ್ನು ಬೆರಳ ತುದಿಯಲ್ಲೇ ಪಡೆಯಲಿರುವುದರಿಂದ ಇದು ಸಾಧ್ಯವಾಗಲಿದೆ.
- ಅಷ್ಟೆ ಯಾಕೆ ಬ್ಯಾಂಕಿಂಗ್ ಸೇವೆಯನ್ನೂ ಯಾವುದೇ ಅಡೆತಡೆ ಇಲ್ಲದೆ ಪಡೆಯಬಹುದು.

### ಆರೋಗ್ಯ:

- ಸಾಮಾನ್ಯವಾಗಿ ಹಳ್ಳಿಗರಿಗೆ ಸಕಾಲಕ್ಕೆ ಆರೋಗ್ಯ ಸೇವೆ – ದೊರೆಯುವುದಿಲ್ಲ. ಇದರಿಂದ ಅನೇಕ ಸಾವು ನೋವು ಸಂಭವಿಸುತ್ತವೆ.
- ಆದರೆ, ಡಿಜಿಟಲ್ ವಿಲೇಜ್‌ಗಳಿಂದಾಗಿ ಈ ಸಮಸ್ಯೆಯನ್ನು ಬಗೆಹರಿಸಿಕೊಳ್ಳ ರ ಬಹುದಾಗಿದೆ. ಆರೋಗ್ಯ ತುರ್ತು ಸಂದರ್ಭದಲ್ಲಿ ಡಿಜಿಟಲ್ ಸಂಪರ್ಕದಿಂದಾಗಿ ಸಕಾಲದಲ್ಲಿ ಆ್ಯಂಬುಲೆನ್ಸ್ ಸೇವೆ ಪಡೆದುಕೊಳ್ಳಬಹುದಾಗಿದೆ. ಅಗತ್ಯಬಿದ್ದರೆ ನುರಿತ ವೈದ್ಯರನ್ನು ಹಳ್ಳಿಗಳಿಗೆ ಕರೆಯಿಸಿಕೊಳ್ಳಬಹುದು.

### ನಾಗರಿಕ ಸೇವೆಗಳು:

- ಹಳ್ಳಿಗಳು ಡಿಜಿಟಲೀಕರಣವಾಗುವುದರ ಬಹು ದೊಡ್ಡ ಲಾಭ ಎಂದರೆ, ನಾಗರಿಕ ಸೇವೆಗಳನ್ನು ಯಾವುದೇ ತೊಂದರೆ ಇಲ್ಲದೆ ಪಡೆಯಬಹುದು.
- ಅರ್ಜಿಗಳ ಭರ್ತಿ, ವಾಹನಗಳ ನೋಂದಣಿ, ಆಧಾರ್ ಕಾರ್ಡ್ ಪಡೆಯುವುದು, ಪಾಸ್‌ಪೋರ್ಟ್ ಸೇವೆಗಳು ಬೆರಳ ತುದಿಯಲ್ಲೇ ದೊರೆಯಲಿವೆ.
- ಇದಕ್ಕಾಗಿ ಹಳ್ಳಿಗರು ದೂರದ ನಗರ ಅಥವಾ ಪಟ್ಟಣಗಳಿಗೆ ಅಲೆದಾಡಬೇಕಿಲ್ಲ. ಜತೆಗೆ ಸ್ಥಳೀಯ ರಾಜಕಾರಣಿಗಳು ಮತ್ತು ಅಧಿಕಾರಿಗಳು ಜನರ ಕೈಗೆ ಸುಲಭಕ್ಕೆ ಸಂಪರ್ಕಕ್ಕೆ ದೊರೆಯಲಿದ್ದಾರೆ.

## 10. ಆರ್ಥಿಕ ಪ್ರಗತಿ, ಸಾಲದ ನಿರ್ವಹಣೆ ಸೂಪರ್

### ಪ್ರಮುಖ ಸುದ್ದಿ

- ವಾರ್ಷಿಕ ಸರಾಸರಿ ಶೇ.7ಕ್ಕೂ ಹೆಚ್ಚಿನ ದರದ ಜಿಡಿಪಿ ಪ್ರಗತಿಯೊಂದಿಗೆ ವಿಶ್ವದಲ್ಲೇ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಆರ್ಥಿಕತೆಯಾಗಿ ಭಾರತ ಹೊರಹೊಮ್ಮಿದೆ. ಹೀಗಾಗಿ ಕಳೆದ ಐದು ವರ್ಷಗಳಲ್ಲಿ ಕೇಂದ್ರ ಸರಕಾರದ ಸಾಲದ ಮೊತ್ತ ವೃದ್ಧಿಸಿದ್ದರೂ, ಜಿಡಿಪಿಯ ಶೇಕಡಾವಾರು ಪ್ರಮಾಣದ ಲೆಕ್ಕಾಚಾರದಲ್ಲಿ ಇಳಿಕೆಯಾಗಿದೆ. ಹೀಗಾಗಿ ಭಾರತಕ್ಕೆ

### ಮುಖ್ಯ ಅಂಶಗಳು

- ಕೇಂದ್ರ ಸರಕಾರ ಕಳೆದ ಜನವರಿಯಲ್ಲಿ ಬಿಡುಗಡೆಗೊಳಿಸಿದ 2017-18ರ ಸಾಲದ ಸ್ಥಿತಿ ಗತಿಯ ಪತ್ರದಲ್ಲಿ (Status paper on Government Debt) ಭಾರತದ ಸಮಗ್ರ ಸಾಲದ ವಿವರಗಳು ಲಭ್ಯವಿದೆ. ಈ ಹಿಂದಿನ ವರ್ಷಗಳ ತುಲನೆಯನ್ನೂ ಇದರಲ್ಲಿ ಗಮನಿಸಬಹುದು. ದೇಶದ ಆಂತರಿಕ ಸಾಲ, ವಿದೇಶಿ ಸಾಲ, ರಾಜ್ಯಗಳು ತೆಗೆದುಕೊಂಡಿರುವ ಸಾಲ, ಜಿಡಿಪಿಗೂ ಸಾಲಕ್ಕೂ ಇರುವ ಅನುಪಾತ ಮುಂತಾದ ಹಲವು ವಿವರಗಳನ್ನು ಹೊಂದಿದೆ. ಸ್ವಾರಸ್ಯವೆಂದರೆ ಕಳೆದ 5 ವರ್ಷಗಳಲ್ಲಿ ಭಾರತದ ಒಟ್ಟಾರೆ ಸಾಲದ ಪ್ರಮಾಣ ಏರಿಕೆಯಾಗಿದ್ದರೂ, ಆರ್ಥಿಕ ಬೆಳವಣಿಗೆ ಹಾಗೂ ಸೂಕ್ತ ಕಾರ್ಯತಂತ್ರಗಳ ಪರಿಣಾಮ ಸಾಲದ ನಿರ್ವಹಣೆಯೂ ಸುಸ್ಥಿತಿಯಲ್ಲಿದೆ ಇದಲ್ಲದೆ ವಿತ್ತೀಯ ಕೊರತೆಯೂ ನಿಗದಿತ ಗುರಿಯ ಒಳಗಿರುವುದು ಗಮನಾರ್ಹ.

### ಸರಕಾರದ ಸಾಲಗಳ ವಿಧಗಳೆಷ್ಟು?

- ಆಂತರಿಕ ಸಾಲ (Internal Debt) ಹಾಗೂ ವಿದೇಶಿ ಸಾಲ (External Debt) ಎಂಬ ಎರಡು ವಿಧವಿದೆ. ಆಂತರಿಕ ಸಾಲ ಎಂದರೆ ದೇಶೀಯವಾಗಿಯೇ ತನ್ನ ನಾಗರಿಕರಿಂದ, ಮಾರುಕಟ್ಟೆಯಿಂದ ಪಡೆಯುವ ಸಾಲ. ಸರಕಾರ ಬಿಡುಗಡೆಗೊಳಿಸುವ ಸಾಲಪತ್ರ ಅಥವಾ ಬಾಂಡ್‌ಗಳು, ಸೆಕ್ಯುರಿಟೀಸ್, ಟ್ರೆಶರಿ ಬಿಲ್ಸ್ ಇತ್ಯಾದಿಗಳು ಇದರಲ್ಲಿರುತ್ತವೆ. ವಿದೇಶಿ ಸಾಲದಲ್ಲಿ ಹೆಸರೇ ಸೂಚಿಸುವಂತೆ ವಿದೇಶಿ ಮೂಲಗಳಿಂದ ಪಡೆಯುವಂಥದ್ದು.
- ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆ, ವಿಶ್ವಬ್ಯಾಂಕ್, ಎಡಿಬಿ ಇತ್ಯಾದಿ ಜಾಗತಿಕ ಹಣಕಾಸು ಸಂಸ್ಥೆಗಳು ಇದರಲ್ಲಿವೆ. ಭಾರತೀಯ ಕಾರ್ಪೊರೇಟ್ ವಲಯದ ಕಂಪನಿಗಳು ವಿದೇಶಿ ಮೂಲಗಳಿಂದ ಪಡೆಯುವ ಸಾಲಗಳೂ ದೇಶದ ಒಟ್ಟಾರೆ ಸಾಲದ ಪಟ್ಟಿಗೆ ಸೇರುತ್ತವೆ. ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರ ಮತ್ತು ಸ್ಥಳೀಯ ಸಂಸ್ಥೆಗಳ ಸಾಲ ಸೇರಿದಾಗ ಸಿಗುವ ಮೊತ್ತವೇ ಒಟ್ಟು ಸಾಲವೆನಿಸುತ್ತದೆ. (General Government Debt) ಹೀಗಾಗಿ ದೇಶದ ಒಟ್ಟು ಸಾಲದ ಏರಿಳಿತಗಳ ಮೇಲೆ ಕೇವಲ ಕೇಂದ್ರ ಸರಕಾರದ ಸಾಲ ಮಾತ್ರ ಕಾರಣವಾಗುವುದಿಲ್ಲ. ಯಾಕೆಂದರೆ ಅದರಲ್ಲಿ ರಾಜ್ಯ ಸರಕಾರಗಳ ಸಾಲಗಳು, ಇತರ ಉತ್ತರದಾಯಿತ್ವಗಳೂ ಸೇರ್ಪಡೆಯಾಗಿರುತ್ತವೆ.

### ಸಾಲದ ಸ್ಥಿತಿ ಗತಿಯ ಪತ್ರದಲೇನಿದೆ ?

- 2013-14ರಲ್ಲಿ ಕೇಂದ್ರ ಸರಕಾರ 53.38 ಲಕ್ಷ ಕೋಟಿ ರೂ. ಸಾಲ ಹೊಂದಿದ್ದರೆ, 2017-18ರಲ್ಲಿ 77.98 ಲಕ್ಷ ಕೋಟಿ ರೂ.ಗೆ ಏರಿಕೆಯಾಗಿದೆ. ಆದರೆ ಇದೇ ಅವಧಿಯಲ್ಲಿ ಆರ್ಥಿಕ ಬೆಳವಣಿಗೆಯೂ ಆಗಿತ್ತು. ಅಂದರೆ ಆದಾಯವೂ ವೃದ್ಧಿಸಿದೆ. ಹೀಗಾಗಿ ಜಿಡಿಪಿಯ ಶೇಕಡಾವಾರು ಸಾಲದ ಪ್ರಮಾಣ ಕೂಡ ಇಳಿಕೆಯಾಗಿದೆ.
- 2013-14ರಿಂದ ಕೇಂದ್ರ ಸರಕಾರದ ಜಿಡಿಪಿಯ ಶೇಕಡಾವಾರು ಸಾಲ ಮತ್ತು ಒಟ್ಟು ಉತ್ತರದಾಯಿತ್ವದ ಪ್ರಮಾಣವನ್ನು ಪರಿಗಣಿಸಿದರೆ, ನಂತರದ ವರ್ಷಗಳಲ್ಲಿ ಕ್ರಮೇಣ ಇಳಿಕೆಯಾಗಿರುವುದನ್ನು ಗಮನಿಸಬಹುದು.
- 2013-14ರಲ್ಲಿ ಜಿಡಿಪಿಯ ಶೇ.47.5ರಷ್ಟು ಸಾಲ ಹಾಗೂ ಉತ್ತರದಾಯಿತ್ವ ಇದ್ದಿದ್ದರೆ, 2017ರ ಮಾರ್ಚ್ ವೇಳೆಗೆ ಅದು ಶೇ.45.9ಕ್ಕೆ ಇಳಿಕೆಯಾಗಿದೆ.

### ಒಟ್ಟು ಸಾಲ ಏರಿದ್ದು ಹೇಗೆ?

- ಕಳೆದ ಐದು ವರ್ಷಗಳಲ್ಲಿ ಜಿಡಿಪಿ ಮತ್ತು ಕೇಂದ್ರ ಸರಕಾರದ ಋಣಭಾರದ ಅನುಪಾತದಲ್ಲಿ ಇಳಿಕೆಯಾಗಿದ್ದರೂ, ದೇಶದ ಒಟ್ಟಾರೆ ಸಾಲ ಇತ್ತೀಚಿನ ವರ್ಷಗಳಿಂದ ಏರಿಕೆಯಾಗಿದೆ. ಹಣಕಾಸು ಇಲಾಖೆಯ ವರದಿಯ ಪ್ರಕಾರ, ಕೇಂದ್ರ, ರಾಜ್ಯ ಹಾಗೂ ಸ್ಥಳೀಯ ಸಂಸ್ಥೆಗಳು ತೆಗೆದುಕೊಳ್ಳುವ ಒಟ್ಟು ಸಾಲ ಮತ್ತು ಜಿಡಿಪಿಯ ಅನುಪಾತವು 2013-14 ಮತ್ತು 2017-18ರಲ್ಲಿ ಶೇ.67.1ರಿಂದ ಶೇ.68.2ಕ್ಕೆ ವೃದ್ಧಿಸಿದೆ.
- ಇತ್ತೀಚಿನ ವರ್ಷಗಳಲ್ಲಿ ರಾಜ್ಯ ಸರಕಾರಗಳು ಪಡೆದಿರುವ ಸಾಲಗಳಲ್ಲಿ ಉಂಟಾಗಿರುವ ಹೆಚ್ಚಳ ಹಾಗೂ 2018ರ ನಂತರ ಸಾರ್ವಜನಿಕ ಬ್ಯಾಂಕ್‌ಗಳಿಗೆ ಬಂಡವಾಳ ನೆರವು ನೀಡಲು ಬಿಡುಗಡೆಗೊಳಿಸಿದ್ದ ವಿಶೇಷ ಸಾಲಪತ್ರಗಳು (ಸ್ಪೆಶಲ್ ಸೆಕ್ಯುರಿಟೀಸ್) ಒಟ್ಟಾರೆ ದೇಶದ ಸಾಲ ಏರಿಕೆಗೆ ಕಾರಣವಾಗಿದೆ.
- ರಾಜ್ಯ ಸರಕಾರಗಳು ನೇರವಾಗಿ ವಿದೇಶಿ ಮೂಲಗಳಿಂದ ಸಾಲ ಪಡೆಯುವುದಕ್ಕೆ ನಿರ್ಬಂಧಗಳಿವೆ. ಹೀಗಾಗಿ ಕೇಂದ್ರ ಸರಕಾರ ಪಡೆಯುವ ಬಹುತೇಕ ಎಲ್ಲ ವಿದೇಶಿ ಸಾಲಗಳು ರಾಜ್ಯ ಸರಕಾರಗಳ ಯೋಜನೆಗೆ ಸಿಗುತ್ತವೆ. ಇಂಥ ಬಾಹ್ಯ ಸಾಲಗಳು ಇಂಟರ್‌ನ್ಯಾಶನಲ್ ಡೆವಲಪ್‌ಮೆಂಟ್ ಏಜೆನ್ಸಿ, ಐಬಿಆರ್‌ಡಿ, ಎಡಿಬಿ ಇತ್ಯಾದಿ ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆಗಳದ್ದಾಗಿರುತ್ತದೆ. ಕಳೆದ 2017ರಲ್ಲಿ ಕೇಂದ್ರ ಸರಕಾರವು ರಾಜ್ಯಗಳಿಗೆ ಮೂಲ ಸೌಕರ್ಯ ಯೋಜನೆಗಳಿಗೆ ಸಂಬಂಧಿಸಿ ಜೆಐಸಿಎ ಇತ್ಯಾದಿ ವಿದೇಶಿ ಸಂಸ್ಥೆಗಳಿಂದ ನೇರವಾಗಿ ಸಾಲ ಪಡೆಯಲು ಅನುಮತಿ ನೀಡಿತ್ತು. ಇದಲ್ಲದೆ ಭಾರತದ ಕಾರ್ಪೊರೇಟ್ ವಲಯದ ಕಂಪನಿಗಳು ದೇಶದಲ್ಲಿ ಹೂಡಿಕೆಗೆ ತೆಗೆದುಕೊಳ್ಳುವ ವಿದೇಶಿ ಸಾಲಗಳೂ ಒಟ್ಟು ಸಾಲದ ಲೆಕ್ಕಕ್ಕೆ ಸೇರ್ಪಡೆಯಾಗುತ್ತದೆ.
- ಸರಕಾರಗಳು ಪಡೆಯುವ ಸಾಲಗಳು ಉತ್ಪಾದಕ ಚಟುವಟಿಕೆಗೆ ವಿನಿಯೋಗವಾದರೆ, ಆರ್ಥಿಕ ಬೆಳವಣಿಗೆಗೂ ಪುಷ್ಟಿ ನೀಡುತ್ತದೆ. ಆದರೆ ಜನಪ್ರಿಯ ಭಾಗ್ಯ ಸ್ಕೀಮ್‌ಗಳಿಗೆ ಬೇಕಾಬಿಟ್ಟಿ ಖರ್ಚಾದರೆ, ಆರ್ಥಿಕ ಬೆಳವಣಿಗೆ ಕುಂಠಿತವಾಗುವುದನ್ನು ನೋಡುತ್ತೇವೆ. ಆದ್ದರಿಂದಲೇ ಸಾಲ ಮನ್ನಾದಂಥ ಯೋಜನೆಗಳು ಶಾಶ್ವತ ಪರಿಹಾರ ಅಲ್ಲ ಎಂಬುದನ್ನು ಯಾವುದೇ ಪಕ್ಷ ಅಥವಾ ಸರಕಾರಗಳು ಒಪ್ಪುತ್ತವೆ.

- ಕೇಂದ್ರ ಸರಕಾರ 2018ರ ಮಾರ್ಚ್ ಅಂತ್ಯದ ವೇಳೆಗೆ ಹೊಂದಿದ್ದ ಒಟ್ಟು ಸಾಲದಲ್ಲಿ ಶೇ.93.8ರಷ್ಟು ಪಾಲೂ ರೂಪಾಯಿ ಕರೆನ್ಸಿಗಳ ಲೆಕ್ಕದಲ್ಲಿದ್ದವು. ವಿದೇಶಿ ಸಾಲ ಕೇವಲ ಶೇ.2.9ರಷ್ಟು ಮಾತ್ರ ಇತ್ತು. ಹೀಗಾಗಿ ಇತರ ಕರೆನ್ಸಿಗಳ ಮೌಲ್ಯಗಳ ಏರುಪೇರಿನಿಂದ ಸಾಲದ ಬ್ಯಾಲೆನ್ಸ್ ಏರುಪೇರಾಗದಂತೆ ಮುನ್ನೆಚ್ಚರಿಕೆ ವಹಿಸಲಾಗಿತ್ತು.
- ಭಾರತದ ಬಹುತೇಕ ಸಾರ್ವಜನಿಕ ಸಾಲ ನಿಶ್ಚಿತ ಬಡ್ಡಿ ದರದಲ್ಲಿ ಇದೆ. 2018ರ ಮಾರ್ಚ್ ಅಂತ್ಯಕ್ಕೆ ಕೇವಲ ಶೇ.1.8ರಷ್ಟು ಆಂತರಿಕ ಸಾಲ ಮಾತ್ರ ಫ್ಲೋಟಿಂಗ್ ದರದಲ್ಲಿತ್ತು. ಇದರಿಂದ ಬಡ್ಡಿ ದರದ ಏರುಪೇರಿನ ಹಾನಿಯೂ ಆಗದಂತೆ ತಡೆಯಬಹುದು. ಬಡ್ಡಿ ಪಾವತಿಗೆ ಸಂಬಂಧಿಸಿ ಬಜೆಟ್ ಮೊತ್ತದಲ್ಲಿ ಸ್ಥಿರತೆ ಕಾಯ್ದುಕೊಳ್ಳಬಹುದು.
- ಕಳೆದ ಕೆಲ ವರ್ಷಗಳಿಂದೀಚೆಗೆ ಕೇಂದ್ರ ಸರಕಾರಕ್ಕೆ ಸಾಲದ ಮರು ಪಾವತಿಯ ಸರಾಸರಿ ಬಡ್ಡಿ ವೆಚ್ಚದಲ್ಲಿ (Average Interest Cost) ಇಳಿಕೆಯಾಗಿದೆ. 2000-01ರಲ್ಲಿ ಶೇ.8.1ರಷ್ಟಿದ್ದ ಕೇಂದ್ರದ ಸರಾಸರಿ ಬಡ್ಡಿ ವೆಚ್ಚ 2017-18ರ ಹೊತ್ತಿಗೆ ಶೇ.7.2ಕ್ಕೆ ತಗ್ಗಿತ್ತು. ಅಚ್ಚರಿಯ ಸಂಗತಿ ಏನೆಂದರೆ ರಾಜ್ಯ ಸರಕಾರಗಳಿಗೂ ಇದೇ ರೀತಿ ಬಡ್ಡಿ ವೆಚ್ಚದಲ್ಲಿ ಇಳಿಕೆಯ ಟ್ರೆಂಡ್ ಸೃಷ್ಟಿಯಾಗಿದೆ. ರಾಜ್ಯಗಳಿಗೆ ಕೂಡ ಸರಾಸರಿ ಬಡ್ಡಿ ವೆಚ್ಚ ಶೇ.7.7ಕ್ಕೆ ಇಳಿಕೆಯಾಗಿದೆ. ಈ ರೀತಿ ಸರಾಸರಿ ಬಡ್ಡಿ ವೆಚ್ಚವು ಜಿಡಿಪಿ ದರಕ್ಕಿಂತ ಕೆಳಗೆ ಅಥವಾ ಆಸುಪಾಸಿನಲ್ಲಿರುವುದು, ಭಾರತ ತನ್ನ ಸಾರ್ವಜನಿಕ ಸಾಲವನ್ನು ಅಚ್ಚುಕಟ್ಟಾಗಿ ನಿಭಾಯಿಸುತ್ತಿರುವುದನ್ನು ಬಿಂಬಿಸುತ್ತಿದೆ.

### ನಿರ್ವಹಣೆಗೆ ಕಾರ್ಯತಂತ್ರವೇನು ?

- ಕೇಂದ್ರ ಸರಕಾರ 2015ರಿಂದ ತನ್ನ ಸಾಲದ ನಿರ್ವಹಣೆಯ ಹೊಸ ಕಾರ್ಯತಂತ್ರವನ್ನು Debt Management Strategy ಪ್ರಕಟಿಸುತ್ತಿದೆ. ಸರಕಾರದ ಸಾಲ ಕಡಿಮೆ ವೆಚ್ಚದಲ್ಲಿರುವಂತೆ ಹಾಗೂ ದೀರ್ಘಾವಧಿಯ ರಿಸ್ಕ್ ತಪ್ಪಿಸುವುದು ಇದರ ಉದ್ದೇಶ.
- ಡಿಎಂಎಸ್‌ನಲ್ಲಿ ಕೇಂದ್ರ ಸರಕಾರದ ಸಾರ್ವಜನಿಕ ಸಾಲ, ವಿದೇಶಿ ಸಾಲ, ವಸ್ತು ಸ್ಥಿತಿ ಮತ್ತು ಸಾಲದ ವೆಚ್ಚ ತಗ್ಗಿಸಲು ತೆಗೆದುಕೊಂಡಿರುವ ಕಾರ್ಯತಂತ್ರಗಳ ವಿವರ ಇದರಲ್ಲಿರುತ್ತದೆ. ಇದಲ್ಲದೆ Fiscal Responsibility and Budget Management Act 2003(FRBMA) ಎಂಬ ಇನ್ನೊಂದು ಪ್ರಬಲ ವಿತ್ತೀಯ ಕಾಯಿದೆಯೂ ಇದೆ. ಈ ಕಾಯಿದೆ ದೇಶದ ವಿತ್ತೀಯ ಶಿಸ್ತಿಗೆ ಸಾಂಸ್ಥಿಕ ರೂಪ ಕೊಟ್ಟಿದೆ. ಇದರ ಪರಿಣಾಮ ಕಳೆದ ಎರಡು ವರ್ಷಗಳಲ್ಲಿ ವಿತ್ತೀಯ ಕೊರತೆಯನ್ನು ಜಿಡಿಪಿಯ ಶೇ.3ಕ್ಕಿಂತ ಕೆಳಮಟ್ಟದಲ್ಲಿ ನಿಯಂತ್ರಿಸಲು ಸಹಾಯಕವಾಗಿದೆ.

### ಸಾಲದ ಭವಿಷ್ಯವೇನು?

- ದೇಶದ ಜಿಡಿಪಿ ಬೆಳವಣಿಗೆ, ಬಡ್ಡಿ ದರ, ವಿನಿಮಯ ದರ, ಭವಿಷ್ಯದ ಸಾಲದ ಅಗತ್ಯಗಳನ್ನು ಅವಲಂಬಿಸಿ ಸಾಲದ ಮೊತ್ತ ವ್ಯತ್ಯಾಸವಾಗಬಹುದು. ಆದರೆ ಹಾಸಿಗೆ ಇದ್ದಷ್ಟೇ ಕಾಲು ಚಾಚಬೇಕು ಎಂಬ ನಿಯಮ ದೇಶಕ್ಕೂ ಅನ್ವಯವಾಗುತ್ತದೆ ಮತ್ತು ಸಾರ್ವತ್ರಿಕ ಸತ್ಯವೂ ಹೌದು. ಇದನ್ನು ಪಾಲಿಸದ ಅನೇಕ ಪಾಶ್ಚಿಮಾತ್ಯ ರಾಷ್ಟ್ರಗಳು ಸಾಲದ ಭಾರಿ ಕೂಪದಲ್ಲಿ ಮುಳುಗಿವೆ.

ಆದ್ದರಿಂದ ಜನಪ್ರಿಯ ಯೋಜನೆಗಳನ್ನು ಘೋಷಿಸುವ ಮುನ್ನ ಯಾವುದೇ ಸರಕಾರ ಈ ಅಂಶವನ್ನು ಸ್ಮರಿಸಬೇಕು.

## 11. ಜನಧನ್ ಯೋಜನೆ

### ಪ್ರಮುಖ ಸುದ್ದಿ

- ಜನವರಿ 30ರ ವರೆಗಿನ ಮಾಹಿತಿ ಪ್ರಕಾರ, ದೇಶದ ಜನ್ ಧನ್ ಖಾತೆಗಳಲ್ಲಿನ ಠೇವಣಿ ಮೊತ್ತ 90,000 ಕೋಟಿ ರೂ. ಸಮೀಪಕ್ಕೆ ಬಂದಿದೆ.ಹಣಕಾಸು ಸಚಿವಾಲಯದ ಮಾಹಿತಿ ಪ್ರಕಾರ, 2017ರ ಮಾರ್ಚ್‌ನಿಂದ ಠೇವಣಿ ಮೊತ್ತ ಏರುತ್ತಿದೆ.

### ಮುಖ್ಯ ಅಂಶಗಳು

### ಏನಿದು ಜನಧನ್ ಯೋಜನೆ ?

- ದೇಶದ ಪ್ರತಿಯೊಬ್ಬರಿಗೂ ಎಲ್ಲ ಬಗೆಯ ಬ್ಯಾಂಕಿಂಗ್ ಸೌಲಭ್ಯಗಳನ್ನು ಒದಗಿಸುವ ಯೋಜನೆಯೇ ಜನಧನ್ 2014 ಆಗಸ್ಟ್ 28ರಂದು ಈ ಯೋಜನೆಗೆ ಚಾಲನೆ ನೀಡಲಾಯಿತು.
- 'ಮೇರಾ ಕಥಾ-ಭಾಗ್ಯ ವಿಧಾತಾ' ಎಂಬ ಘೋಷಣೆಯಡಿ ಆರಂಭವಾಗಿರುವ ಯೋಜನೆ ರಾಷ್ಟ್ರದ ಪ್ರತಿಯೊಬ್ಬ ನಾಗರಿಕನಿಗೂ ಎಲ್ಲ ರೀತಿಯ ಬ್ಯಾಂಕಿಂಗ್ ಸೌಲಭ್ಯ ಕಲ್ಪಿಸುವ ಗುರಿ ಹೊಂದಿದೆ.
- ರುಪೇ ಕಾರ್ಡ್ ಹೆಸರಿನ ಈ ಸೌಲಭ್ಯ ಕೋಟ್ಯಂತರ ಜನರಿಗೆ ಅನುಕೂಲಕಾರಿಯಾಗಿದೆ.
- ನಗರ ಮತ್ತು ಗ್ರಾಮೀಣ ಜನತೆಯನ್ನು ಒಳಗೊಂಡಿರುವ ಈ ಯೋಜನೆಯಡಿ ಎಲ್ಲರಿಗೂ ಡೊಮೆಸ್ಟಿಕ್ ಡೆಬಿಟ್ ಕಾರ್ಡ್ (ರುಪೇ ಕಾಡ್) ನೀಡಲಾಗುವುದು.

ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

### ಯಾಕಾಗಿ ಈ ಯೋಜನೆ ?

- ದೇಶದ ಕೋಟ್ಯಂತರ ಕುಟುಂಬಗಳು ಮೊಬೈಲ್ ಹೊಂದಿವೆ. ಆದರೆ ಬ್ಯಾಂಕ್ ಖಾತೆಯನ್ನು ಹೊಂದಿಲ್ಲ. ಎಲ್ಲರಿಗೂ ಬ್ಯಾಂಕ್ ಖಾತೆ ಒದಗಿಸುವ ಸಲುವಾಗಿ ಪ್ರಧಾನಿ ಈ ಯೋಜನೆ ಜಾರಿಗೆ ತಂದಿದ್ದಾರೆ.

### ಈ ಯೋಜನೆಯ ಗುರಿ ಮತ್ತು ಉದ್ದೇಶಗಳು

- ಅಪಘಾತ ವಿಮೆ, ಡೆಬಿಟ್ ಕಾರ್ಡಿನಿಂದ ಹಿಡಿದು ಅಪಘಾತ ವಿಮೆವರೆಗಿನ ಎಲ್ಲ ಬಗೆಯ ಬ್ಯಾಂಕಿಂಗ್ ಕ್ಷೇತ್ರದ ಮೂಲ ಸೌಲಭ್ಯಗಳನ್ನು ಯೋಜನೆ ಒಳಗೊಂಡಿದೆ.
- ಆಧಾರ್ ಕಾರ್ಡ್ ಸಂಬಂಧಿತ ಐದು ಸಾವಿರಕ್ಕೂ ಹೆಚ್ಚು ಬ್ಯಾಂಕ್ ಖಾತೆಗಳಿಗೆ ಓವರ್ ಡ್ರಾಫ್ಟ್ ಸೌಲಭ್ಯ ಕಲ್ಪಿಸುವುದು, ಈ ಯೋಜನೆಯಡಿ ಖಾತೆ ಮಾಡಿಸಿಕೊಂಡ ವ್ಯಕ್ತಿ 6 ತಿಂಗಳ ನಂತರ 2,500 ರೂ, ಓವರ್ ಡ್ರಾಫ್ಟ್ ಭಾಜನನಾಗುತ್ತಾನೆ.
- ಬ್ಯಾಂಕ್ ಖಾತೆ ಹೊಂದಿರದ 5 ಕೋಟಿ ಜನರಿಗೆ ಬ್ಯಾಂಕಿಂಗ್ ಸೌಲಭ್ಯ ಕಲ್ಪಿಸಿ 15 ಕೋಟಿಗೂ ಹೆಚ್ಚಿನ ಬ್ಯಾಂಕ್ ಖಾತೆ ತೆರೆಯುವ ಉದ್ದೇಶ ಹೊಂದಲಾಗಿದೆ.

- ಪ್ರತಿಯೊಂದು ಮನೆಗೆ ಕನಿಷ್ಠ ಎರಡು ಬ್ಯಾಂಕ್ ಖಾತೆ ನೀಡುವ ಗುರಿ ಹೊಂದಲಾಗಿದೆ.

## 12. ಸಾಗರೋತ್ತರ ಸಾಲಗಳಿಗೆ ಹೊಸ ನೀತಿ

### ಪ್ರಮುಖ ಸುದ್ದಿ

- ಸಾಗರೋತ್ತರ ಸಾಲ ಪಡೆಯಲು ಹೊಸ ನೀತಿಯನ್ನು ಭಾರತೀಯ ರಿಸರ್ವ್ ಬ್ಯಾಂಕ್ ಜಾರಿಗೊಳಿಸಿದೆ.ಕೇಂದ್ರ ಸರ್ಕಾರ ದೊಂದಿಗೆ ಸಮಾಲೋಚನೆ ನಡೆಸಿ ಹಿಂದಿನ ನೀತಿಯಲ್ಲಿ ಸಾಕಷ್ಟು ಬದಲಾವಣೆಗಳು ತಂದಿದೆ.

### ಮುಖ್ಯ ಅಂಶಗಳು

### ಹೊಸ ನೀತಿಯಲೇನಿದೆ ?

- ಬಾಹ್ಯಾವಾಣಿಜ್ಯ ಸಾಲ ಅಥವಾ ಎಕ್ಸ್ಟರ್ನಲ್ ಕಮರ್ಷಿಯಲ್ ಬಾರೋವಿಂಗ್ (ಇಸಿಬಿ) ಪಡೆಯುವ ಅರ್ಹತೆ ಹೊಂದಿರುವವರಿಗೆ ಆರ್ಥಿಕ ವರ್ಷದಲ್ಲಿ ಸಾಗರೋತ್ತರದ ದೇಶಗಳಿಂದ ಸಾಲ ಪಡೆಯುವ ಮಿತಿಯನ್ನು 750 ದಶಲಕ್ಷ ಡಾಲರ್‌ಗೆ ಹೆಚ್ಚಿಸಲಾಗಿದೆ.
- ಪ್ರತ್ಯೇಕವಾಗಿದ್ದ ಬಾಹ್ಯಾವಾಣಿಜ್ಯ ಸಾಲ ಅಥವಾ ಇಸಿಬಿ ಮತ್ತು ರುಪಿ-ಡಿನೋಮಿನೇಟೆಡ್ ಬಾಂಡ್ ಗಳನ್ನುಪರಿಷ್ಕರಿಸಿ ರುಪಿಡಿನೋಮಿನೇಟೆಡ್ ಇಸಿಬಿ'ಗಳಾಗಿ ಜಾರಿಗೊಳಿಸಲಾಗಿದೆ.
- ಇಸಿಬಿಗಳ ಕನಿಷ್ಠ ಸರಾಸರಿ ಮೆಚುರಿಟಿ ಅವಧಿ 3 ವರ್ಷಗಳಿಗೆ ನಿಗದಿಗೊಳಿಸಲಾಗಿದೆ.
- ದೇಶದಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆಯನ್ನು ಹೆಚ್ಚಿಸಲು ಬಾಹ್ಯ ವಾಣಿಜ್ಯ ಸಾಲ ಪಡೆಯಲು ಅರ್ಹತೆ ಹೊಂದಿರುವ ಸಂಸ್ಥೆಗಳ ಸಂಖ್ಯೆಯನ್ನು ಹೆಚ್ಚಿಸಲಾಗಿದೆ.
- ಅದರಲ್ಲಿ ಬಂದರು ಸಂಸ್ಥೆಗಳು, ವಿಶೇಷ ವಿತ್ತ ವಲಯಗಳಲ್ಲಿರುವ ಘಟಕಗಳು, ಎಸ್‌ಐಡಿಬಿಐ, ಎಕ್ಸಿಮ್ ಬ್ಯಾಂಕ್, ಸೂಕ್ಷ್ಮ ಹಣಕಾಸು ಚಟುವಟಿಕೆಗಳಲ್ಲಿ ತೊಡಗಿರುವ ಸಂಸ್ಥೆಗಳು, ನೋಂದಾಯಿತ ಟ್ರಸ್ಟ್ ಗಳು, ಸಹಕಾರ ಸಂಘಗಳು ಮತ್ತು ಸರ್ಕಾರೇತರ ಸಂಘ ಸಂಸ್ಥೆಗಳು ವಿದೇಶಗಳಿಂದ ಸಾಲ ಪಡೆಯಲು ಅವಕಾಶ ಕಲ್ಪಿಸಿದೆ.

## ENVIRONMENT AND ECOLOGY

### 1. ವಿಶ್ವ ಜೌಗು ಪ್ರದೇಶ ದಿನ

**ಪ್ರಮುಖ ಸುದ್ದಿ**

- ಪ್ರತಿ ವರ್ಷ ಭಾರತ ಸೇರಿದಂತೆ ವಿಶ್ವದಾದ್ಯಂತ ವಿಶ್ವ ಜೌಗು ಪ್ರದೇಶ (ವರ್ಲ್ಡ್ ವೆಟ್‌ಲ್ಯಾಂಡ್ ಡೇ)ದಿನವನ್ನು ಆಚರಿಸಲಾಗುತ್ತದೆ. ಪ್ರತಿ ವರ್ಷ ಒಂದು ಧ್ಯೇಯದೊಂದಿಗೆ ಈ ದಿವನ್ನು ಆಚರಿಸಲಾಗುತ್ತದೆ.
- **2019ರ ಧ್ಯೇಯ Wetlands and Climate Change**

**ಮುಖ್ಯ ಅಂಶಗಳು**

- 1971ರ ಫೆಬ್ರುವರಿ 2ರಂದು ಕ್ಯಾಸ್ಪಿಯನ್ ಸಮುದ್ರ ತೀರದಲ್ಲಿರುವ ಇರಾನ್ ನಗರ ಜೌಗು ಪ್ರದೇಶ ರಾಮ್ಸರ್‌ನಲ್ಲಿ ರಾಮ್ಸರ್ ಸಭೆ ನಡೆಯಿತು. 1997ರಿಂದ ಜೌಗು ಅಥವಾ ಆದ್ರ ಪ್ರದೇಶಗಳ ಪ್ರಾಮುಖ್ಯತೆ ಮತ್ತು ಮೌಲ್ಯದ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ವಿಶ್ವ ಜೌಗು ಪ್ರದೇಶ ದಿನವನ್ನು ಫೆಬ್ರುವರಿ 2ರಂದು ಆಚರಿಸಲಾಗುತ್ತದೆ.
- ನೀರಿರುವ ತೇವ ಭೂಮಿಗಳು ಅನೇಕ ಅಪರೂಪದ ಸಸ್ಯಗಳಿಗೆ ಹಾಗೂ ಜಲಜೀವಿಗಳಿಗೆ ಆಶ್ರಯತಾಣವಾಗಿದೆ. ಅನೇಕ ಬೆಳೆಗಳನ್ನು ಸಹ ಇಂಥ ಪ್ರದೇಶಗಳಲ್ಲಿ ಬೆಳೆಯಲಾಗುತ್ತದೆ. ಕಾರ್ಖಾನೆಗಳಿಂದ ಹೊರ ಬರುವ ರಾಸಾಯನಿಕ ತ್ಯಾಜ್ಯಗಳಿಂದ, ನಗರೀಕರಣದಿಂದ ಇನ್ನಿತರ ಮಾನವನ ಚಟುವಟಿಕೆಯಿಂದ ಹಾಗೂ ನೈಸರ್ಗಿಕ ವಿಕೋಪಗಳಿಂದ ಇಂಥ ಜೌಗು ಪ್ರದೇಶಗಳು ಹಾಳಾಗುತ್ತಿದೆ.
- ಇಂಥ ಪ್ರದೇಶಗಳ ಮೌಲ್ಯವನ್ನು ಅದರ ಪ್ರಯೋಜನಕಾರಿ ಅಂಶಗಳ ಅರಿವು ಮೂಡಿಸುವುದು ಮತ್ತು ಅದರ ಸಂರಕ್ಷಣೆ ಮಾಡುವುದು ಈ ದಿನದ ಉದ್ದೇಶವಾಗಿದೆ. ಸರ್ಕಾರಿ ಹಾಗೂ ಖಾಸಗಿ ಸಂಘ ಸಂಸ್ಥೆಗಳು ಈ ಕುರಿತು ವಿಚಾರಗೋಷ್ಠಿ, ಉಪನ್ಯಾಸ, ಪೋಸ್ಟರ್ ಪ್ರದರ್ಶನ, ಜೌಗುಪ್ರದೇಶದ ಚಲನಚಿತ್ರ, ಕಲೆ ಮತ್ತು ರಸಪ್ರಶ್ನೆ , ಚಿತ್ರಕಲೆ, ಛಾಯಾಗ್ರಹಣ ಇನ್ನಿತರ ಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತವೆ. ಹೊಸ ತೇವಾಂಶ ನೀತಿಗಳು ಈ ದಿನದಲ್ಲಿ ಪ್ರಾರಂಭವಾಗುತ್ತದೆ.

**ತೇವ ಭೂಪ್ರದೇಶ/ ಜೌಗು ಪ್ರದೇಶ ಗಳು( ವೆಟ್‌ಲ್ಯಾಂಡ್) ಎಂದರೇನು?**

- ಕೆರೆ, ಸರೋವರ, ತಟಾಕ, ನದಿ, ಅಂತರ್ಜಲ, ಜೌಗು ಪ್ರದೇಶಗಳು, ತೇವಯುಕ್ತ ಹುಲ್ಲುಗಾವಲುಗಳು, ಕೆಸರು ನೆಲ, ಓಯಸಿಸ್‌ಗಳು, ನದಿ ಮುಖಜ ಭೂಮಿ, ಅಳಿವೆಗಳು, mangrooveಗಳಂತಹ ಕರಾವಳೀ ಪ್ರದೇಶಗಳು, ಹವಳದ ದಿಬ್ಬಗಳು, ಮತ್ತು ಮಾನವ ನಿರ್ಮಿತ ಪ್ರದೇಶಗಳಾದ ಮೀನುಸಾಕಣಾ ಕಟ್ಟೆಗಳು, ಭತ್ತದ ಗದ್ದೆಗಳು, ಜಲಾಶಯಗಳು ಮತ್ತು ಉಪ್ಪಿನ ಇಂಗುಗುಂಡಿಗಳನ್ನು ಒಳಗೊಂಡಿವೆ.

### ತೇವ ಪ್ರದೇಶಗಳನ್ನು ಏಕೆ ಸಂರಕ್ಷಿಸಬೇಕು?

- ತೇವ ಪ್ರದೇಶಗಳು ಅತ್ಯಧಿಕ ಜೈವಿಕ ವೈವಿಧ್ಯತೆಯನ್ನು ಹೊಂದಿವೆ. ಈ ಪರಿಸರ ವ್ಯವಸ್ಥೆಯ ಉತ್ಪಾದನಾ ಸಾಮರ್ಥ್ಯವೂ ಅಧಿಕ. ಅವು ನಮಗೆ ಅವಶ್ಯ ಸೇವೆಗಳನ್ನು ಒದಗಿಸುವುದರೊಂದಿಗೆ ಅತ್ಯಗತ್ಯವಿರುವ ಸಿಹಿನೀರಷ್ಟನ್ನೂ ಕೊಡುತ್ತವೆ. ಮಾನವನ ಉಳಿವಿಗೆ ಈ ತೇವ ಪ್ರದೇಶಗಳು ಅತ್ಯವಶ್ಯಕ. ಜೈವಿಕ ವೈವಿಧ್ಯತೆಯ ತೊಟ್ಟಿಲುಗಳಾಗಿದ್ದು ಲೆಕ್ಕವಿಲ್ಲದಷ್ಟು ಸಸ್ಯ-ಪ್ರಾಣಿ, ಮುಂತಾದ ಜೀವಪ್ರಭೇಧಗಳಿಗೆ ನೀರನ್ನುಣಿಸುತ್ತಿವೆಮಾನವನಿಗೂ ಕೂಡ ಪಾರಿಸರಿಕ ಸೇವೆಗಳೊಡನೆ ನೀರಿನ ಪೂರೈಕೆ, ಆಹಾರ, ಕಟ್ಟಡ ನಿರ್ಮಾಣ ವಸ್ತುಗಳನ್ನು ಒದಗಿಸುತ್ತವೆ. ಅಷ್ಟೇ ಅಲ್ಲದೆ, ಪ್ರವಾಹವನ್ನು ತಡೆಗಟ್ಟುತ್ತವೆ, ಅಂತರ್ಜಲವನ್ನು ಮರುಪೂರಣ ಮಾಡುತ್ತವೆ. ಹವಾಗುಣ ವೈಪರೀತ್ಯಗಳನ್ನು ಎದುರಿಸಲು ಸಹಕಾರಿಯಾಗುತ್ತವೆ. ಹೀಗಿದ್ದೂ ಅವುಗಳು ನಶಿಸುತ್ತಿವೆ ಇಲ್ಲವೇ ಬೇರೆ ಉದ್ದೇಶಗಳಿಗೆ ಬಳಕೆಯಾಗುತ್ತಿವೆ. ತೇವ ಭೂಪ್ರದೇಶಗಳ ಸಂರಕ್ಷಣೆ ಒಂದು ಜಾಗತಿಕ ಸವಾಲು ಕೂಡಾ ಹೌದು.

### ಅಂತರಾಷ್ಟ್ರೀಯ ಸಹಕಾರ ಏಕೆ ಬೇಕು?

- ಒಂದು ತೇವ ಪ್ರದೇಶವು ಭೌಗೋಳಿಕವಾಗಿಯೋ, ರಾಜಕೀಯವಾಗಿಯೋ ಒಂದಕ್ಕಿಂತ ಹೆಚ್ಚು ಪ್ರದೇಶಗಳಿಗೆ ಸೇರಿದ್ದಲ್ಲಿ, ಅಂತಹ ಪ್ರದೇಶದ ನಿರ್ವಹಣೆಯು ಆ ಎಲ್ಲ ಪ್ರದೇಶಗಳ ಜವಾಬ್ದಾರಿಯಾಗಿರುತ್ತದೆ. ಅಲ್ಲಿ ದೊರಕುವ ಪ್ರಾಕೃತಿಕ ಸಂಪನ್ಮೂಲಗಳಾದ ನೀರು, ಗಿಡ-ಮರಗಳು, ಪ್ರಾಣಿ-ಪಕ್ಷಿಗಳೆಲ್ಲವನ್ನೂ ಸಂರಕ್ಷಿಸುವ ಹೊಣೆ ಆ ಎಲ್ಲ ಪಕ್ಷಗಳಿಗೂ ಸೇರಿರುತ್ತದೆ. ತತ್ಸಂಬಂಧವಾಗಿ ಅಂತರರಾಷ್ಟ್ರೀಯ ಮಟ್ಟದಲ್ಲಿ ತೇವ ಪ್ರದೇಶಗಳ ಬಗ್ಗೆ ಚರ್ಚಿಸಲು, ಸಂರಕ್ಷಣಾ ಕಾರ್ಯಗಳನ್ನು ಕೈಗೊಳ್ಳಲು, ಮಾಹಿತಿ ವಿನಿಮಯ ಮಾಡಿಕೊಳ್ಳಲು ಒಂದು ವೇದಿಕೆಯನ್ನು ಒದಗಿಸಲು ಅಂತರರಾಷ್ಟ್ರೀಯ ಸಹಕಾರ ಬೇಕು. ಪರಿಸರ ಸಂರಕ್ಷಣೆಯ ಬಗ್ಗೆ ಸೌಹಾರ್ದವನ್ನು, ಸುಸಂಬಂಧವನ್ನು ಹೊಂದಿದ್ದು ಪರಸ್ಪರ ಸಹಯೋಗದೊಂದಿಗೆ ಸೀಮಾರೇಖೆಗಳನ್ನೂ ದಾಟಿ ಕಾರ್ಯೋನ್ಮುಖರಾಗಲು ಅಂತರರಾಷ್ಟ್ರೀಯ ಸಹಕಾರ ಬಹುಮುಖ್ಯ.

### ತೇವ ಭೂಪ್ರದೇಶಗಳ ವಿವೇಚನಾಯುಕ್ತ ಬಳಕೆಯೆಂದರೇನು?

- ತೇವ ಪ್ರದೇಶಗಳ ಸಂರಕ್ಷಣೆ ಹಾಗೂ ಸುಸ್ಥಿರ ಬಳಕೆ ಮತ್ತು ಜನರಿಗೂ ಪ್ರಕೃತಿಗೂ ಅವುಗಳಿಂದ ಲಭಿಸುವ ಪಾರಿಸರಿಕ ಸೇವೆಗಳನ್ನು ವಿವೇಚನಾಯುಕ್ತ ಬಳಕೆ ಅಥವಾ ಸದ್ಬಳಕೆಎನ್ನಬಹುದು. ಈ

ರೀತಿ ಪ್ರಯೋಜನಗಳನ್ನುಪಡೆಯುವಾಗ ತೇವ ಪ್ರದೇಶವು ತನ್ನ ಲಕ್ಷಣಗಳನ್ನು ಹಾಗೆಯೇ ಉಳಿಸಿಕೊಳ್ಳುವಂತೆ ಎಚ್ಚರವಹಿಸಬೇಕು.

### ತೇವ ಭೂ ಪ್ರದೇಶಗಳ ಸಂರಕ್ಷಣೆ ಹೇಗೆ?

ರಾಂಸಾರ್ ಸಮಾವೇಶದ ಆಶಯವನ್ನು ಜಾರಿಗೆ ತರುವಲ್ಲಿ ಈ ಕೆಳಕಂಡ ನಿರ್ಣಯಗಳು ಪ್ರಮುಖ ಪಾತ್ರ ನಿರ್ವಹಿಸುತ್ತವೆ.

- ತೇವ ಪ್ರದೇಶಗಳ ಸದ್ಬಳಕೆ ಹಾಗೂ ಸಂರಕ್ಷಣೆಗಾಗಿ ಕಾರ್ಯೋನ್ಮುಖರಾಗುವುದು
- ಸೂಕ್ತ ತೇವ ಪ್ರದೇಶವನ್ನು ಗುರುತಿಸಿ ಅಂತರ್ರಾಷ್ಟ್ರೀಯ ತೇವ ಭೂಪ್ರದೇಶದ ಪರಿಧಿಯೊಳಗೆ ಪರಿಣಾಮಕಾರೀ ನಿರ್ವಹಣೆಗಾಗಿ ತರುವುದು (" ರಾಂಸರ್ ಪಟ್ಟಿ"ಗೆ ಸೇರ್ಪಡೆ ಮಾಡುವುದು).
- ಗಡಿಯಾಚೆಗಿನ ತೇವ ಪ್ರದೇಶಗಳನ್ನೂ, ವಿವಿಧ ದೇಶಗಳ ನಡುವೆ ಹಂಚಿಕೆಯಾದ ತೇವ ಪ್ರದೇಶಗಳನ್ನೂ ಹಾಗೂ ಜೀವ ಪ್ರಬೇಧಗಳನ್ನೂ ಅಂತರ್ರಾಷ್ಟ್ರೀಯ ಸಹಕಾರದಿಂದ ಸೌಹಾರ್ದಯುತವಾಗಿ ನಿರ್ವಹಿಸುವುದು.
- ಇದಷ್ಟೇ ಅಲ್ಲದೆ, ಹೊಸ ತೇವ ಪ್ರದೇಶ ನಿಯಮಾವಳಿಗಳನ್ನು ಜಾರಿಗೊಳಿಸಿ ರಾಷ್ಟ್ರೀಯ ಪರಿಸರ ಕ್ರಿಯಾ ಯೋಜನೆಗಳನ್ನುಸಿದ್ಧಪಡಿಸುವುದು, ನೀತಿ- ನಿಯಮಾವಳಿಗಳನ್ನು ಜಾರಿಗೊಳಿಸಿ ಹಾಗೂ ಸಾರ್ವಜನಿಕ ಶಿಕ್ಷಣದ ಮೂಲಕ ಎಲ್ಲರಲ್ಲೂ ಅರಿವು ಮೂಡಿಸುವುದುತವವ ಪ್ರದೇಶದ ಅಭಿವೃದ್ಧಿ ಕಾರ್ಯಕ್ರಮದ ಮೂಲಕ ತೇವ ಭೂ ಪ್ರದೇಶದ ಸಂಪನ್ಮೂಲಾಭಿವೃದ್ಧಿ, ಮೇಲ್ವಿಚಾರಣೆ, ಸಂಶೋಧನೆ, ತರಬೇತಿ, ಶಿಕ್ಷಣ ಮತ್ತು ಸಾರ್ವಜನಿಕ ಅರಿವು ಸಂರಕ್ಷಣಾ ಕಾರ್ಯದಲ್ಲಿ ಪರಿಣಾಮಕಾರಿಯಾಗಬಲ್ಲವು. ತೇವ ಪ್ರದೇಶಗಳಲ್ಲಿ ಸಮಗ್ರ ನಿರ್ವಹಣಾ ಯೋಜನೆಯನ್ನು ಅನುಷ್ಠಾನಕ್ಕೆ ತರಬೇಕು.

IAS/KAS ನಮ್ಮ ಐಎಎಸ್ ಅಕಾಡೆಮಿ ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

## 2. ಹರಿಯುವ ನದಿಯಿಂದ ವಿದ್ಯುತ್ ಉತ್ಪಾದಿಸಲು ಸಂಶೋಧನೆ

### ಪ್ರಮುಖ ಸುದ್ದಿ

- ನದಿ ಮತ್ತು ಕಾಲುವೆಗಳ ಮೇಲ್ಮೈ ನೀರಿನಿಂದ ವಿದ್ಯುತ್ ಉತ್ಪಾದಿಸುವಂತಹ ಯಂತ್ರವೊಂದರ ಪ್ರಾಥಮಿಕ ಮಾದರಿಯನ್ನು ರೂರ್ಕಿ ಐಐಟಿ ವಿಜ್ಞಾನಿಗಳು ಅಭಿವೃದ್ಧಿಪಡಿಸಿದ್ದು, ಇದನ್ನು ಪರೀಕ್ಷೆಗೆ ಒಳಪಡಿಸುತ್ತಿದ್ದಾರೆ. ಈ ಯಂತ್ರದಿಂದ ನವೀಕೃತ ಇಂಧನಕ್ಕೆ ಪರ್ಯಾಯ ಸಂಪನ್ಮೂಲ ದೊರಕುವ ಸಾಧ್ಯತೆ ಇದೆ.

### ಮುಖ್ಯ ಅಂಶಗಳು

- 'ದೆಹಲಿ ಮೂಲದ ಮ್ಯಾಕ್ಲೆಕ್ ತಂತ್ರಜ್ಞಾನ ಪ್ರಯೋಗಾಲಯದ ನೆರವಿನೊಂದಿಗೆ ಈ ಪ್ರಾಥಮಿಕ ಮಾದರಿ ತಯಾರಿಸಲಾಗಿದೆ. ಇದನ್ನು ಉತ್ತರಾಖಂಡದ ರೂರ್ಕಿಯ ಗಂಗಾ ಮೇಲ್ದಂಡೆ ಕಾಲುವೆಯಲ್ಲಿ ಪ್ರಾಯೋಗಿಕವಾಗಿ ಅಳವಡಿಸಲಾಗಿದೆ. ಈ ಕಾಲುವೆಯಲ್ಲಿ ಸಾಮಾನ್ಯವಾಗಿ ವರ್ಷವಿಡೀ ನೀರಿನ ಹರಿವು ಒಂದೇ ವೇಗದಲ್ಲಿ ಇರುತ್ತದೆ. ಹಾಗಾಗಿ ಇದು ಪ್ರಯೋಗಕ್ಕೆ

ಸೂಕ್ತವಾದ ಸ್ಥಳ. ಈ ಯಂತ್ರವನ್ನು ಮತ್ತಷ್ಟು ಸುಧಾರಿಸುವ ವಿಧಾನವನ್ನು ಕಂಡುಕೊಳ್ಳಬೇಕಿದೆ'

### ಯಾಕೆ ಈ ಸಂಶೋಧನೆ ?

- 'ಅಣೆಕಟ್ಟುಗಳಲ್ಲಿ, ಎತ್ತರದಿಂದ ಬೀಳುವ ನೀರನ್ನು ಬಳಸಿ ಟರ್ಬೈನ್‌ಗಳನ್ನು (ಹವೆಯಂತ್ರ) ತಿರುಗಿಸಿ ವಿದ್ಯುತ್ ಉತ್ಪಾದಿಸಲಾಗುತ್ತದೆ. ಆದರೆ, ಹರಿಯುತ್ತಿರುವ ನದಿಯ ವೇಗವನ್ನು ಬಳಸಿ ಟರ್ಬೈನ್‌ಗಳನ್ನು ತಿರುಗಿಸಿ ವಿದ್ಯುತ್ ಉತ್ಪಾದಿಸುವ ವಿಧಾನವನ್ನು ಸಂಶೋದಿಸುತ್ತಿದ್ದಾರೆ
- ಸಾಂಪ್ರದಾಯಿಕ ಜಲವಿದ್ಯುತ್ ಘಟಕಗಳಿಗೆ ದೊಡ್ಡ ಮಟ್ಟದ ಅಣೆಕಟ್ಟುಗಳ ಅಗತ್ಯ ಇರುತ್ತದೆ. ಇಂತಹ ಅಣೆಕಟ್ಟುಗಳ ನಿರ್ಮಾಣದಿಂದ ಪರಿಸರ ಮತ್ತು ಜೀವವೈವಿಧ್ಯಗಳ ಮೇಲೆ ಪ್ರತಿಕೂಲ ಪರಿಣಾಮಗಳಾಗುತ್ತವೆ. ಇದನ್ನು ತಡೆಗಟ್ಟುವ ಉದ್ದೇಶದಿಂದ ಎರಡು ವರ್ಷ ಸಂಶೋಧನೆ ನಡೆಸಿ ಈ ಮಾದರಿ ಯಂತ್ರ ರೂಪಿಸಲಾಗಿದೆ.
- 'ನದಿ, ಕಾಲುವೆ ದಂಡೆಗಳಲ್ಲಿ ನಿರ್ಮಿಸಲಾದ ಸಿಮೆಂಟ್ ಕಟ್ಟೆಗಳಿಗೆ ಕಟ್ಟಲಾದ ಟರ್ಬೈನ್‌ಗಳು ನದಿಯ ಮೇಲೆ ತೇಲುತ್ತವೆ. ಇವುಗಳ ಸಾಮರ್ಥ್ಯವನ್ನು ಸಾಂಪ್ರದಾಯಿಕ ಜಲವಿದ್ಯುತ್ ಘಟಕಗಳಿಗೆ ಹೋಲಿಸಲಾಗುವುದಿಲ್ಲ. ಆದರೆ ಈ ವಿಧಾನದಿಂದ ಹಲವು ಸವಾಲುಗಳನ್ನು ಎದುರಿಸಲು ಸಾಧ್ಯವಿದೆ. ಗಾಳಿ ಹಾಗೂ ಹರಿಯುವ ನೀರಿನ ವೇಗ ಒಂದೇ ಇದೆ ಎಂದು ಪರಿಗಣಿಸಿದರೆ, ಗಾಳಿಯ ವೇಗಕ್ಕಿಂತ 100 ಪಟ್ಟು ಹೆಚ್ಚು ವಿದ್ಯುತ್‌ಅನ್ನು ಹರಿಯುವ ನೀರಿನಿಂದ ಉತ್ಪಾದಿಸಬಹುದು. ಸ್ಥಳೀಯವಾಗಿ ಅವಶ್ಯವಿರುವ ವಿದ್ಯುತ್‌ಅನ್ನು, ಇಂತಹ ಸಣ್ಣ ಸಣ್ಣ ಸರಣಿ ಘಟಕಗಳಿಂದ ಉತ್ಪಾದಿಸಿಕೊಳ್ಳಬಹುದು'

## 3. ಭಾರತ ಮತ್ತು ಫಿನ್ಲ್ಯಾಂಡ್ ನಡುವೆ ಜೈವಿಕ ತಂತ್ರಜ್ಞಾನ ಕ್ಷೇತ್ರದಲ್ಲಿ ತಿಳುವಳಿಕಾ ಒಡಂಬಡಿಕೆಗೆ ಸಂಪುಟ ಅನುಮೋದನೆ

### ಪ್ರಮುಖ ಸುದ್ದಿ

- ಪ್ರಧಾನಮಂತ್ರಿ ಅವರ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಂಪುಟ ಸಭೆಯು ಭಾರತ ಮತ್ತು ಫಿನ್ಲ್ಯಾಂಡ್ ನಡುವೆ ಜೈವಿಕ ತಂತ್ರಜ್ಞಾನ ಕ್ಷೇತ್ರದಲ್ಲಿ ಪರಸ್ಪರ ಹಿತಾಸಕ್ತಿ ಆಧಾರದಲ್ಲಿ ಹೂಡಿಕೆ ಮತ್ತು ಮಹತ್ವಾಕಾಂಕ್ಷಿ ಕೈಗಾರಿಕಾ ವಲಯದಲ್ಲಿ ಅನ್ವೇಷಣೆ ಅಂತಾರಾಷ್ಟ್ರೀಯ ಯೋಜನೆಗಳನ್ನು ಸಂಶೋಧನಾ ಅಭಿವೃದ್ಧಿ ಮತ್ತು ಅನ್ವೇಷಣಾ ಆಧಾರಿತವಾಗಿ ಕೈಗೊಳ್ಳುವುದಕ್ಕೆ ಅವಕಾಶ ಒದಗಿಸುವ ಸಹಯೋಗ ಕುರಿತ ತಿಳುವಳಿಕಾ ಒಡಂಬಡಿಕೆಗೆ ಸಂಪುಟ ಅನುಮೋದನೆ.

### ಮುಖ್ಯ ಅಂಶಗಳು

### ಇದರಿಂದ ಆಗುವ ಪ್ರಯೋಜನಗಳು:

- ಈ ಎಂ.ಒ.ಯು. ಧೀರ್ಘಾವಧಿ ಸಂಶೋಧನೆ, ಅಭಿವೃದ್ಧಿ, ಮತ್ತು ಅನ್ವೇಷಣೆ ಸಹಯೋಗ ವ್ಯವಸ್ಥೆಯನ್ನು ರೂಪಿಸಲು ಮತ್ತು ಭಾರತೀಯ ಹಾಗು ಫಿನ್ಲ್ಯಾಂಡ್ ಸಂಘಟನೆಗಳ ನಡುವೆ ಸಹಕಾರದ ಜಾಲವನ್ನು ಸ್ಥಾಪಿಸಿ ಅದನ್ನು ಬಲಗೊಳಿಸಲು ಅನುಕೂಲತೆಗಳನ್ನು ಒದಗಿಸುತ್ತದೆ. ಅಂತಾರಾಷ್ಟ್ರೀಯ ಗುಣಮಟ್ಟದ, ಹಣಕಾಸು ಆವಶ್ಯಕತೆಯ ಆಧಾರದ ಮಹತ್ವಾಕಾಂಕ್ಷಿ ಜಂಟಿ ಯೋಜನೆಗಳನ್ನು ಕೈಗೊಳ್ಳುವ ಮೂಲಕ ಉಭಯ ದೇಶಗಳು ಎರಡೂ ದೇಶಗಳಿಗೆ ಲಾಭದಾಯಕವಾಗುವಂತಹ ವಿಶ್ವ ದರ್ಜೆಯ ಅನ್ವೇಷಣೆಗಳನ್ನು ಕೈಗೊಳ್ಳಲು ಇದು ನೆರವಾಗಲಿದೆ. ಇದು ಎರಡೂ ದೇಶಗಳ ವಿಜ್ಞಾನಿಗಳು, ಸಂಶೋಧಕರು ಮತ್ತು ಕೈಗಾರಿಕೋದ್ಯಮಗಳ ನಡುವೆ ಜ್ಞಾನ ವಿನಿಮಯ ಮತ್ತು ಜ್ಞಾನ ಉತ್ಪಾದನೆಗೂ ಅವಕಾಶ ಒದಗಿಸಲಿದೆ.
- ಸಹಯೋಗದಲ್ಲಿ ಅನ್ವೇಷಣೆಯನ್ನು ಗುರುತಿಸುವುದು ಮುಖ್ಯ ಮೈಲಿಗಲ್ಲಾಗಿರುತ್ತದೆ. ಡಿ.ಬಿ.ಟಿ ಮತ್ತು ಬ್ಯುಸಿನೆಸ್ ಫಿನ್ಲ್ಯಾಂಡ್ ಗಳು ಜೈವಿಕ ತಂತ್ರಜ್ಞಾನ ಕೈಗಾರಿಕಾ ಸಂಶೋಧನಾ ನೆರವು ಮಂಡಳಿ ( ಬಿ.ಐ.ಆರ್. ಎ.ಸಿ.) , ಜೈವಿಕ ತಂತ್ರಜ್ಞಾನ ಇಲಾಖೆಯ (ಡಿ.ಬಿ.ಟಿ.) ಸಾರ್ವಜನಿಕ ರಂಗದ ಉದ್ಯಮದ ಜೊತೆ ಹಣಕಾಸು ನೆರವು ಮತ್ತು ಮಹತ್ವಾಕಾಂಕ್ಷಿ ಕೈಗಾರಿಕಾ ಮುಂಚೂಣಿ ಅನ್ವೇಷಣಾ ಹಾಗು ಅಂತಾರಾಷ್ಟ್ರೀಯ ಮಟ್ಟದ ಯೋಜನೆಗಳನ್ನು ಅನುಷ್ಠಾನಿಸಲಿದೆ. ಪರಸ್ಪರ ಹಿತಾಸಕ್ತಿ ಆಧಾರದಲ್ಲಿ ಈ ಕೆಳಗಿನ ಸಂಶೋಧನಾ ಕ್ಷೇತ್ರಗಳನ್ನು ಗುರುತಿಸಲಾಗಿದೆ.

### ಅನ್ವೇಷಣಾ ಯೋಜನೆ;

- ಜೀವ ಭವಿಷ್ಯ ವೇದಿಕೆ: ಜೈವಿಕಇಂಧನ , ಜೈವಿಕ ಶಕ್ತಿ ಮತ್ತು ಜೈವಿಕ ಸಂಕುಲ ಆಧಾರಿತ ಉತ್ಪಾದನೆಗಳು
- ಜೈವಿಕ ತಂತ್ರಜ್ಞಾನದ ಪರಿಸರ ಸಂಬಂಧಿ ಮತ್ತು ಇಂಧನ ಅನ್ವಯಿಕತೆಗಳು
- ನವೋದ್ಯಮಗಳ ವ್ಯಾಪಾರಾಭಿವೃದ್ಧಿ ಮತ್ತು ಕಂಪೆನಿಗಳ ಬೆಳವಣಿಗೆ
- ಜೀವ ವಿಜ್ಞಾನಗಳಲ್ಲಿ ಶಿಕ್ಷಣ ತಂತ್ರಜ್ಞಾನಗಳು ಮತ್ತು ಆಟಗಳು.
- ಜೀವ ವಿಜ್ಞಾನ ಕೈಗಾರಿಕೆಯ ಇತರ ಕ್ಷೇತ್ರಗಳು .

### ಹಿನ್ನೆಲೆ:

- ಫಿನ್ಲ್ಯಾಂಡ್ ರಿಪಬ್ಲಿಕ್ ಸರಕಾರ ಮತ್ತು ಪ್ರಜಾಪ್ರಭುತ್ವವಾದೀ ಭಾರತ ಸರಕಾರಗಳು ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ಸಹಕಾರಕ್ಕಾಗಿ 2008 ರ ಮಾರ್ಚ್ 25 ರಂದು ಹೆಲ್ಸಿಂಕಿಯಲ್ಲಿ ಅಂಕಿತ ಹಾಕಲಾದ ಒಪ್ಪಂದದನ್ವಯ ಈ ತಿಳುವಳಿಕಾ ಒಡಂಬಡಿಕೆಗೆ ಸಹಿ ಹಾಕಲಾಗಿದೆ. ಅದರಲ್ಲಿ ಫಿನ್ಲ್ಯಾಂಡ್ ಮತ್ತು ಭಾರತೀಯ ಸಂಘಟನೆಗಳ ನಡುವೆ ಪರಸ್ಪರ ಹಿತಾಸಕ್ತಿಯ ಆಧಾರದಲ್ಲಿ ಧೀರ್ಘಾವಧಿ ಸಂಶೋಧನೆ ಮತ್ತು ಅಭಿವೃದ್ಧಿ, ಹಾಗು ಅನ್ವೇಷಣೆ (ಆರ್ ಆಂಡ್ ಡಿ ಆಂಡ್ ಐ.) ಸಹಕಾರವನ್ನು ಉತ್ತೇಜಿಸಲು ಒಪ್ಪಿ ಕೊಳ್ಳಲಾಗಿದೆ.

## 4. ಶೇ .66% ಹಿಮಾಲಯ ನಾಶ-ವರದಿ

### ಪ್ರಮುಖ ಸುದ್ದಿ

- ಇಂಟರ್‌ನ್ಯಾಷನಲ್ ಸೆಂಟರ್ ಫಾರ್ ಇಂಟಗ್ರೇಟಡ್ ಮೌಂಟೆನ್ ಡೆವಲೆಪ್‌ಮೆಂಟ್ (ಐಸಿಐಎಂಒಡಿ) ನಡೆಸಿದ ಅಧ್ಯಯನ ವರದಿಯಲ್ಲಿ, ಪ್ಯಾರಿಸ್ ಒಪ್ಪಂದದಂತೆ ಶತಮಾನದ ಅಂತ್ಯಕ್ಕೆ ಜಾಗತಿಕ ತಾಪಮಾನವನ್ನು 1.5 ಡಿಗ್ರಿಗೆ ಮಿತಿಗೊಳಿಸಿದರೂ, ಹಿಮಾಲಯದ ತಪ್ಪಲಲ್ಲಿ 2.1 ಡಿಗ್ರಿ ತಾಪಮಾನ ಹೆಚ್ಚಳಗೊಂಡು ಸುಮಾರು ಶೇ. 33 ಹಿಮಪ್ರದೇಶ ಕರಗಲಿದೆ ಎನ್ನಲಾಗಿದೆ.

### ಮುಖ್ಯ ಅಂಶಗಳು

- ಈ ವರದಿಯನ್ನು 22 ದೇಶಗಳ ನೀತಿ ತಜ್ಞರು, 350 ಸಂಶೋಧಕರು, 185 ಸಂಸ್ಥೆಗಳ ಮಾರ್ಗದರ್ಶನದಲ್ಲಿ ತಯಾರಿಸಲಾಗಿದೆ. 210 ಲೇಖಕರು, 20 ವಿಮರ್ಶಕ ಸಂಪಾದಕರು, 125 ಪರಿಶೀಲನಾ ತಜ್ಞರು ಹಿಮಾಲಯದ ವಿವಿಧ ಭಾಗಗಳ ಜನರು, ಪರಿಸರ ಮತ್ತು ಜೀವವೈವಿಧ್ಯತೆ ಬಗ್ಗೆ ಐದು ವರ್ಷಗಳವರೆಗೆ ವಿಸ್ತೃತ ಅಧ್ಯಯನ ನಡೆಸಿ ವರದಿ ಸಿದ್ಧಪಡಿಸಿದ್ದಾರೆ.
- ಜಮ್ಮು ಮತ್ತು ಕಾಶ್ಮೀರದಿಂದ ಅರುಣಾಚಲ ಪ್ರದೇಶವರೆಗಿನ 2500 ಕೀ.ಮೀ. ಪ್ರದೇಶವನ್ನು ಹಿಮಾಲಯ ಎಂದು ಪರಿಗಣಿಸಲಾಗುತ್ತದೆ. ಲಡಾಖ್ ಮತ್ತು ಹಿಮಾಚಲ ಪ್ರದೇಶದ ಲಾಹೌಲ್ ಮತ್ತು ಸ್ಪಿತಿ ಕೂಡ ಹಿಮಾಲಯವೆಂದು ಕರೆಸಿಕೊಳ್ಳುತ್ತದೆ.

### ಇದಕ್ಕೆ ಕಾರಣವೇನು ?

- ಜಾಗತಿಕ ಪರಿಸರ ಸುಧಾರಣೆಗೆ ಪ್ರಸ್ತುತ ಹಲವು ದೇಶಗಳು ತೋರಿಸುತ್ತಿರುವ ನಿರ್ಲಕ್ಷ್ಯದ ಪರಿಣಾಮ ಈಗಿನಂತೆ ಪಳೆಯುಳಿಕೆ ಇಂಧನ ಉರಿಸುವುದು ಮತ್ತು ಇಂಗಾಲದ ಡೈ ಆಕ್ಸೈಡ್ ಉಗುಳುವಿಕೆ ಹೆಚ್ಚುತ್ತಿದ್ದರೆ 2100ರೊಳಗೆ ಶೇ. 66 ಹಿಮಾಲಯ ಪ್ರದೇಶ ಕರಗಿ ಹೋಗಲಿದೆ ಎಂದು ವರದಿಯಲ್ಲಿ ಆತಂಕ ವ್ಯಕ್ತವಾಗಿದೆ.

### ಇದರಿಂದ ಬೀರುವ ಪರಿಣಾಮ

- ಕಳೆದ 150 ವರ್ಷಗಳಲ್ಲಿ 2014ರಿಂದ 2023ರವರೆಗಿನ ಕಾಲಾವಧಿ ಅತ್ಯಧಿಕ ತಾಪಮಾನದ ವರ್ಷಗಳು ಎಂದು ಕರೆಸಿಕೊಳ್ಳಲಿವೆ ಎಂದು ಬ್ರಿಟನ್‌ನ ಹವಾಮಾನ ಇಲಾಖೆ ಹೇಳಿದೆ. ಮುಂದಿನ ಐದು ವರ್ಷಗಳಲ್ಲಿ ಜಾಗತಿಕ ತಾಪಮಾನ 1 ಡಿಗ್ರಿ ಸೆಲ್ಸಿಯಸ್ ಏರಿಕೆ ಕಾಣುವುದು ಖಚಿತ. ಗರಿಷ್ಠ 5 ಡಿಗ್ರಿವರೆಗೂ ಹೆಚ್ಚಳವಾಗಬಹುದು ಎಂದು ದೀರ್ಘಾವಧಿ ಹವಾಮಾನ ಮುನ್ಸೂಚನೆ

### ಪ್ಯಾರಿಸ್ ಒಪ್ಪಂದದ ಬಗ್ಗೆ

- ಹವಾಮಾನ ಬದಲಾವಣೆಯನ್ನು ಎದುರಿಸಲು ಪ್ಯಾರಿಸ್ ಒಪ್ಪಂದವು ಅಂತಾರಾಷ್ಟ್ರೀಯ ಒಪ್ಪಂದವಾಗಿದೆ.
- ನವೆಂಬರ್ 30 ರಿಂದ ಡಿಸೆಂಬರ್ 11 ರ ವರೆಗೆ, ಪ್ಯಾರಿಸ್, ಫ್ರಾನ್ಸ್‌ನಲ್ಲಿ 195 ರಾಷ್ಟ್ರಗಳ ಸರ್ಕಾರಗಳು ಒಟ್ಟುಗೂಡಿದರು ಮತ್ತು ಜಾಗತಿಕ ಹಸಿರುಮನೆ ಅನಿಲ ಹೊರಸೂಸುವಿಕೆಯನ್ನು

ಕಡಿಮೆಗೊಳಿಸುವ ಉದ್ದೇಶದಿಂದ ವಾತಾವರಣ ಬದಲಾವಣೆಯ ಮೇಲೆ ಸಂಭವನೀಯ ಹೊಸ ಜಾಗತಿಕ ಒಪ್ಪಂದವನ್ನು ಚರ್ಚಿಸಿ ಅಪಾಯಕಾರಿ ಹವಾಮಾನ ಬದಲಾವಣೆಯ ಬೆದರಿಕೆಯನ್ನು ಕಡಿಮೆ ಮಾಡಿತು.

- 29-ಪುಟಗಳೊಂದಿಗಿನ 32-ಪುಟ ಪ್ಯಾರಿಸ್ ಒಪ್ಪಂದವು ಜಾಗತಿಕ ತಾಪಮಾನ ಏರಿಕೆಯಿಂದಾಗಿ ಒಂದು ಐತಿಹಾಸಿಕ ಒಪ್ಪಂದವೆಂದು ಗುರುತಿಸಲ್ಪಟ್ಟಿದೆ.

### ಪ್ಯಾರಿಸ್ ಒಪ್ಪಂದದ ಗುರಿಗಳು

- ಈ ಶತಮಾನದ ಜಾಗತಿಕ ಉಷ್ಣತೆಯು ಕೈಗಾರಿಕಾ ಮಟ್ಟಕ್ಕಿಂತ ಮೊದಲು 2 ಡಿಗ್ರಿ ಸೆಲ್ಸಿಯಸ್ಗಿಂತ ಕಡಿಮೆ ಮಾಡುವುದು .
- 5 ಡಿಗ್ರಿ ಸೆಲ್ಸಿಯಸ್ಗೆ ಹೆಚ್ಚಾಗಲು ತಾಪಮಾನವನ್ನು ಮಿತಿಗೊಳಿಸಲು ಪ್ರಯತ್ನಗಳನ್ನು ಮುಂದುವರಿಸುವುದು .
- ಹವಾಮಾನ ಬದಲಾವಣೆಯ ಪರಿಣಾಮಗಳನ್ನು ಎದುರಿಸಲು ರಾಷ್ಟ್ರಗಳ ಸಾಮರ್ಥ್ಯವನ್ನು ಬಲಪಡಿಸುವುದು.

## 5. ಏಷ್ಯಾಟಿಕ್ ಸಿಂಹ ಸಂರಕ್ಷಣಾ ಯೋಜನೆ

### ಪ್ರಮುಖ ಸುದ್ದಿ

- ಗುಜರಾತ್‌ನ ಗಿರ್ ರಾಷ್ಟ್ರೀಯ ಅಭಯಾರಣ್ಯದಲ್ಲಿ ಕಂಡುಬರುವ ಏಷ್ಯಾಟಿಕ್ ಸಿಂಹಗಳ ರಕ್ಷಣೆಗೆ ಕೇಂದ್ರ ಸರ್ಕಾರ ಮತ್ತು ಗುಜರಾತ್ ಮುಂದಾಗಿವೆ.
- ಇದಕ್ಕಾಗಿ 85 ಕೋಟಿ ವೆಚ್ಚದಲ್ಲಿ ಏಷ್ಯಾಟಿಕ್ ಸಿಂಹಗಳ ಸಂರಕ್ಷಣಾ ಯೋಜನೆಯನ್ನು ಘೋಷಿಸಿವೆ.

### ಮುಖ್ಯ ಅಂಶಗಳು

### ಏನಿದು ಏಷ್ಯಾಟಿಕ್ ಸಿಂಹ ಸಂರಕ್ಷಣಾ ಯೋಜನೆ ?

- ಯೋಜನೆಯಂತೆ, ಗಿರ್ ಅರಣ್ಯದಲ್ಲಿ ಸಿಂಹಗಳ ರಕ್ಷಣೆಗೆ ಅತ್ಯಾಧುನಿಕ ಸಂವಹನ ಸಾಧನಗಳು ಬಳಸಲಾಗುತ್ತದೆ.
- ಗಿರ್ ಅರಣ್ಯ ಪ್ರದೇಶದಲ್ಲಿ ವಾಹನಗಳು ಹಾಗೂ ಪ್ರಾಣಿಗಳ ಪತ್ತೆಗೆ ಜಿಪಿಎಸ್ ಆಧಾರಿತ ವ್ಯವಸ್ಥೆ ಒದಗಿಸಲಾಗುತ್ತದೆ.
- ಅತ್ಯಾಧುನಿಕ ಸೌಕರ್ಯಗಳನ್ನು ಒಳಗೊಂಡ ವೆಟರ್ನರಿ ಸಂಸ್ಥೆ ಲಯನ್ ಆಂಬುಲೆನ್ಸ್ ಮತ್ತು ಸಾಕಷ್ಟು ಪ್ರಮಾಣದಲ್ಲಿ ಅಗತ್ಯ ಔಷಧ ಪೂರೈಕೆ ಒಳಗೊಂಡಿರಲಿದೆ.
- ಗಿರ್ ಅರಣ್ಯದಲ್ಲಿ ಸಿಂಹಗಳಿಗೆ ಸಾಕಷ್ಟು ಪ್ರಮಾಣದಲ್ಲಿ ನೀರು ದೊರೆಯುವಂತೆ ಮಾಡಲು ಕ್ರಮಕೈಗೊಳ್ಳಲಿದೆ.

- ಗುಜರಾತ್ ಸರ್ಕಾರ ಗಿರ್ ಅಭಯಾರಣ್ಯ ಪ್ರದೇಶವನ್ನು ವಿಸ್ತರಿಸಿ ಗ್ರೇಟರ್ ಗಿರ್ ಎಂದು ನಾಮಕರಣ ಮಾಡಲಿದೆ.
- ಗ್ರೇಟರ್ ಗಿರ್ ಅರಣ್ಯದಲ್ಲಿ ವನ್ಯ ಪ್ರಾಣಿಗಳ ಬೇಟೆಗಾರರ ವಿರುದ್ಧ ಕಾರ್ಯಾಚರಣೆಗೆ ಪ್ರತ್ಯೇಕ ಟಾಸ್ಕ್ ಫೋರ್ಸ್ ಸ್ಥಾಪಿಸಲಾಗುತ್ತದೆ.

**ಈ ಯೋಜನೆ ಜಾರಿಗೆ ಗೊಳಿಸಲು ಕಾರಣವೇನು ?**

- ಗಿರ್ ಅರಣ್ಯಪ್ರದೇಶದಲ್ಲಿ ಸಿಂಹಗಳ ಸಂಖ್ಯೆ ಅಧಿಕವಾಗಿ ಜನವಸತಿ ಪದೇಶಗಳ ಪ್ರಾಣಿಗಳ ಮೇಲೆ ದಾಳಿ ಮಾಡುತ್ತಿದ್ದವು.
- ಅಪಾಯಕಾರಿ ವೈರಸ್‌ಗಳು ಸಿಂಹಗಳಿಗೆ ಹಬ್ಬಿ ಸಾಕಷ್ಟು ಸಿಂಹಗಳು ಮೃತಪಟ್ಟಿದ್ದವು. ಇದನ್ನು ಗಮನಿಸಿದ ಸುಪ್ರೀಂ ಕೋರ್ಟ್ ಕೆಲವು ಸಿಂಹಗಳನ್ನು ಮಧ್ಯಪ್ರದೇಶದ ಕುನೊ ಪಾಲ್ಪುರ್ ರಕ್ಷಿತ ಪ್ರದೇಶಕ್ಕೆ ಸ್ಥಳಾಂತರಿ ಸುವಂತೆ ಸುಪ್ರೀಂ ಕೋರ್ಟ್ 2013 ರಲ್ಲೇ ಸೂಚಿಸಿತ್ತು.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

## SCIENCE AND TECHNOLOGY

### 1. ಹಬಲ್ ಸ್ಪೇಸ್ ಟೆಲಿಸ್ಕೋಪ್

**ಪ್ರಮುಖ ಸುದ್ದಿ**

- ಹಬಲ್ ಸ್ಪೇಸ್ ಟೆಲಿಸ್ಕೋಪ್ ಅನ್ನು ಬಳಸಿಕೊಂಡು ಖಗೋಳಶಾಸ್ತ್ರಜ್ಞರು ಕುಬ್ಜ ನಕ್ಷತ್ರಪುಂಜವನ್ನು ಗೋಳಾಕಾರದ ಕ್ಲಸ್ಟರ್ ನಲ್ಲಿ ಕಂಡುಹಿಡಿದಿದ್ದಾರೆ, ಅದು ಕೇವಲ 30 ಮಿಲಿಯನ್ ಬೆಳಕಿನ-ವರ್ಷಗಳ ದೂರದಲ್ಲಿದೆ.

ಮುಖ್ಯ ಅಂಶಗಳು

ಹಬಲ್ ಸ್ಪೇಸ್ ಟೆಲಿಸ್ಕೋಪ್ ಬಗ್ಗೆ

- ದಿ ಹಬಲ್ ಸ್ಪೇಸ್ ಟೆಲಿಸ್ಕೋಪ್ ( ಎಚ್‌ಎಸ್ಟಿ ) 1990 ರಲ್ಲಿ ಕಡಿಮೆ ಭೂ ಕಕ್ಷೆಗೆ ಪ್ರಾರಂಭವಾದ ಬಾಹ್ಯಾಕಾಶ ದೂರದರ್ಶಕ ಮತ್ತು ಕಾರ್ಯಾಚರಣೆಯಲ್ಲಿ ಉಳಿದಿದೆ.
- ಮೊದಲನೆಯ ಬಾಹ್ಯಾಕಾಶ ದೂರದರ್ಶಕವಲ್ಲವಾದರೂ , ಹಬಲ್ ಅತಿದೊಡ್ಡ ಮತ್ತು ಅತ್ಯಂತ ಬಹುಮುಖವಾದದ್ದು ಮತ್ತು ಖಗೋಳಶಾಸ್ತ್ರಕ್ಕೆ ಸಾರ್ವಜನಿಕ ಸಂಬಂಧಗಳ ವರಮಾನದ ಒಂದು ಪ್ರಮುಖ ಸಂಶೋಧನಾ ಸಾಧನವೆಂದು ಹೆಸರುವಾಸಿಯಾಗಿದೆ.
- ಎಚ್‌ಎಸ್ಟಿಗೆ ಖಗೋಳವಿಜ್ಞಾನಿ ಎಡ್ವಿನ್ ಹಬಲ್ ಹೆಸರನ್ನಿಡಲಾಗಿದೆ, ಮತ್ತು ಕಾಂಪ್ಟನ್ ಗಾಮಾ ರೇ ಅಬ್ಸರ್ವೇಟರಿ , ಚಂದ್ರ ಎಕ್ಸರೆ ಅಬ್ಸರ್ವೇಟರಿ , ಮತ್ತು ಸ್ಪಿಟ್ಜರ್ ಬಾಹ್ಯಾಕಾಶ ಟೆಲಿಸ್ಕೋಪ್ ಜೊತೆಗೆ ನಾಸಾದ ಗ್ರೇಟ್ ಅಬ್ಸರ್ವೇಟರೀಸ್ ಗಳಲ್ಲಿ ಒಂದಾಗಿದೆ.

## 2. ಉತ್ತರ ಧ್ರುವಕ್ಕೂ ಹಬ್ಬಿದ ಸೂಪರ್‌ಬಗ್

ಪ್ರಮುಖ ಸುದ್ದಿ

- ದಿಲ್ಲಿಯಲ್ಲಿ ಸುಮಾರು ಹತ್ತು ವರ್ಷಗಳ ಮಾರಣಾಂತಿಕ ಬ್ಯಾಕ್ಟೀರಿಯಾ 'ಸೂಪರ್ ಬಗ್ ' ಪತ್ತೆಯಾಗಿ ಆತಂಕ ಸೃಷ್ಟಿಸಿತ್ತು. ಇದೀಗ ಈ ಸೂಪರ್ ಬಗ್ ಉತ್ತರ ಧ್ರುವದ ಆರ್ಕ್ಟಿಕ್ ಗೂ ಹಬ್ಬಿದೆ ಎಂದು ವಿಜ್ಞಾನಿಗಳು ಮಾಹಿತಿ ನೀಡಿದ್ದಾರೆ.

ಮುಖ್ಯ ಅಂಶಗಳು

- ಯಾವುದೇ ಔಷಧಿಯಿಂದಲೂ ತಡೆಯಲಾದಂತಹ, ಎಂದಿಗೂ ವಾಸಿಯಾಗದ ಕಾಯಿಲೆಗೆ ಸೂಪರ್‌ಬಗ್‌ಗಳು ಕಾರಣವಾಗುತ್ತವೆ.
- ಪ್ರಾಣಿಗಳು ಮತ್ತು ಮನುಷ್ಯರ ಕರುಳಿನ ಭಾಗದಲ್ಲಿ ಈ ಸೂಪರ್ ಬಗ್ ಪತ್ತೆಯಾಗಿದೆ.
- ಆರ್ಕ್ಟಿಕ್‌ಗೆ ಭೇಟಿ ನೀಡಿದ ಮಾನವರು, ಪ್ರಾಣಿಪಕ್ಷಿಗಳ ಮೂಲಕ ಇದು ಹರಡಿರಬಹುದು ಎಂದು ವಿಜ್ಞಾನಿಗಳು ಹೇಳಿದ್ದಾರೆ.
- ಆರ್ಕ್ಟಿಕ್‌ನಂತಹ ಧ್ರುವ ಪ್ರದೇಶಗಳು ಭೂಮಿಯ ಮೇಲಿನ ಅತಿಪ್ರಾಚೀನವಾದ ಪರಿಸರ ವ್ಯವಸ್ಥೆ ಹೊಂದಿರುವ ಪ್ರದೇಶಗಳಾಗಿರುತ್ತವೆ.
- ಇಲ್ಲಿಯೂ ಸೂಪರ್ ಬಗ್ ಗಳು ಪತ್ತೆಯಾಗಿರುವುದು ಜಗತ್ತಿನ ಮಾಲಿನ್ಯ ಎಷ್ಟು ಹೆಚ್ಚಾಗಿದೆ ಎನ್ನುವುದನ್ನು ಸೂಚಿಸುತ್ತದೆ

ಏನಿದು ಸೂಪರ್ ಬಗ್ ?

- ಸೂಪರ್ ಬಗ್' ಬ್ಯಾಕ್ಟೀರಿಯಾಗಳು ದೇಹದಲ್ಲಿ ಚಿಕಿತ್ಸೆ ನೀಡಲು ಕ್ಲಿಷ್ಟಕರವೆನಿಸುವಂಥ ಆರೋಗ್ಯ ಸಮಸ್ಯೆಗಳನ್ನು ಸೃಷ್ಟಿಸುತ್ತವೆ. ಸದ್ಯಕ್ಕೆ ಲಭ್ಯವಿರುವ ಯಾವುದೇ ರೋಗನಿರೋಧಕ ಔಷಧಿಗಳಿಂದ (ಆ್ಯಂಟಿ ಬಯಾಟಿಕ್) ಇವುಗಳ ನಿಯಂತ್ರಣ ಸಾಧ್ಯವಿಲ್ಲ.

## 3. ಜಿಸ್ಯಾಟ್–31 ಸಂಪರ್ಕ ಉಪಗ್ರಹ ಉಡಾವಣೆ ಯಶಸ್ವಿ

### ಪ್ರಮುಖ ಸುದ್ದಿ

- ಭಾರತದ ಅತ್ಯಾಧುನಿಕ ಸಂಪರ್ಕ ಉಪಗ್ರಹ ಜಿಸ್ಯಾಟ್–31 ಅನ್ನು ಫ್ರೆಂಚ್ ಗಯಾನದಿಂದ ಯಶಸ್ವಿಯಾಗಿ ಉಡಾವಣೆ ಮಾಡಲಾಯಿತು.

### ಮುಖ್ಯ ಅಂಶಗಳು

- ದಕ್ಷಿಣ ಅಮೆರಿಕದ ಕೈರೊದ ಉಡಾವಣಾ ಕೇಂದ್ರದಿಂದ ಉಡ್ಡಯನ ಮಾಡಲಾದ ಏರಿಯಾನ್–5 ರಾಕೆಟ್ ಮೂಲಕ ಉಪಹಗ್ರವು ನಿಗದಿತ ಕಕ್ಷೆಗೆ ಸೇರಿತು.
- 15 ವರ್ಷಗಳ ಕಾಲ ಸೇವೆಗೆ ಲಭ್ಯವಿರುವ ಕೆಯು ಬ್ಯಾಂಡ್ ಟ್ರಾನ್ಸ್‌ಪಾಂಡರ್‌ಗಳನ್ನು ಹೊಂದಿರುವ ಈ ಉಪಗ್ರಹದ ಉಡಾವಣೆಯಿಂದ ಮುಂದಿನ ದಿನಗಳಲ್ಲಿ ಡಿಟಿಎಚ್ ದೂರವಾಣಿ ಸೇವೆಗಳಿಗೆ, ಎಟಿಎಂಗಳು, ಷೇರು ವಿನಿಮಯ ಕೇಂದ್ರಗಳ ನಡುವಿನ ಸಂಪರ್ಕ ಜಾಲ ಸುಧಾರಣೆಗೆ ಭಾರಿ ಅನುಕೂಲವಾಗಲಿದೆ. ಡಿಜಿಟಲ್ ಸ್ಯಾಟಲೈಟ್ ನ್ಯೂಸ್ ಮತ್ತು ಇ-ಗವರ್ನೆನ್ಸ್ ಅಪ್ಲಿಕೇಷನ್‌ಗಳ ಬಳಕೆಗೂ ದೊಡ್ಡ ಮಟ್ಟದ ಕೊಡುಗೆ ಸಲ್ಲಿಸಲಿದೆ.
- ಅಲ್ಲದೇ, ಅರಬ್ಬಿ ಸಮುದ್ರ, ಬಂಗಾಳ ಕೊಲ್ಲಿ, ಹಿಂದೂ ಮಹಾಸಾಗರದಲ್ಲಿ ವೈಡ್ ಬ್ಯಾಂಡ್ ಟ್ರಾನ್ಸ್‌ಪಾಂಡರ್ ಬಳಕೆ ಮೂಲಕ ಸಂವಹನ ಸೌಲಭ್ಯ ಕಲ್ಪಿಸಲಿದೆ ಎಂದು ಇಸ್ರೊ ತಿಳಿಸಿದೆ.
- ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ಇಸ್ರೊ ನಿರ್ಮಿಸಿರುವ 40ನೇ ಸಂಪರ್ಕ ಉಪಗ್ರಹ ಇದಾಗಿದೆ.
- ಸದ್ಯದಲ್ಲೇ ನಿವೃತ್ತಿಯಾಗಲಿರುವ ಕೆಲವು ಸಂಪರ್ಕ ಉಪಗ್ರಹಗಳ ಸ್ಥಾನವನ್ನು ಕೆಯು–ಬ್ಯಾಂಡ್ ಹೊಂದಿರುವ ಈ ಶಕ್ತಿಶಾಲಿ ಸಂಪರ್ಕ ಉಪಗ್ರಹ ತುಂಬಲಿದೆ.

## 4. ರಾಷ್ಟ್ರೀಯ ಆಹಾರ ತಂತ್ರಜ್ಞಾನ, ಉದ್ಯಮಶೀಲತೆ ಮತ್ತು ಪ್ರಬಂದನ ಸಂಸ್ಥೆ (ಎನ್ ಐ ಎಫ್ ಟಿ ಇ ಎಮ್) ಮಸೂದೆ,2019

### ಪ್ರಮುಖ ಸುದ್ದಿ

- ಪ್ರಧಾನ ಮಂತ್ರಿ ಅವರ ನೇತೃತ್ವದ ಕೇಂದ್ರ ಸಚಿವ ಸಂಪುಟವು ರಾಷ್ಟ್ರೀಯ ಆಹಾರ ತಂತ್ರಜ್ಞಾನ, ಉದ್ಯಮಶೀಲತೆ ಮತ್ತು ಪ್ರಬಂಧನ ಸಂಸ್ಥೆ (ಎನ್ ಐ ಎಫ್ ಟಿ ಇ ಎಮ್) ಮಸೂದೆ, 2019 ರ ಪರಿಚಯವನ್ನು ಅನುಮೋದಿಸಿತು.

### ಮುಖ್ಯ ಅಂಶಗಳು

- ಹರಿಯಾಣ ರಾಜ್ಯದ ಕುಂಡ್ಲಿಯಲ್ಲಿರುವ ರಾಷ್ಟ್ರೀಯ ಆಹಾರ ತಂತ್ರಜ್ಞಾನ, ಉದ್ಯಮಶೀಲತೆ ಮತ್ತು ಪ್ರಬಂಧನ ಸಂಸ್ಥೆ (ಎನ್ ಐ ಎಫ್ ಟಿ ಇ ಎಮ್) ಮತ್ತು ತಮಿಳುನಾಡಿನ ತಂಜಾವೂರಿನಲ್ಲಿರುವ ರಾಷ್ಟ್ರೀಯ ಆಹಾರ ಸಂಸ್ಕರಣಾ ತಂತ್ರಜ್ಞಾನ ಸಂಸ್ಥೆಗಳಿಗೆ ರಾಷ್ಟ್ರೀಯ ಪ್ರಾಮುಖ್ಯತೆಯ ಸಂಸ್ಥೆಗಳ ಸ್ಥಾನವನ್ನು ನೀಡುವ ಉದ್ದೇಶ ಈ ಮಸೂದೆಯದಾಗಿದೆ.

### ಇದರಿಂದ ಆಗುವ ಪ್ರಯೋಜನಗಳು:

- ಶಿಕ್ಷಣದ ಕೋರ್ಸ್ಗಳನ್ನು ವಿನ್ಯಾಸಗೊಳಿಸಲು ಮತ್ತು ಅಭಿವೃದ್ಧಿಗೊಳಿಸುವ ಸಂಸ್ಥೆಗಳಿಗೆ ಕ್ರಿಯಾತ್ಮಕ ಸ್ವಾಯತ್ತತೆ ನೀಡಲು, ಸಂಶೋಧನಾ ಚಟುವಟಿಕೆಗಳನ್ನು ಮತ್ತು ಅವರ ಶೈಕ್ಷಣಿಕ ಅನ್ವೇಷಣೆಗಳನ್ನು ಕೈಗೊಳ್ಳಲು ಹೆಚ್ಚಿನ ಅಧಿಕಾರವನ್ನು ನೀಡಲು ಈ ಶಾಸನ ನೆರವಾಗಲಿದೆ, ಇದರಿಂದಾಗಿ ಈ ಸಂಸ್ಥೆಗಳು ವಿಶ್ವ ದರ್ಜೆಯ ಸಂಸ್ಥೆಗಳಾಗುತ್ತವೆ.
- ಈ ಸಂಸ್ಥೆಯು ಸರಕಾರದ ಮೀಸಲಾತಿ ನೀತಿಯನ್ನು ಜಾರಿಗೊಳಿಸುತ್ತದೆ ಮತ್ತು ಸಂಬಂಧಪಟ್ಟವರ ಪ್ರಯೋಜನಕ್ಕಾಗಿ ವಿಶೇಷ ಚಟುವಟಿಕೆಗಳನ್ನು ಸಹ ಕೈಗೊಳ್ಳಲಿದೆ. ನವೀನ ಪದ್ಧತಿಗಳನ್ನು ಅಳವಡಿಸಿಕೊಳ್ಳುವುದರ ಮೂಲಕ ವಿಶ್ವ ದರ್ಜೆಯ ಬೋಧನೆ ಮತ್ತು ಸಂಶೋಧನಾ ಅನುಭವವನ್ನು ಒದಗಿಸುವ ಸಂಸ್ಥೆಗಳಿಗೆ ಇದು ಸಹಾಯ ಮಾಡುತ್ತದೆ.

## 5. ಭಾರತ ಮತ್ತು ಬ್ರೆಜಿಲ್ ನಡುವೆ ತಿಳಿವಳಿಕೆ ಒಪ್ಪಂದಕ್ಕೆ ಸಂಪುಟದ ಅನುಮೋದನೆ

### ಪ್ರಮುಖ ಸುದ್ದಿ

- ಪ್ರಧಾನಮಂತ್ರಿ ಅವರ ಅಧ್ಯಕ್ಷತೆಯಲ್ಲಿಂದು ನಡೆದ ಕೇಂದ್ರ ಸಚಿವ ಸಂಪುಟ ಸಭೆ, ಸಾಂಪ್ರದಾಯಿಕ ವೈದ್ಯ ಪದ್ಧತಿ ಮತ್ತು ಹೋಮಿಯೋಪಥಿ ಕ್ಷೇತ್ರದಲ್ಲಿನ ಸಹಕಾರಕ್ಕಾಗಿ ಭಾರತ ಮತ್ತು ಬ್ರೆಜಿಲ್ ನಡುವಿನ ತಿಳಿವಳಿಕೆ ಒಪ್ಪಂದಕ್ಕೆ ತನ್ನ ಅನುಮೋದನೆ ನೀಡಿದೆ.

### ಮುಖ್ಯ ಅಂಶಗಳು

### ಪ್ರಯೋಜನಗಳು:

- ಈ ತಿಳಿವಳಿಕೆ ಒಪ್ಪಂದವು ಭಾರತ ಮತ್ತು ಬ್ರೆಜಿಲ್ ನಡುವೆ ಸಾಂಪ್ರದಾಯಿಕ ವೈದ್ಯ ಪದ್ಧತಿ ಕ್ಷೇತ್ರದಲ್ಲಿನ ದ್ವಿಪಕ್ಷೀಯ ಸಹಕಾರವನ್ನು ಹೆಚ್ಚಿಸಲಿದೆ. ಎರಡೂ ದೇಶಗಳ ನಡುವಿನ ಹಂಚಿಕೆಯ ಸಾಂಸ್ಕೃತಿಕ ಪರಂಪರೆಯನ್ನು ಪರಿಗಣಿಸಿದಾಗ ಇದು ಪರಸ್ಪರರಿಗೆ ಅತಿ ಮಹತ್ವದ್ದಾಗಿದೆ.

### ಹಿನ್ನೆಲೆ:

- ಭಾರತವು ಔಷಧೀಯ ಸಸ್ಯಗಳೂ ಸೇರಿದಂತೆ ಸಂಪೂರ್ಣ ಅಭಿವೃದ್ಧಿ ಹೊಂದಿದ ಸಾಂಪ್ರದಾಯಿಕ ವೈದ್ಯ ಪದ್ಧತಿಗಳಿಂದ ಹರಸಲ್ಪಟ್ಟಿದ್ದು, ಇದು ಜಾಗತಿಕ ಆರೋಗ್ಯ ಸನ್ನಿವೇಶದಲ್ಲಿ ಅದ್ಭುತ ಸಾಮರ್ಥ್ಯವನ್ನು ಹೊಂದಿದೆ. ಭಾರತ ಮತ್ತು ಬ್ರೆಜಿಲ್ ಅತ್ಯಂತ ಆಪ್ತ ಮತ್ತು ಬಹುಮುಖಿ ಬಾಂಧವ್ಯವನ್ನು ದ್ವಿಪಕ್ಷೀಯ ಮತ್ತು ಬಹುಪಕ್ಷೀಯ ಮಟ್ಟದಲ್ಲಿ ಅಂದರೆ, ಬ್ರಿಕ್ಸ್,

ಬಿ.ಎ.ಎಸ್.ಐ.ಸಿ., ಜಿ-20, ಜಿ-4, ಬಿ.ಎಸ್.ಎ ಮತ್ತು ಬೃಹತ್ ಬಹುಪಕ್ಷೀಯ ಕಾಯಗಳು ಅಂದರೆ ವಿಶ್ವಸಂಸ್ಥೆ, ಡಬ್ಲ್ಯುಟಿಓ, ಯುನೆಸ್ಕೋ ಮತ್ತು ಡಬ್ಲ್ಯು.ಎಚ್.ಓ.ಗಳಲ್ಲಿ ಹಂಚಿಕೊಂಡಿವೆ. ಇಡೀ ಲ್ಯಾಟಿನ್ ಅಮೆರಿಕಾದಲ್ಲಿ ಮತ್ತು ಕೆರೇಬಿಯನ್ ವಲಯದಲ್ಲಿ ಬ್ರೆಜಿಲ್ ಭಾರತದ ಅತಿ ಮಹತ್ವದ ವಾಣಿಜ್ಯ ಪಾಲುದಾರ ರಾಷ್ಟ್ರಗಳಲ್ಲಿ ಒಂದಾಗಿದೆ.

- ಭಾರತ ಮತ್ತು ಬ್ರೆಜಿಲ್ ಗಳೆರಡೂ ಸಾಂಪ್ರದಾಯಿಕ ಔಷಧ ಬಳಕೆಯ ಇತಿಹಾಸದಲ್ಲಿ ಮತ್ತು ಔಷಧೀಯ ಸಸ್ಯಗಳ ಆಧಾರದ ಆರೋಗ್ಯ ರೂಢಿಗಳಲ್ಲಿ ಶ್ರೀಮಂತ ಜೀವ ವೈವಿಧ್ಯತೆಯ ಬೃಹತ್ ಶ್ರೇಣಿಯನ್ನು ಹೊಂದಿವೆ. ಆಯುರ್ವೇದ, ಯೋಗ ಮತ್ತು ಇತರ ಸಾಂಪ್ರದಾಯಿಕ ಪದ್ಧತಿಗಳು ಬ್ರೆಜಿಲ್ ನಲ್ಲಿ ಜನಪ್ರಿಯವಾಗಿವೆ.

## 6. ಬ್ಲಾಕ್ ಬಾಕ್ಸ್

### ಬ್ಲಾಕ್ ಬಾಕ್ಸ್ ಎಂದರೇನು?

- ವಿಮಾನದ ಯಾವುದೇ ಎಲೆಕ್ಟ್ರಾನಿಕ್ ವ್ಯವಸ್ಥೆಗೆ ಕಳುಹಿಸುವ ಪ್ರತಿ ಸಂದೇಶವನ್ನು ದಾಖಲಿಸಿಕೊಳ್ಳುವ ಎಲೆಕ್ಟ್ರಾನಿಕ್ ಉಪಕರಣವನ್ನು ಬ್ಲಾಕ್ ಬಾಕ್ಸ್ ಎನ್ನುತ್ತಾರೆ.
- ಆಸ್ಟ್ರೇಲಿಯಾದ ವಿಜ್ಞಾನಿ ಡೇವಿಡ್ ವಾರನ್ ಇದನ್ನು ಅಭಿವೃದ್ಧಿಪಡಿಸಿದರು.

### ಎಷ್ಟು ಬ್ಲಾಕ್ ಬಾಕ್ಸ್‌ಗಳಿರುತ್ತವೆ?

- ಪ್ರಯಾಣಿಕರ ವಿಮಾನಗಳಲ್ಲಿ ಎರಡು ಬ್ಲಾಕ್ ಬಾಕ್ಸ್ ಗಳು ಇರುತ್ತವೆ.
- ಒಂದು ಬ್ಲಾಕ್ ಬಾಕ್ಸ್ ನಲ್ಲಿ ವಿಮಾನ ಹಾರಾಟಕ್ಕೆ ಸಂಬಂಧಿಸಿದ ಮಾಹಿತಿ ಸಂಗ್ರಹವಾಗುತ್ತದೆ. ವಿಮಾನದ ವೇಗ, ಹಾರುತ್ತಿರುವ ದಿಕ್ಕು, ಎತ್ತರ ಮೊದಲಾದ ಸಂಗತಿಗಳು ಅದರಲ್ಲಿ ದಾಖಲಾಗುತ್ತೆ.
- ಇನ್ನೊಂದು ಬ್ಲಾಕ್ ಬಾಕ್ಸ್ ನಲ್ಲಿ ಕಾಕ್‌ಪಿಟ್ ಧ್ವನಿಮುದ್ರಣ ಸಾಧನ ಇರುತ್ತದೆ. ಪೈಲಟ್‌ಗಳು , ವಿಮಾನದ ಸಿಬ್ಬಂದಿ ಹಾಗೂ ದುಷ್ಕರ್ಮಿಗಳು ಏನು ಧ್ವನಿಮುದ್ರಿಸಿದರೂ ಅದೆಲ್ಲವೂ ಅದರಲ್ಲಿ ಅಡಕವಾಗಿರುತ್ತವೆ.

### ಎಲ್ಲಿ ಇಡುತ್ತಾರೆ?

- ವಿಮಾನದ ಹಿಂಭಾಗದ ತುದಿಯಲ್ಲಿ ಅವನ್ನು ಇಡುತ್ತಾರೆ. ಒಂದು ವೇಳೆ ದುರಂತ ಸಂಭವಿಸಿ ವಿಮಾನ ಸುಟ್ಟು ಹೋದರೂ ಆ ಭಾಗ ಹಾನಿಗೆ ಒಳಗಾಗುವ ಸಂಭವ ವಿರಳ. ಹಾಗಾಗಿ ಅಲ್ಲಿ ಬ್ಲಾಕ್ ಬಾಕ್ಸ ಗಳನ್ನು ಇಡುವುದು ರೂಢಿ.

### ಎಷ್ಟು ದತ್ತಾಂಶವನ್ನು ಸಂಗ್ರಹಿಸಿಟ್ಟುಕೊಳ್ಳಬಹುದು?

- ಕನಿಷ್ಠ 25 ಗಂಟೆಗಳಷ್ಟು ಅವಧಿಯ ಮಾತನ್ನು ಅದು ದಾಖಲಿಸಿಟ್ಟು ಕೊಳ್ಳಬಲ್ಲದು. ಕಾಕ್ ಪಿಟ್ ಧ್ವನಿಮುದ್ರಣ ಸಾಧನವು ಕನಿಷ್ಠ ಎರಡು ತಾಸಿನಷ್ಟು ಧ್ವನಿಮಾಹಿತಿಯನ್ನು ಅಡಕ ಮಾಡಿಕೊಳ್ಳಬಲ್ಲದು.
- ಹಳೆಯ ದತ್ತಾಂಶವನ್ನು ಆಗಾಗ ಅಳಿಸಿ, ಹೊಸ ಧ್ವನಿಯನ್ನು ಮುದ್ರಿಸಿಕೊಳ್ಳಲಾಗುತ್ತದೆ.

### ಅವು ಕಪ್ಪು ಬಣ್ಣವಾಗಿರುತ್ತವೆಯೇ?

- ಇಲ್ಲ, ಅವುಗಳು ಹೊಳೆಯುವ ಕಿತ್ತಳೆ ಬಣ್ಣದ್ದಾಗಿರುತ್ತವೆ. ವಿಮಾನ ದುರಂತಕ್ಕೆ ಈಡಾದಲ್ಲಿ ಅದು ಸುಲಭವಾಗಿ ಕಣ್ಣಿಗೆ ಬೀಳಲಿ ಎಂಬ ಕಾರಣಕ್ಕೆ ಕಿತ್ತಳೆ ಬಣ್ಣ ಹಚ್ಚಲಾಗಿರುತ್ತದೆ.
- ಬ್ಲಾಕ್ ಬಾಕ್ಸ್ ಎಂಬ ಹೆಸರು ಬಂದದ್ದು ಹೇಗೆ ಎಂಬುದು ಇನ್ನೂ ತಿಳಿದುಬಂದಿಲ್ಲ.

### ನಾಶಪಡಿಸುವುದು ಸಾಧ್ಯವೇ?

- ತುಕ್ಕು ಹಿಡಿಯದಂತ ಸ್ಟೇನ್ ಸ್ಟೀಲ್ ಕವಚದಲ್ಲಿ ಅದನ್ನು ಭದ್ರವಾಗಿ ಇಡಲಾಗುತ್ತದೆ.
- 3,400 ಜಿನಷ್ಟು (ಗೆವಿಟೇಷನಲ್ ಆಕ್ಸಲರೇಷನ್ ಯೂನಿಟ್ ) ಪರಿಣಾಮ 1,100 ಡಿಗ್ರಿ ಸೆಲ್ಸಿಯಸ್‌ನಷ್ಟು ತಾಪಮಾನ, ನೀರಿನಾಳದ 6 ಸಾವಿರ ಮೀಟರ್‌ನಷ್ಟು ಒತ್ತಡ ಎಲ್ಲವನ್ನೂ ಬ್ಲಾಕ್ ಬಾಕ್ಸ್ ತಾಳಿಕೊಳ್ಳಬಲ್ಲದು. ಹಾಗಾಗಿ ಬ್ಲಾಕ್ ಬಾಕ್ಸ್ ನಾಶವಾಗುವ ಸಂಭವನೀಯತೆ ತುಂಬಾ ಕಡಿಮೆ.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

## MISCELLANEOUS

### 1. ಅಂತಾರಾಷ್ಟ್ರೀಯ ಆವರ್ತಕ ಕೋಷ್ಟಕ ವರ್ಷ

#### ಪ್ರಮುಖ ಸುದ್ದಿ

- ವಿಶ್ವಸಂಸ್ಥೆ '2019'ರ ವರ್ಷವನ್ನು ಅಂತಾರಾಷ್ಟ್ರೀಯ ಆವರ್ತಕ ಕೋಷ್ಟಕ ವರ್ಷ ಎಂದು ಘೋಷಿಸಿದೆ. ಆವರ್ತಕ ಕೋಷ್ಟಕವು ರಸಾಯನ ಶಾಸ್ತ್ರದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಇದನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ 'ಮೆಂಡಲೀವ್' ಕೋಷ್ಟಕ ರೂಪಿಸಿ 150 ವರ್ಷಗಳಾಗಿವೆ.

### ಮುಖ್ಯ ಅಂಶಗಳು

- ಸಂಶೋಧನೆ ಹಳೆಯದಾಗಿದ್ದರೂ ಎಲ್ಲ ಕಾಲಕ್ಕೂ ಉಪಯುಕ್ತವಾಗಿದೆ. ಹೀಗಾಗಿ ವಿಶ್ವ ಸಂಸ್ಥೆ 2019ನ್ನು ಅಂತಾರಾಷ್ಟ್ರೀಯ ಆವರ್ತಕ ಕೋಷ್ಟಕ ವರ್ಷವನ್ನಾಗಿ ಘೋಷಿಸಿದೆ. ವಿಶ್ವ ಸಂಸ್ಥೆಯ 72ನೇ ಸಾಮಾನ್ಯ ಸಭೆಯಲ್ಲಿ ಈ ಆಚರಣೆ ಬಗ್ಗೆ ತೀರ್ಮಾನ ಕೈಗೊಳ್ಳಲಾಗಿದೆ. ಜತೆಗೆ ರಂಜಕವನ್ನು ಕಂಡುಹಿಡಿದು 350 ವರ್ಷಗಳು ಸಂದಿವೆ.

### ಆವರ್ತಕ ಕೋಷ್ಟಕದ ಮಹತ್ವ ಏನು?

- ಆವರ್ತ ಕೋಷ್ಟಕವು ಮೂಲಧಾತುಗಳನ್ನು ಕ್ರಮಾವಾಗಿ ಪ್ರದರ್ಶಿಸುವ ಒಂದು ವಿನ್ಯಾಸ. ಪ್ರಸಕ್ತವಾಗಿ ಉಪಯೋಗದಲ್ಲಿರುವ ಕೋಷ್ಟಕವನ್ನು ಮೊದಲು ರಷ್ಯಾದ ರಸಾಯನಶಾಸ್ತ್ರ ವಿಜ್ಞಾನಿ ಡಿಮಿಟ್ರಿ ಮೆಂಡಲೀವ್ ರಚಿಸಿದನು. ಮೂಲಧಾತುಗಳ ಗುಣಧರ್ಮಗಳು ನಿರ್ದಿಷ್ಟ ರೀತಿಯಲ್ಲಿ ಬದಲಾಗುವುದರಿಂದ ಅವುಗಳನ್ನು ಗುಂಪುಗಳಾಗಿ ಮತ್ತು ಆವರ್ತಗಳಾಗಿ ವಿಂಗಡಿಸಲಾಗುತ್ತವೆ.
- ಆವರ್ತಕ ಕೋಷ್ಟಕವು ನಮ್ಮ ಸುತ್ತಲಿರುವ ಆಮ್ಲಜನಕ, ಜಲಜನಕ ಸೇರಿದಂತೆ 118 ಮೂಲ ವಸ್ತುಗಳ ಬಗ್ಗೆ ನಿಖರವಾದ ಮಾಹಿತಿ ನೀಡುತ್ತದೆ. ಜತೆಗೆ ಭೌತಶಾಸ್ತ್ರ, ಜೀವಶಾಸ್ತ್ರದ ಶಾಖೆಗಳಿಗೆ ಇದು ದಿಕ್ಸೂಚಿ. ವಿಶ್ವದಲ್ಲಿನ ಎಲ್ಲ ವಸ್ತುಗಳ ರಚನೆ, ಗುಣ ವಿಶೇಷಗಳನ್ನು ಅರಿಯಲು ಇದು ಸಹಾಯಕಾರಿ. ಆವರ್ತ ಕೋಷ್ಟಕವಿಲ್ಲದೆ ರಸಾಯನ ಶಾಸ್ತ್ರ ಕಲಿಕೆ ಅಪೂರ್ಣ ಎನ್ನುವ ಮಟ್ಟಿಗೆ ಇದು ವಿಜ್ಞಾನವನ್ನು ಆವರಿಸಿದೆ.
- ಇದೇ ಕೋಷ್ಟಕದ ಆಧಾರದ ಮೇಲೆ ಇತ್ತೀಚೆಗೆ ನಾಲ್ಕು ಹೊಸ ಅತ್ಯಂತ ಭಾರ ಮೂಲ ವಸ್ತುಗಳನ್ನು(ಸೂಪರ್ ಹೆವಿ ಮೆಟಲ್ಸ್)ಆವಿಷ್ಕರಿಸಲಾಗಿದೆ. ಹೀಗಾಗಿ ವಿಶ್ವ ಸಂಸ್ಥೆ 2019 ನ್ನು ಅಂತಾರಾಷ್ಟ್ರೀಯ ವರ್ಷವನ್ನಾಗಿ ಆಚರಿಸಲು ನಿರ್ಧರಿಸಿದೆ. ಈ ನಿರ್ಣಯಕ್ಕೆ ಪ್ರಪಂಚದ 157 ಪ್ರಮುಖ ದೇಶಗಳು ಒಪ್ಪಿಗೆ ಸೂಚಿಸಿವೆ.

## 2. ಉಪ್ಪಿನ ಸತ್ಯಾಗ್ರಹ ಸ್ಮಾರಕ ಲೋಕಾರ್ಪಣೆ

### ಪ್ರಮುಖ ಸುದ್ದಿ

- ಗುಜರಾತ್‌ನ ದಂಡಿಯಲ್ಲಿ ಸ್ಥಾಪಿಸಿರುವ ರಾಷ್ಟ್ರೀಯ ಉಪ್ಪಿನ ಸತ್ಯಾಗ್ರಹ ಸ್ಮಾರಕ ಮತ್ತು ವಸ್ತು ಸಂಗ್ರಹಾಲಯವನ್ನು ಪ್ರಧಾನಿ ನರೇಂದ್ರ ಮೋದಿ ಅವರು ಮಹಾತ್ಮ ಗಾಂಧೀಜಿಯವರು ಹುತಾತ್ಮರಾದ 71ನೇ ವರ್ಷಾಚರಣೆ ನಿಮಿತ್ತ ದೇಶಕ್ಕೆ ಅರ್ಪಣೆ ಮಾಡಿದರು.

## ಮುಖ್ಯ ಅಂಶಗಳು

- ಸ್ಮಾರಕವು ಗಾಂಧೀಜಿ ಪ್ರತಿಮೆ ಮತ್ತು 1930ರಲ್ಲಿ ಗಾಂಧೀಜಿ ಅವರ ಜತೆಗೆ ಐತಿಹಾಸಿ ದಂಡಿ ಯಾತ್ರೆಯಲ್ಲಿ ಪಾಲ್ಗೊಂಡ 80 ಸತ್ಯಾಗ್ರಾಹಿಗಳ ಪ್ರತಿಮೆಗಳನ್ನು ಒಳಗೊಂಡಿದೆ. ಐತಿಹಾಸಿಕ ದಂಡಿಯಾತ್ರೆಯ ಕಥೆಗಳು ಮತ್ತು ವಿವಿಧ ಘಟನೆಗಳನ್ನು ವಿವರಿಸುವ 24 ಭಿತ್ತಿಚಿತ್ರಗಳನ್ನು ಇದು ಹೊಂದಿದೆ.

## ಉಪ್ಪಿನ ಸತ್ಯಾಗ್ರಹದ ಬಗ್ಗೆ

- ಬ್ರಿಟೀಷರು ತಮ್ಮ ಆಡಳಿತ ಅವಧಿಯಲ್ಲಿ ಉಪ್ಪಿನ ಮೇಲೆ ವಿಧಿಸಿದ ಕರವನ್ನು ವಿರೋಧಿಸಿ ಮಹಾತ್ಮ ಗಾಂಧಿಯವರು ನಡೆಸಿದ ಸತ್ಯಾಗ್ರಹ ಚಳುವಳಿಯನ್ನು ಉಪ್ಪಿನ ಸತ್ಯಾಗ್ರಹ ಅಥವಾ ದಾಂಡಿ ಯಾತ್ರೆ ಎನ್ನಲಾಗುತ್ತದೆ.
- ಬ್ರಿಟೀಷರು ಸಾಮಾನ್ಯ ಜನರು ಬಳಸುವ ಉಪ್ಪಿನ ಮೇಲೆ ಕರ ವಿಧಿಸಿದ್ದರು. ಇದರಿಂದ ಬಂಡ ಹಣದಿಂದ ತಮ್ಮ ಬೊಕ್ಕಸ ತುಂಬಿಕೊಳ್ಳುತ್ತಿದ್ದರು. ಸಮುದ್ರ ತೀರದಲ್ಲಿದ್ದ ಜನರಿಗೂ ತಾವಾಗಿ ಉಪ್ಪು ತಯಾರಿಸಲು ಬಿಡುತ್ತಿರಲಿಲ್ಲ. ಬದಲಾಗಿ ಉಪ್ಪನ್ನು ಬ್ರಿಟೀಷರಿಂದಲೇ ಪಡೆಯಬೇಕಿತ್ತು. ಇದನ್ನು ತಿಳಿದ ಮಹಾತ್ಮ ಗಾಂಧೀಜಿ ಪ್ಪಿನ ಕರವನ್ನು ತಮ್ಮ ಅಹಿಂಸಾತ್ಮಕ ಚಳುವಳಿಯ ಕೇಂದ್ರ ಬಿಂದುವನ್ನಾಗಿಸಿ ತಮ್ಮ ಚಳುವಳಿಯನ್ನು ನಡೆಸಲು ನಿರ್ಧರಿಸಿದರು. ಪ್ರತಿಯೊಬ್ಬ ಸಾಮಾನ್ಯ ವ್ಯಕ್ತಿಯು ಉಪ್ಪಿನ ಮೇಲಿನ ಕರದಿಂದ ಪ್ರಭಾವಿತನಾಗಿದ್ದರಿಂದ ಇದರ ವಿರುದ್ಧ ಪ್ರತಿಭಟಿಸುವುದು ಒಂದು ಅತ್ಯಂತ ಯಶಸ್ವಿ ಚಳುವಳಿಯಾಯಿತು.
- ಉಪ್ಪಿನ ಮೇಲಿನ ಕರವನ್ನು ವಿರೋಧಿಸಿ, ಮಹಾತ್ಮ ಗಾಂಧಿಯವರು ತಮ್ಮ ಅನುಯಾಯಿಗಳೊಡನೆ, ಹಾಗು ಜನರೊಂದಿಗೆ ಸಬರಮತಿ ಆಶ್ರಮದಿಂದ ಸಮುದ್ರ ತಟದಲ್ಲಿರುವ ದಾಂಡಿಯವರೆಗಿನ 240ಮೈಲಿಗಳನ್ನು ಕಾಲ್ನಡಿಗೆಯಲ್ಲಿ ಕ್ರಮಿಸಿದರು. ಇಲ್ಲಿ ಈ ಕರದ ವಿರೋಧದ ಸಂಕೇತವಾಗಿ ನಿಬಂಧನೆಯ ವಿರುದ್ಧವಾಗಿ ಉಪ್ಪನ್ನು ತಯಾರಿಸಿದರು. ಈ ಚಳುವಳಿಯು 1930ನೇ ಇಸವಿಯ ಮಾರ್ಚ್ 12 ರಿಂದ ಏಪ್ರಿಲ್ ೬ರವರಗೆ ನಡೆಯಿತು.ಈ ನಡಿಗೆಯ 23 ದಿನಗಳಲ್ಲಿ ಸಹಸ್ರಾರು ಸತ್ಯಾಗ್ರಹಿಗಳು ದಾರಿಯುದ್ದಕ್ಕೂ ಸೇರಿದರು. ನಾಲ್ಕು ಜಿಲ್ಲೆಗಳು ಮತ್ತು ೪೮ ಹಳ್ಳಿಗಳ ಮೂಲಕ ಹಾದು ದಾಂಡಿ ತಲುಪಿದರು. ನಂತರ ಗಾಂಧೀಜಿ ಸ್ವಯಂ ಆಗಿ ಉಪ್ಪು ತಯಾರಿಸಿದರು.
- ಓವರಿಂದ ಪ್ರೇರಿತರಾದ ಜನ ದೇಶವ್ಯಾಪಿಯಾಗಿ ತಾವೇ ಉಪ್ಪನ್ನು ತಯಾರಿಸಿದರು. ಜೊತೆಗೆ ಬ್ರಿಟಿಷ್ ವಸ್ತುಗಳನ್ನು ಭಾರತೀಯರು ಕೊಳ್ಳುವುದನ್ನು ನಿಲ್ಲಿಸಿದರು. ಇದರಿಂದ ಸಿಟ್ಟಿಗೆದ್ದ ಬ್ರಿಟೀಷರು ಗಾಂಧಿಜಿಯವರನ್ನು ಮಧ್ಯರಾತ್ರಿ ನಿದ್ರೆ ಮಾಡುವ ಸಂದರ್ಭದಲ್ಲಿ ಬಂಧಿಸಿದರು. ಇಷ್ಟರಲ್ಲಾಗಲೇ ಉಪ್ಪಿನ ಸತ್ಯಾಗ್ರಹ ವಿಶ್ವದಾದ್ಯಂತ ಜನಪ್ರಿಯತೆ ಗಳಿಸಿದರಿಂದ ಮಹಾತ್ಮ ಗಾಂಧೀಜಿಯವರನ್ನು ಬಿಡುಗಡೆ ಮಾಡಲಾಯಿತು. ಮುಂದೆ ಗಾಂಧೀಜಿ ಸ್ವಾತಂತ್ರ್ಯ ಸಂಗ್ರಾಮದ ಮುಂದಾಳತ್ವ ವಹಿಸಿದರು.

## 3. ಗಂಗಾ ಎಕ್ಸ್‌ಪ್ರೆಸ್‌ವೇ

### ಪ್ರಮುಖ ಸುದ್ದಿ

- ಕುಂಭಮೇಳದಲ್ಲಿ ಇದೇ ಮೊದಲ ಬಾರಿಗೆ ಸಚಿವ ಸಂಪುಟ ಸಭೆ ನಡೆಸಿದ ಉತ್ತರ ಪ್ರದೇಶ ಸರ್ಕಾರ, ವಿಶ್ವದ ಅತಿ ಉದ್ದದ ಗಂಗಾ ಎಕ್ಸ್‌ಪ್ರೆಸ್ ವೇ ಯೋಜನೆ ಘೋಷಿಸಿದೆ.

### ಮುಖ್ಯ ಅಂಶಗಳು

- ಮೀರತ್-ಪ್ರಯಾಗ್‌ರಾಜ್ ನಡುವೆ ಸಂಪರ್ಕ ಕಲ್ಪಿಸುವ 600 ಕಿ.ಮೀ ಉದ್ದದ 'ಗಂಗಾ ಎಕ್ಸ್‌ಪ್ರೆಸ್‌ವೇ' ನಿರ್ಮಾಣಕ್ಕೆ ಸಂಪುಟ ಅನುಮೋದನೆ ನೀಡಿದೆ.ಆರಂಭದಲ್ಲಿ ಚತುಷ್ಪಥ, ನಂತರದಲ್ಲಿ ಷಟ್ಪಥಕ್ಕೆ ವಿಸ್ತರಿಸವ ಅವಕಾಶ ಕಲ್ಪಿಸಲಾಗುತ್ತದೆ.
- ವಿಶ್ವದ ಅತಿ ಉದ್ದದ ಎಕ್ಸ್‌ಪ್ರೆಸ್‌ವೇ ಎಂಬ ಹಿರಿಮೆಗೆ ಇದು ಪಾತ್ರವಾಗಲಿದೆ .
- ಮಾರ್ಗದಲ್ಲಿನ ಪ್ರಮುಖ ನಗರಗಳು-ಅಮ್ರೋಹಾ, ಬುಲಂದ್‌ಶಹರ್, ಬದೌನ್,ಶಹಜಹಾನ್‌ಪುರ, ಕನೌಜ್, ಉನ್ನಾವೊ, ರಾಯ್‌ಬರೇಲಿ, ಪ್ರತಾಪ್‌ಗಢ

## 4. ಚಲನ ಚಿತ್ರ ಕೃತಿಚೌರ್ಯ ಮತ್ತು ಕಾಪಿರೈಟ್ ಉಲ್ಲಂಘನೆ ನಿಯಂತ್ರಣ.

### ಪ್ರಮುಖ ಸುದ್ದಿ

- ಚಲನಚಿತ್ರಗಳನ್ನು ಅನಧಿಕೃತವಾಗಿ ಕ್ಯಾಮ್ ಕಾರ್ಡ್ಡಿಂಗ್ ಮಾಡುವುದಕ್ಕಾಗಿ ಮತ್ತು ಚಲನ ಚಿತ್ರ ನಕಲುಗಳಿಗೆ ಸಂಬಂಧಿಸಿದಂತೆ ಇರುವ ಸಿನೆಮಾಟೋಗ್ರಾಫಿ ಕಾಯ್ದೆ , 1952 ನ್ನು ಉಲ್ಲಂಘಿಸುವವರಿಗಾಗಿ ಇರುವ ದಂಡನಾ ಪ್ರಸ್ತಾವಗಳಲ್ಲಿ ಮೂರು ವರ್ಷ ಜೈಲು ಶಿಕ್ಷೆ ಅಥವಾ 10 ಲಕ್ಷ ರೂ. ದಂಡ ಅಥವಾ ಈ ಎರಡನ್ನೂ ವಿಧಿಸುವಂತೆ ಅವಕಾಶ ಒದಗಿಸುವ ತಿದ್ದುಪಡಿಗೆ ಸಂಪುಟ ಅನುಮೋದನೆ.

### ಮುಖ್ಯ ಅಂಶಗಳು

- 1952 ರ ಸಿನೆಮಾಟೋಗ್ರಾಫಿ ಕಾಯ್ದೆಯನ್ನು ತಿದ್ದುಪಡಿ ಮಾಡುವುದಕ್ಕಾಗಿ ವಾರ್ತಾ ಮತ್ತು ಪ್ರಸಾರ ಸಚಿವಾಲಯವು ಸಿನೆಮಾಟೋಗ್ರಾಫಿ ವಿಧೇಯಕ ,2019 ನ್ನು ಮಂಡಿಸುವುದಕ್ಕೆ ಕೇಂದ್ರ ಸಂಪುಟವು ತನ್ನ ಅನುಮೋದನೆ ನೀಡಿದೆ. ಈ ವಿಧೇಯಕವು ಚಲನಚಿತ್ರಗಳ ಚೌರ್ಯ, ನಕಲು ಮಾಡುವಿಕೆಯನ್ನು ತಡೆಯುವ, ಅನಧಿಕೃತ ಕ್ಯಾಮ್ ಕಾರ್ಡಿಂಗ್ ಮತ್ತು ಚೌರ್ಯ ಮಾಡುವುದಕ್ಕೆ ದಂಡನಾ ಪ್ರಸ್ತಾವನೆಗಳನ್ನು ಅಳವಡಿಸಿಕೊಳ್ಳುವುದರ ಮೂಲಕ ತಡೆಯುವ ಉದ್ದೇಶವನ್ನು ಒಳಗೊಂಡಿದೆ.

### ವಿವರಗಳು:

ಚಲನ ಚಿತ್ರ ನಕಲು ಹಾವಳಿಯನ್ನು ತಡೆಗಟ್ಟುವುದಕ್ಕಾಗಿ ತಿದ್ದುಪಡಿಗಳು ಈ ಅವಕಾಶಗಳನ್ನು ಒದಗಿಸುತ್ತವೆ:

- ಅನಧಿಕೃತ ರೆಕಾರ್ಡಿಂಗ್ ಪ್ರತಿಬಂಧಿಸಲು ಹೊಸ ಸೆಕ್ಷನ್ 6 AA ಸೇರ್ಪಡೆ
- ಸಿನೆಮಾಟೋಗ್ರಾಫ್ ಕಾಯ್ದೆ 1952 ರ ಸೆಕ್ಷನ್ 6 A ಬಳಿಕ ಈ ಕೆಳಗಿನ ಸೆಕ್ಷನ್ ಅನ್ನು ಸೇರ್ಪಡೆ ಮಾಡಲಾಗುವುದು. 6 AA. : " ಆದಾಗ್ಯೂ ಹಾಲಿ ಜಾರಿಯಲ್ಲಿರುವ ಯಾವುದೇ ಕಾನೂನು ಅನ್ವಯ ಲೇಖಕರ ಲಿಖಿತ ಅನುಮತಿ ಇಲ್ಲದೆ ಯಾವುದೇ ದೃಶ್ಯ –ಶ್ರಾವ್ಯ ಸಲಕರಣೆಯನ್ನು ಗೊತ್ತಿದ್ದೂ ಅದನ್ನು ಚಲನ ಚಿತ್ರದ ಪ್ರತಿಯನ್ನು ಅಥವಾ ಅದರ ಭಾಗವನ್ನು ವರ್ಗಾಯಿಸುವುದಕ್ಕೆ, ಪ್ರಸಾರ ಮಾಡುವುದಕ್ಕೆ ಅಥವಾ ಆ ಕೃತ್ಯಕ್ಕೆ ದುಷ್ಪ್ರೇರಣೆ ನೀಡಲು ಅವಕಾಶ ಇಲ್ಲ. "
- ಲೇಖಕರು ಎಂಬ ಪದದ ವಿವರಣೆ ಕಾಪಿ ರೈಟ್ ಕಾಯ್ದೆ 1957 ರ ಸೆಕ್ಷನ್ 2 ರ ನಿಬಂಧನೆ (d) ಯಲ್ಲಿ ವ್ಯಕ್ತಪಡಿಸಿದಂತೆ ಇರತಕ್ಕದ್ದು.
- ಸೆಕ್ಷನ್ 7 ಕ್ಕೆ ತಿದ್ದುಪಡಿಯನ್ನು ಸೆಕ್ಷನ್ 6 AA ಯ ಪ್ರಸ್ತಾವನೆಗಳನ್ನು ಉಲ್ಲಂಘಿಸಿದಲ್ಲಿ ದಂಡನಾ ಪ್ರಸ್ತಾವನೆಗಳನ್ನು ತರಲು ಮಾಡಲಾಗಿದೆ. : ಪ್ರಮುಖ ಕಾಯ್ದೆಯ ಸೆಕ್ಷನ್ 7 ರಲ್ಲಿ , ಉಪ ಸೆಕ್ಷನ್ 1 ರ ಬಳಿಕ ಈ ಕೆಳಗಿನ ಉಪಸೆಕ್ಷನ್ (1 A ) ಯನ್ನು ಸೇರಿಸಿಕೊಳ್ಳತಕ್ಕದ್ದು. :
- "ಯಾವುದೇ ವ್ಯಕ್ತಿಯು ಸೆಕ್ಷನ್ 6 AA ಯ ಪ್ರಸ್ತಾವನೆಗಳನ್ನು ಉಲ್ಲಂಘಿಸಿದಲ್ಲಿ , ಆ ವ್ಯಕ್ತಿಗೆ 3 ವರ್ಷಕ್ಕೆ ವಿಸ್ತರಿಸಬಹುದಾದ ಅವಧಿಯ ಸೆರೆ ವಾಸ ಅಥವಾ 10 ಲಕ್ಷ ರೂ. ಗಳವರೆಗೆ ದಂಡ ಇಲ್ಲವೇ ಈ ಎರಡನ್ನೂ ವಿಧಿಸಬಹುದಾಗಿದೆ"
- ಈ ಪ್ರಸ್ತಾವಿತ ತಿದ್ದುಪಡಿಗಳು ಉದ್ಯಮದ ಆದಾಯವನ್ನು ಹೆಚ್ಚಿಸುವುದಲ್ಲದೆ, ಉದ್ಯೋಗ ಸೃಷ್ಟಿಗೂ ಉತ್ತೇಜನ ಕೊಡಲಿವೆ, ಮತ್ತು ಭಾರತದ ರಾಷ್ಟ್ರೀಯ ಐ.ಪಿ. ನೀತಿಯ ಪ್ರಮುಖ ಉದ್ದೇಶಗಳನ್ನು ಈಡೇರಿಸಲಿವೆ ಹಾಗು ಕೃತಿಚೌರ್ಯ ಮತ್ತು ಆನ್ ಲೈನ್ ಸಾಮಗ್ರಿಗಳ ಅತಿಕ್ರಮಣ ವಿರುದ್ದ ಪರಿಹಾರ ಒದಗಿಸಲಿವೆ.

ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

**ಹಿನ್ನೆಲೆ:**

- ಸಿನೆಮಾ ಮಾಧ್ಯಮ , ಅದರೊಂದಿಗೆ ಅಡಕಗೊಂಡಿರುವ ಸಲಕರಣೆಗಳು ಮತ್ತು ತಂತ್ರಜ್ಞಾನ ಮತ್ತು ಅದರ ಪ್ರೇಕ್ಷಕರು , ಕೇಳುಗರು ಕಾಲಾನುಕ್ರಮದಲ್ಲಿ ಗಮನಾರ್ಹ ಬದಲಾವಣೆಗೆ ಒಳಪಟ್ಟಿದ್ದಾರೆ. ಮಾಧ್ಯಮ ಮತ್ತು ಮನರಂಜನಾ ಕ್ಷೇತ್ರದಲ್ಲಿ ಟಿ.ವಿ. ವಾಹಿನಿಗಳ ಪ್ರವೇಶದಿಂದ ಮತ್ತು ಕೇಬಲ್ ಜಾಲದಿಂದ ದೇಶಾದ್ಯಂತ ವ್ಯಾಪಕ ಬದಲಾವಣೆಗಳಾಗಿವೆ.
- ನವ ಡಿಜಿಟಲ್ ತಂತ್ರಜ್ಞಾನದ ಉದಯವು ಕೃತಿ ಚೌರ್ಯ, ನಕಲು ಹಾವಳಿಯ ಆತಂಕವನ್ನೂ ಉಂಟು ಮಾಡಿರುವುದಲ್ಲದೆ , ಅಂತರ್ಜಾಲದಲ್ಲಿ ಚಲನಚಿತ್ರಗಳ ಕೃತಿಚೌರ್ಯದ ಆವೃತ್ತಿಯನ್ನು ಬಿಡುಗಡೆ ಮಾಡುವುದಕ್ಕೂ ಅವಕಾಶ ನೀಡುತ್ತಿರುವುದರಿಂದ ಚಲನಚಿತ್ರ ಉದ್ಯಮ ಮತ್ತು ಸರಕಾರದ ಬೊಕ್ಕಸಕ್ಕೆ ನಷ್ಟವಾಗುತ್ತಿದೆ.
- ಚಲನ ಚಿತ್ರ ಉದ್ಯಮ ಬಹಳ ಧೀರ್ಘ ಕಾಲದಿಂದ , ಕ್ಯಾಮ್ ಕಾರ್ಡಿಂಗ್ ಮತ್ತು ನಕಲು ತಡೆಯಲು ಕಾನೂನು ತಿದ್ದುಪಡಿ ತರುವ ಬಗ್ಗೆ ಪರಿಶೀಲಿಸಬೇಕು ಎಂದು ಆಗ್ರಹಿಸುತ್ತಿತ್ತು. ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಮುಂಬಯಿಯಲ್ಲಿ 2019 ರ ಜನವರಿ 19 ರಂದು ಭಾರತೀಯ ಸಿನೆಮಾದ ರಾಷ್ಟ್ರೀಯ ವಸ್ತುಸಂಗ್ರಹಾಲಯ ಉದ್ಘಾಟನಾ ಸಮಾರಂಭದಲ್ಲಿ ಕ್ಯಾಮ್ ಕಾರ್ಡಿಂಗ್

ಹಾವಳಿ ಮತ್ತು ನಕಲು ತಡೆಗೆ ಕ್ರಮಕೈಗೊಳ್ಳುವ ಬಗ್ಗೆ ಭರವಸೆ ನೀಡಿದ್ದರು. ವಾರ್ತಾ ಮತ್ತು ಪ್ರಸಾರ ಸಚಿವಾಲಯವು ಈ ವಿಷಯವನ್ನು ಕೇಂದ್ರ ಸಂಪುಟದ ಪರಿಗಣನೆಗೆ ಮಂಡಿಸಿತ್ತು.

## 5. ವಿಶ್ವ ಕ್ಯಾನ್ಸರ್ ದಿನ

### ಪ್ರಮುಖ ಸುದ್ದಿ

- ಮನುಕುಲದ ಬಹುದೊಡ್ಡ ಶತ್ರುವಾಗಿರುವ ಕ್ಯಾನ್ಸರ್ ರೋಗದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲು ಪ್ರತಿ ವರ್ಷ ಫೆಬ್ರವರಿ 4ರಂದು ವಿಶ್ವ ಕ್ಯಾನ್ಸರ್ ದಿನವಾಗಿ ಆಚರಿಸಲಾಗುತ್ತದೆ.
- ಪ್ರತಿ ವರ್ಷ ಒಂದೊಂದು ಥೀಮ್ ಇಟ್ಟುಕೊಂಡು ಕ್ಯಾನ್ಸರ್ ದಿನವನ್ನು ಆಚರಿಸಲಾಗುತ್ತದೆ. ಈ ವರ್ಷ 'Iam And I will' ಎಂಬ ಧ್ಯೇಯವಾಕ್ಯದಡಿ ಆಚರಿಸಲಾಗುತ್ತಿದೆ.

### ಮುಖ್ಯ ಅಂಶಗಳು

- ಅಂತಾರಾಷ್ಟ್ರೀಯ ಕ್ಯಾನ್ಸರ್ ನಿಯಂತ್ರಣ ಸಂಘಟನೆಯು ವಿವಿಧ ಕ್ಯಾನ್ಸರ್ ಸೊಸೈಟಿಗಳು, ಸಂಶೋಧನಾ ಸಂಸ್ಥೆಗಳ ಜತೆಗೂಡಿ 1993ರಲ್ಲಿ ಸ್ವಿಡ್ಜರ್ ಲ್ಯಾಂಡ್ ನ ಜಿನೀವಾದಲ್ಲಿ 1933ರಲ್ಲಿ ವಿಶ್ವ ಕ್ಯಾನ್ಸರ್ ದಿನವನ್ನು ಆಚರಿಸುವ ಬಗ್ಗೆ ಯೋಜನೆ ರೂಪಿಸಿತು. ಮಾರಣಾಂತಿಕ ಕಾಯಿಲೆಯಾದ ಕ್ಯಾನ್ಸರ್ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಅದಕ್ಕಾಗಿ ವರ್ಷದಲ್ಲಿ ಒಂದು ದಿನ ಮೀಸಲಿಡಲು ನಿರ್ಧರಿಸಿತು.
- ಈ ಹಿನ್ನೆಲೆಯಲ್ಲಿ 2008ರಿಂದ ಪ್ರತಿ ವರ್ಷ ಫೆಬ್ರವರಿ 4ರಂದು ಜಾಗತಿಕ ಕ್ಯಾನ್ಸರ್ ದಿನ ಎಂದು ಆಚರಿಸಲಾಗುತ್ತದೆ.

ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ

### ಉದ್ದೇಶ :

- ಪ್ರಾರಂಭಿಕ ಹಂತದಲ್ಲಿಯೇ ರೋಗವನ್ನು ಪತ್ತೆ ಹಚ್ಚುವುದು ಮತ್ತು ಪರಿಣಾಮಕಾರಿ ಚಿಕಿತ್ಸೆ ನೀಡುವುದು .
- ಈ ಆಚರಣೆಯ ಮೂಲ ಉದ್ದೇಶ ಕ್ಯಾನ್ಸರ್ ನಮ್ಮ ಕೈ ಮೀರಿದ ರೋಗವಲ್ಲ ಎಂಬ ಸಂದೇಶವನ್ನು ಸಾರುವ ಉದ್ದೇಶ ಈ ಆಚರಣೆಯ ಹಿಂದೆ ಇದೆ.

### ಕ್ಯಾನ್ಸರ್‌ಗೆ ಕಾರಣ :

- ನಿರ್ದಿಷ್ಟ ಕಾರಣಗಳನ್ನು ಗುರುತಿಸಲು ಸಾಧ್ಯವಾಗದಿದ್ದರೂ ಹಲವು ಕಾರಣಗಳು ಸೇರಿ ಕ್ಯಾನ್ಸರ್ ಸಂಭವಿಸುತ್ತವೆ.
- (ಮಲ್ಟಿಫ್ಯಾಕ್ಟೋರಿಯಲ್) ಜೊತೆಗೆ ಪರಿಸರದಲ್ಲಿನ ಪರಿಸ್ಥಿತಿಗಳು(ಎನ್ವಿರಾನ್ಮೆಂಟಾಲ್ ಫ್ಯಾಕ್ಟರ್)ಮುಖ್ಯ ಕಾರಣ.
- ವಿಕಿರಣ, ಕೆಲವು ವೈರಸ್‌ಸೋಂಕುಗಳು, ಜೀವಕೋಶಗಳ ಕಾರ್ಯಪ್ರವೃತ್ತಿಯನ್ನು ಬದಲಿಸಿ ಕ್ಯಾನ್ಸರ್ ಕಾರಕಗಳನ್ನಾಗಿ ಮಾಡುತ್ತದೆ.

- ಇದರೊಂದಿಗೆ ವಯಸ್ಸು, ಲಿಂಗ, ಪರಿಸರ, ವಂಶಾವಳಿ ಮುಂತಾದವು ಕೂಡ ಕ್ಯಾನ್ಸರ್‌ಕಾರಕವಾಗಿ ಪರಿಣಮಿಸಬಹುದು.
- ತಂಬಾಕಿನ ಸೇವನೆಯಿಂದ ಹಿಡಿದು ಧೂಮಪಾನ, ಮದ್ಯಪಾನ, ತಪ್ಪು ಆಹಾರಪದ್ಧತಿಗಳು, ಎ ಹಾಗೂ ಸಿ. ವಿಟಮಿನ್ ಕೊರತೆ, ಆಹಾರದಲ್ಲಿ ಕೃತಕ ರಾಸಾಯನಿಕಗಳ ಹೆಚ್ಚುಹೆಚ್ಚು ಬಳಕೆ, ಬದಲಾದ ಜೀವನಶೈಲಿಯಿಂದ ಹೆಚ್ಚುತ್ತಿರುವ ಬೊಜ್ಜು ಹಾಗೂ ಹೆಚ್ಚಾಗುತ್ತಿರುವ ಹಾರ್ಮೋನು ಅಸಮತೋಲನ, ಹೆಚ್ಚುತ್ತಿರುವ ರಾಸಾಯನಿಕ ಸೌಂದರ್ಯ ವರ್ಧಕಗಳ ಬಳಕೆ ಹಾಗೂ ಸೂರ್ಯನ ಅತಿಯಾದ ಅಲ್ಟ್ರಾವೈಲೆಟ್ ಕಿರಣಗಳಿಗೆ ಹಾಗೂ ಇತರ ವಿಕಿರಣ ವಸ್ತುಗಳಿಗೆ ತೆರೆದುಕೊಳ್ಳುವುದು ಹೀಗೆ ಕ್ಯಾನ್ಸರ್‌ಗೆ ಹತ್ತುಹಲವು ಕಾರಣಗಳಿವೆ.

## 6. ಪೆಟ್ರೊಟೆಕ್ -2019

### ಪ್ರಮುಖ ಸುದ್ದಿ

- 13ನೇ ಅಂತಾರಾಷ್ಟ್ರೀಯ ತೈಲ ಮತ್ತು ಅನಿಲ ಸಮ್ಮೇಳನ ಪೆಟ್ರೊಟೆಕ್ 2019 ಇತ್ತೀಚಿಗೆ ಗ್ರೇಟರ್ ನೋಯ್ಡಾ ದಲ್ಲಿ ನಡೆಯಿತು.

### ಮುಖ್ಯ ಅಂಶಗಳು

### ಪೆಟ್ರೋಟೆಕ್ -2019 ಬಗ್ಗೆ

- ತೈಲ ಮತ್ತು ಅನಿಲ ಉದ್ಯಮದಲ್ಲಿ ವೀಕ್ಷಣೆ ವಿನಿಮಯ ಮತ್ತು ಜ್ಞಾನ, ಪರಿಣತಿ ಮತ್ತು ಅನುಭವಗಳನ್ನು ಹಂಚಿಕೊಳ್ಳಲು ಇಂಟರ್ನ್ಯಾಷನಲ್ ಆಯಿಲ್ & ಗ್ಯಾಸ್ ಕಾನ್ಫರೆನ್ಸ್ ಪೆಟ್ರೋಟೆಕ್ ಸರಣಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ತಜ್ಞರ ದ್ವೈವಾರ್ಷಿಕ ವೇದಿಕೆಯಾಗಿದೆ.
- ಕಳೆದ ಎರಡು ದಶಕಗಳಿಂದ ನಡೆಯುತ್ತಿದ್ದು , ಪೆಟ್ರೊಟೆಕ್ -2019 ಎಂಬುದು ಭಾರತೀಯ ಹೈಡ್ರೋಕಾರ್ಬನ್ ಸೆಕ್ಟರ್ನ ಬೆಳೆಯುತ್ತಿರುವ ಪಾಲ್ಗೊಳ್ಳುವಿಕೆಯೊಂದಿಗೆ ಪ್ರಮುಖ ಘಟನೆಯ 13 ನೇ ಆವೃತ್ತಿಯಾಗಿದೆ .
- ಪೆಟ್ರೋಲಿಯಂ ತಂತ್ರಜ್ಞಾನ, ಪರಿಶೋಧನೆ, ಕೊರೆಯುವಿಕೆ, ಉತ್ಪಾದನೆ ಮತ್ತು ಪ್ರಕ್ರಿಯೆ, ಸಂಸ್ಕರಣ, ಪೈಪ್ಲೈನ್ ಸಾಗಣೆ, ಪೆಟ್ರೋಕೆಮಿಕಲ್ಸ್, ನೈಸರ್ಗಿಕ ಅನಿಲ, ಎಲ್‌ಎನ್‌ಜಿ, ಪೆಟ್ರೋಲಿಯಂ ವ್ಯಾಪಾರ, ಅರ್ಥಶಾಸ್ತ್ರ, ಕಾನೂನು ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ, ಮಾರ್ಕೆಟಿಂಗ್‌ನಲ್ಲಿ ಬೆಳವಣಿಗೆಯ ಕ್ಷೇತ್ರಗಳನ್ನು ಅನ್ವೇಷಿಸಲು ಈವೆಂಟ್ ಉದ್ದೇಶಿಸಿದೆ.
- ಥೀಮ್: ಇನ್ನೋವೇಶನ್ ಮತ್ತು ಸಹಯೋಗ ಮೂಲಕ ಹೊಸ ಶಕ್ತಿ ಪ್ರಪಂಚ ಅನ್ನು ರೂಪಿಸುವುದು.

## 7. ಭಾರತೀಯ ಅರಣ್ಯ ಸೇವೆಗೆ ಮರುನಾಮಕರಣ ಪ್ರಸ್ತಾವನೆ

### ಪ್ರಮುಖ ಸುದ್ದಿ

- ದೇಶದ ನಾಗರಿಕ ಸೇವೆಗಳ ಪೈಕಿ ಭಾರತೀಯ ಅರಣ್ಯ ಸೇವೆಯೂ ಒಂದು.ಇದರ ಮರುನಾಮಕರಣಕ್ಕೆ ಚಿಂತನೆ ನಡೆದಿದ್ದು, ಈ ಕುರಿತ ಪ್ರಸ್ತಾವನೆಯೊಂದು ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿದೆ.

### ಮುಖ್ಯ ಅಂಶಗಳು

- ಭಾರತೀಯ ಅರಣ್ಯ ಸೇವೆ(ಐಎಫ್‌ಎಸ್)ಯನ್ನು 'ಭಾರತೀಯ ಅರಣ್ಯ ಮತ್ತು ಬುಡಕಟ್ಟು ಸೇವೆ' (ಐಎಫ್‌ಟಿಎಸ್). ಎಂದು ಬದಲಾಯಿಸುವ ನಿಟ್ಟಿನಲ್ಲಿ ಅಂತರ್, ಸಚಿವಾಲಯ ಸಮಾಲೋಚನೆಗೆ ಕೇಂದ್ರ ಸಿಬ್ಬಂದಿ ಮತ್ತು ಸಾರ್ವಜನಿಕ ಅಹವಾಲು ಮತ್ತು ಪಿಂಚಣಿ ಸಚಿವಾಲಯ ಟಿಪ್ಪಣಿಯನ್ನು ರವಾನಿಸಿದೆ.
- ಈ ಸಮಾಲೋಚನಾ ಟಿಪ್ಪಣಿಯಲ್ಲಿ, ಬುಡಕಟ್ಟು ಮತ್ತು ಅರಣ್ಯ ವಾಸಿಗಳ ಭಾವನೆಗಳನ್ನು ಅರ್ಥೈಸಿಕೊಂಡು ಕೆಲಸ ಮಾಡುವಂತೆ ಅರಣ್ಯ ಸೇವೆ ಅಧಿಕಾರಿಗಳನ್ನು ಸೂಕ್ಷ್ಮಗ್ರಾಹಿಗಳನ್ನಾಗಿಸಲು ತರಬೇತಿ ನೀಡುವ ವಿಚಾರವೂ ಇದೆ. "

### ಶಿಫಾರಸಿನ ಹಿನ್ನೆಲೆಯ ಅಂಶಗಳು:

- ಬುಡಕಟ್ಟು ಜನ ಮತ್ತು ಕಾಡಿನ ನಡುವಿನ ನಂಟು, ಅರಣ್ಯ ಪರಿಸರವನ್ನು ಒಂದು ಸಂಪನ್ಮೂಲ ನೆಲೆ ಎಂಬ ವಿಚಾರವನ್ನು ಪ್ರಮುಖವೆಂದು ಮನಗಾಣಬೇಕು.
- ಇದಕ್ಕಾಗಿ ಭಾರತೀಯ ಅರಣ್ಯ ಸೇವೆ ಎಂಬುದನ್ನು ಭಾರತೀಯ ಅರಣ್ಯ ಮತ್ತು ಬುಡಕಟ್ಟು ಸೇವೆ ಎಂದು ಮರುನಾಮಕರಣ ಮಾಡಬೇಕು.
- ಇದಕ್ಕೆ ಪೂರಕವಾಗಿ ಆಡಳಿತಾತ್ಮಕವಾಗಿ ಅರಣ್ಯ ಸೇವೆ ಮತ್ತು ಬುಡಕಟ್ಟು ಕಲ್ಯಾಣ ಆಡಳಿತವನ್ನು ವಿಲೀನಗೊಳಿಸಬೇಕು.
- ಅರಣ್ಯ ನಿರ್ವಹಣೆಗೆ ಬುಡಕಟ್ಟು ಜನರ ಭಾಗೀದಾರಿಕೆಗೆ ಉತ್ತೇಜನ ನೀಡಬೇಕು ಮತ್ತು ಅದನ್ನು ಖಾತ್ರಿಗೊಳಿಸುವ ಕೆಲಸ ಆಗಬೇಕು.
- ಬುಡಕಟ್ಟು ಸಮುದಾಯದ ಅಗತ್ಯತೆಗಳಿಗೆ ಹೆಚ್ಚಿನ ಸೂಕ್ಷ್ಮ ಸಂವೇದನೆಯನ್ನು ಅರಣ್ಯ ಇಲಾಖೆಯಲ್ಲಿ ಮರುನಾಮಕರಣ ಪ್ರಕ್ರಿಯೆ ಸೃಷ್ಟಿಸಲಿದೆ.

### ಸಂಕ್ಷಿಪ್ತ ಇತಿಹಾಸ

- ಭಾರತದ ವಿಶಾಲವಾದ ಅರಣ್ಯವನ್ನು ರಕ್ಷಿಸಲು, ನೈಸರ್ಗಿಕ ಸಂಪನ್ಮೂಲಗಳನ್ನು ನಿರ್ವಹಿಸಲು ಮತ್ತು ಇಂಪೀರಿಯರ್ ಅರಣ್ಯ ಇಲಾಖೆಯ ವ್ಯವಹಾರಗಳನ್ನು ಆಯೋಜಿಸಲು 1867ರಲ್ಲಿ ಅರಣ್ಯ ಸೇವೆ ಸ್ಥಾಪಿಸಲ್ಪಟ್ಟಿತು.
- 1935ರ ಭಾರತ ಸರ್ಕಾರ ಕಾಯ್ದೆ ಅನ್ವಯ ಅರಣ್ಯ ಪ್ರದೇಶವನ್ನು "ಪ್ರಾಂತೀಯ ಪಟ್ಟಿ' (ಪ್ರಾವಿನ್ಶಿಯಲ್ ಲಿಸ್ಟ್)ಗೆ ಸೇರಿಸಿದ ಮೇಲೆ ಇಂಪೀರಿಯಲ್ ಅರಣ್ಯ ಸೇವೆಗೆ ನೇಮಕಾತಿ ನಿಲ್ಲಿಸಲಾಯಿತು.

- 1966ರಲ್ಲಿ ಭಾರತ ಅರಣ್ಯ ಸೇವೆಯನ್ನು ಆಲ್ ಇಂಡಿಯಾ ಸರ್ವೀಸಸ್ ಆಕ್ಟ್ 1951 ರ ಪ್ರಕಾರ ಭಾರತದ ಮೂರು ಅಖಿಲ ಭಾರತ ಸೇವೆಯಲ್ಲಿ ಒಂದನ್ನಾಗಿ ಸೇರಿಸಿತು.
- ಅರಣ್ಯದ ವೈಜ್ಞಾನಿಕ ನಿರ್ವಹಣೆಗೆ ಅನುವು ಮಾಡಿಕೊಡುವ, ಮರದ ಉತ್ಪನ್ನಗಳನ್ನು ಸಮರ್ಥ ರೀತಿಯಲ್ಲಿ ಬಳಸಿಕೊಳ್ಳುವ ರಾಷ್ಟ್ರೀಯ ಅರಣ್ಯ ನೀತಿಯನ್ನು ಅನುಷ್ಠಾನಗೊಳಿಸುವ ಹೊಣೆಗಾರಿಕೆಯನ್ನು ಭಾರತೀಯ ಅರಣ್ಯ ಸೇವೆಗೆ ವಹಿಸಲಾಗಿದೆ.

IAS/KAS
ನಮ್ಮ ಐಎಎಸ್ ಅಕಾಡೆಮಿ
ನಿಮ್ಮೂರಿಂದ..... ಮಸ್ಸೂರಿಗೆ/ಮೈಸೂರಿಗೆ